ಸಂಪುಟ: 14 Volume | ಸಂಚಿಕೆ: 21 Issue | ಪುಟಗಳು 08 Pages | ಶುಕ್ರವಾರ 24 ಏಪ್ರಿಲ್ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಕಲಿಕೆ ವಿಷಯ ಬರೀ ತಿಳುವಳಿಕೆಯ ಮಟ್ಟದಲ್ಲಿ ಉಳಿಯದೆ ಹೆಚ್ಚು ಅರ್ಥಪೂರ್ಣ ಮಾಡಬಲ್ಲ ಮನುಷ್ಯನೊಬ್ಬ ಬೇಕು. ಆತನೇ ಕೋಚ್ ಅಥವಾ ಗುರು.

–ಪಿ. ಲಂಕೇಶ್

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

ಸೇವೆ ಕಲಿಕೆಗೆ ಎನ್‌ಎಸ್‌ಎಸ್ ಸಾಧನ 6
ಕೃಷಿ ಇಲಾಖೆಗೆ ರಾಜ್ಯ ಪ್ರಶಸ್ತಿ 7
ನಿವೇದಿತ: ಮತ್ತೊಮ್ಮೆ ಉತ್ತಮ ಫಲಿತಾಂಶ 8

## ಮಗನ ಸಂಭ್ರಮ ನೋಡದೇ ಸಾವು

**ಕಲಬುರಗಿ:** ಕುಟುಂಬದ ಸಂತೋಷದ ಕ್ಷಣವು ಕ್ಷಣಾರ್ಧದಲ್ಲೇ ದುರಂತದಲ್ಲಿ ಅಂತ್ಯಗೊಂಡಿದೆ. ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ನಡೆಯಲಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಮಗನ ಸಾಧನೆ ಕಣ್ತುಂಬಿಕೊಳ್ಳಲು ಬಂದಿದ್ದ ತಂದೆ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಉಜ್ಜೈನಿನಿಂದ ದೂರ ಪ್ರಯಾಣ ಮಾಡಿ ಬಂದಿದ್ದ ಶಿವಕುಮಾರ್ ಸಕ್ಸೇನಾ (57) ಅವರು ತಮ್ಮ ಪತ್ನಿ ಮಾಲತಿ ಸಕ್ಸೇನಾ ಅವರೊಂದಿಗೆ ಕಲಬುರಗಿಗೆ ತಲುಪಿದ್ದರು. ತಮ್ಮ ಮಗ ದಿವ್ಯಾಂಶು ಸಕ್ಸೇನಾ ಅವರ ಸಾಧನೆಯನ್ನು ಕಣ್ಣುಂಬಿಕೊಳ್ಳಲು ಬಹಳ ಉತ್ಸಾಹದಿಂದ ಬಂದಿದ್ದರು. ದಿವ್ಯಾಂಶು ಅವರು ಎರಡು ಚಿನ್ನದ ಪದಕಗಳನ್ನು ಗಳಿಸಿದ್ದು, ಕುಟುಂಬದಲ್ಲಿ ಸಂಭ್ರಮದ ವಾತಾವರಣ ನಿರ್ಮಾಣವಾಗಿತ್ತು.

## ರಥದ ಚಕ್ರಕ್ಕೆ ಸಿಲುಕಿ ಇಬ್ಬರಿಗೆ ಗಂಭೀರ



**ಬಸವಕಲ್ಯಾಣ:** ಬಸವೇಶ್ವರ ರಥೋತ್ಸವ ಸಂದರ್ಭದಲ್ಲಿ ರಥದ ಚಕ್ರಕ್ಕೆ ಸಿಲುಕಿ ಇಬ್ಬರಿಗೆ ಗಂಭೀರ ಗಾಯವಾಗಿದೆ. ಧನ್ನರಾಜ ಚಾ–ಕುರೆ ( 67) , ರಿಷಬ್ ಶಿವಾನಂದ (29) ಗಾಯಗೊಂಡವರು. ಧನರಾಜ್ ಚಾಕುರೆ ಎಂಬುವವರು ಎರಡು ಕಾಲು ಕಳೆದುಕೊಂಡಿದ್ದು ಚಿಕಿತ್ಸೆಗಾಗಿ ಕಲಬುರಗಿ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿದೆ. ಇವರು ಮೂಲತಃ ಮುಚಳಂಬ ಗ್ರಾಮದವರು.ಇನ್ನೊಬ್ಬ ವ್ಯಕ್ತಿ ರಿಷಬ್ ಶಿವಾನಂದ ಎಂಬ ವ್ಯಕ್ತಿಗೆ ಗಂಭೀರ ಗಾಯವಾಗಿ ಒಂದು ಕಾಲು ಕತ್ತರಿಸಿದೆ.ಇವರನ್ನು ಸೋಲಾಪುರ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿದೆ. ಇವರು ಬಸವಕಲ್ಯಾಣ ಕಾಳಿಗಲ್ಲಿ ನಿವಾಸಿ.ಇಬ್ಬರ ಆರೋಗ್ಯ ಸ್ಥಿತಿಯು ಚಿಂತಾಜನಕವಾಗಿದೆ.

## ಅಂತರಿಕ ಗುಣಮಟ್ಟ ಭರವಸೆ ಕೋಶ

**ಜೇವರ್ಗಿ:** ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತರಿಕ ಗುಣಮಟ್ಟ ಭರವಸೆ ಕೋಶ, ಉದ್ಯೋಗ ಕೋಶ ಹಾಗೂ ಬೆಂಗಳೂರಿನ ಎಮಿನೆಂಟ್ ಹೆಚ್ ಆರ್ ಸಾಲ್ಯುಶನ್ಸ್ ಪ್ರೈವೇಟ್ ಲಿಮಿಟೆಡ್ ಇವುಗಳ ಸಹಯೋಗದಲ್ಲಿ ಆಯೋಜಿಸಲಾದ ವಿದ್ಯಾರ್ಥಿಗಳಿಗಾಗಿ ಉದ್ಯೋಗ ನೇಮಕಾತಿ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಈ ಅಭಿಯಾನ ಕುರಿತು ನೇಮಕಾತಿ ವ್ಯವಸ್ಥಾಪಕ ಮಹೇಶ ಬಿರಾದಾರ ಮಾತನಾಡಿ, ನೇಮಕಾತಿಯ ಕ್ರಮ, ಪ್ರಯೋಜನ ಕುರಿತು ಮಾಹಿತಿ ನೀಡಿದರು. ಹಿರಿಯ ಪ್ರಾಧ್ಯಾಪಕಿ ಡಾ. ರಾಬಿಯಾಬೇಗಂ, ಸಿಬ್ಬಂದಿ ಕಾರ್ಯದರ್ಶಿ ಡಾ. ಖಾಜಾವಲಿ ಈಚನಾಳ ಇತರರು ಉಪಸ್ಥಿತರಿದ್ದರು.


## ತಮಿಳುನಾಡು,ಪಶ್ಚಿಮಬಂಗಾಳ ಎಲೆಕ್ಷನ್

**ಚೆನ್ನೈ/ಪಶ್ಚಿಮ ಬಂಗಾಳ:** ಸಂಜೆ 5 ಗಂಟೆ ವೇಳೆಗೆ ತಮಿಳುನಾಡು ಶೇ. 81, ಪಶ್ಚಿಮ ಬಂಗಾಳ ಹಂತ–I ಶೇ.90 ಮತದಾನ ನಡೆದಿದೆ. ಸಂಜೆ 5 ಗಂಟೆಯವರೆಗೆ ತಮಿಳುನಾಡು ಶೇ. 82.24 ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಪಶ್ಚಿಮ ಬಂಗಾಳದಲ್ಲಿ ಶೇ. 89.93 ರಷ್ಟು ಮತದಾನವಾಗಿದೆ. ತಮಿಳುನಾಡಿನ 234 ವಿಧಾನಸಭಾ ಕ್ಷೇತ್ರ ಮತ್ತು ಪಶ್ಚಿಮ ಬಂಗಾಳದ 152 ಕ್ಷೇತ್ರಗಳಿಗೆ ಇಂದು ಬೆಳಿಗ್ಗೆ ಬಿಗಿ ಭದ್ರತೆಯ ನಡುವೆ ಮತದಾನ ಪ್ರಾರಂಭವಾಯಿತು. ಇಂದು ಸಂಜೆ 6 ಗಂಟೆಗೆ ಮತದಾನ ಕೊನೆಗೊಳ್ಳಲಿದೆ. ಪಶ್ಚಿಮ ಬಂಗಾಳದ ಉಳಿದ ಕ್ಷೇತ್ರಗಳಲ್ಲಿ ಏ.29 ರಂದು ಮತದಾನ ನಡೆಯಲಿದ್ದು, ಮೇ 4 ರಂದು ಮತ ಎಣಿಕೆ ನಡೆಯಲಿದೆ.

## ಗುಡ್ಡದ ದುರ್ಗಮ್ಮನ ವಿಜ್ಯಂಭಣೆಯ ಜಾತ್ರೆ

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ

ಹಗರಿಬೊಮ್ಮನಹಳ್ಳಿ ತಾಲೂಕಿನ ಹಂಪಾಪಟ್ಟಣ ಗ್ರಾಮದ ಆರಾಧ್ಯ ದೇವಿ ಗುಡ್ಡದ ದುರ್ಗಮ್ಮ ಜಾತ್ರೆ ಚಂದ್ರಮನ ಗುಡ್ಡ ಹತ್ತಿರ ಭಕ್ತಿಭಾವದಿಂದ ವಿಜ್ಯಂಭಣೆಯಿಂದ ನೆರವೇರಿತು. ಊರಿಂದ ಮೂರು ಕಿ.ಮೀ.ದೂರದಲ್ಲಿರುವ ಜಾತ್ರೆ ಸ್ಥಳಕ್ಕೆ ಸಾವಿರಾರು ಭಕ್ತರು ಆಗಮಿಸಿ ಸಂಭ್ರಮಿಸಿದ್ದಾರೆ. ಪುರಾತನ ಕಾಲದಿಂದಲೂ ಈ ಜಾತ್ರೆಯನ್ನು ಗುಡ್ಡದಲ್ಲಿ ಆಚರಿಸಿಕೊಂಡು ಬರುತ್ತಿದ್ದು, ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ಭಕ್ತಿಭಾವದಿಂದ ನಡೆಯುವುದು ವಿಶೇಷವಾಗಿದೆ. ಹಂಪಾಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಗುಡ್ಡಕ್ಕೆ ಆಗಮಿಸಿ ದೇವಿಗೆ ಪೂಜೆ ಸಲ್ಲಿಸುವುದು ಜಾತ್ರೆಯ ಪ್ರಮುಖ ಸಂಪ್ರದಾಯವಾಗಿದೆ. ಜಾತ್ರೆಯ ಅಂಗವಾಗಿ



ದೇವಿಗೆ ಗಂಗೆ ಪೂಜೆ ನೆರವೇರಿಸಲಾಯಿತು. ಬಳಿಕ ನಡೆದ ಪಟಾಕ್ಷಿ ಹರಾಜಿನಲ್ಲಿ ಆದರ ಮಗ್ಗಿ ಯಂಕಪ್ಪನ ಮಗ ನಾಗರಾಜ್ ಅವರು ರೂ.21,101ಕ್ಕೆ ಹರಾಜು ಪಡೆದು ದೇವಿಯ ಸೇವೆಯಲ್ಲಿ ತೊಡಗಿದ್ದರು.

## ಐದು ದಶಕಗಳ ರಾಜಕೀಯ ಸಂಭ್ರಮ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಏಪ್ರಿಲ್ 26ರಂದು ಬೆಳಗ್ಗೆ 10 ಗಂಟೆಗೆ ಭೂಮಿಪೂಜೆ ನೆರವೇರಿಸಲಾಗುವುದು ಎಂದು ಸಂಸದ ಗೋವಿಂದ ಕಾರಜೋಳ ತಿಳಿಸಿದ್ದಾರೆ. ಕಾರ್ಯಕ್ರಮದ ಸ್ಥಳಗಳಲ್ಲಿ ಪೆಂಡಾಲ್, ಸ್ಟೇಜ್ ಮುಂತಾದ ವ್ಯವಸ್ಥೆಗಳನ್ನು ಪ್ರಾರಂಭಿಸಲು ಭೂಮಿಪೂಜೆ ನಡೆಯಲಿದೆ ಎಂದಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭೂಮಿಪೂಜೆಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಆಹ್ವಾನಿಸಿದ್ದೇವೆ. ಸಂಸದರು, ಮಾಜಿ ಸಂಸದರು, ಶಾಸಕರು, ಮಾಜಿ ಶಾಸಕರು, ವಿಧಾನಪರಿಷತ್ ಸದಸ್ಯರು, ಪ್ರತಿಪಕ್ಷ ನಾಯಕ ಆರ್.



ಅಶೋಕ್, ಛಲವಾದಿ ನಾರಾಯಣಸ್ವಾಮಿ ಸೇರಿ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು 50 ವರ್ಷಗಳ ಕಾಲ ರಾಜ್ಯವನ್ನು ಸುತ್ತಿದ್ದಾರೆ. ರೈತರ ಪರವಾಗಿ ಹೋರಾಡಿ, ದೀನದಲಿತರಿಗೆ ನ್ಯಾಯ ಒದಗಿಸಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದವರು.

# ದ.ಕ ಫಸ್ಟ್, ಕಲ್ಬುರ್ಗಿ ಲಾಸ್ಟ್!

## SSLCಯಲ್ಲಿ ಶೇ.91.1 ವಿದ್ಯಾರ್ಥಿಗಳು ತೇರ್ಗಡೆ, ರಾಜ್ಯಾದ್ಯಂತ 8 ಲಕ್ಷ ವಿದ್ಯಾರ್ಥಿಗಳು ಹಾಜರು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕರ್ನಾಟಕದ 2025–26ನೇ ಸಾಲಿನ ಎಸ್‌ಎಸ್‌ಎಲ್ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದೆ. ಶೇ.91.1 ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಮಾ.18 ರಿಂದ ಏಪ್ರಿಲ್ 2ರ ವರೆಗೆ ನಡೆದಿದ್ದ ಈ ಪರೀಕ್ಷೆಯಲ್ಲಿ ರಾಜ್ಯಾದ್ಯಂತ 8 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಹಾಜರಾಗಿದ್ದರು. ಶಿಕ್ಷಣ ಸಚಿವ ಮಧು ಬಂಗಾರಪ್ಪ ಎಸ್‌ಎಸ್‌ಎಲ್ ಸಿ ಫಲಿತಾಂಶ ಬಿಡುಗಡೆ ಮಾಡಿದ್ದಾರೆ.

**ಫಲಿತಾಂಶ ವೀಕ್ಷಣೆಗೆ ಅಸ್ತು:** karresults.nic.in CxÀªÁkseab.karnataka.gov.in ಈ ಎರಡು ವೆಬ್ಸೈಟ್‌ಗಳಲ್ಲಿ ವಿದ್ಯಾರ್ಥಿಗಳು ತಮ್ಮ ನೋಂದಣಿ ಸಂಖ್ಯೆ ಮತ್ತು ಜನ್ಮ ದಿನಾಂಕವನ್ನು ನಮೂದಿಸಿ ಫಲಿತಾಂಶ ವೀಕ್ಷಿಸಬಹುದಾಗಿದೆ.ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿರುವ ಮೊಬೈಲ್ ಸಂಖ್ಯೆಗಳಿಗೂ ಎಸ್‌ಎಂಎಸ್ (SMS) ಮೂಲಕ ಫಲಿತಾಂಶ ಕಳುಹಿಸಲು ಶಿಕ್ಷಣ ಇಲಾಖೆ ವ್ಯವಸ್ಥೆ ಮಾಡಿಕೊಂಡಿದೆ.

**ದಕ್ಷಿಣ ಕನ್ನಡ ಫಸ್ಟ್:** ಮೂವರು ವಿದ್ಯಾರ್ಥಿಗಳು 625 ಅಂಕಕ್ಕೆ625 ಅಂಕ ಪಡೆದಿದ್ದಾರೆ. 7 ಲಕ್ಷದ 24 ಸಾವಿರದ 794 ಮಕ್ಕಳು ಪಾಸ್ ಆಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದಿದೆ. ಉಡುಪಿ ಜಿಲ್ಲೆ ದ್ವಿತೀಯ ಸ್ಥಾನ ಪಡೆದಿದೆ. ಏಳು ಮಂದಿ ವಿದ್ಯಾರ್ಥಿಗಳು 625ರಲ್ಲಿ 625 ಅಂಕ ಪಡೆದಿದ್ದಾರೆ.




### ಶೇ.100 ಅಂಕಗಳಿಸಿದ 7 ಟಾಪರ್

- ಬೆಳಗಾವಿ ಜಿಲ್ಲೆ ಚಿಕ್ಕೋಡಿಯ ಪ್ರಾರ್ಥನಾ ಪಾಟೀಲ್
- ಚಿಕ್ಕಮಗಳೂರಿನ ವಿದ್ಯಾರ್ಥಿ ಬೃಂದಾ ಎಂ ತಪ್ಸೆ
- ಉಡುಪಿ ಜಿಲ್ಲೆ ಕುಂದಾಪುರದ ಪ್ರೀತಮ್ ಪೂಜಾರಿ
- ಬೆಂಗಳೂರು ಉತ್ತರದ ಧನುಷ್ ಸುಧೀರ್
- ದಾವಣಗೆರೆಯ ಪ್ರತಿಭಾವಂತ ವಿದ್ಯಾರ್ಥಿ ಭರತ್
- ರಾಯಚೂರು ಜಿಲ್ಲೆಯ ಮಾನ್ವಿಯ ಸುಖದೇವ್
- ವಿಜಯಪುರ ಜಿಲ್ಲೆ ಮುದ್ದೇಬಿಹಾಳದ ಸೌಜನ್ಯ ಬಸವರಾಜ್

### ಯಾರ್ಯಾರು ಎಷ್ಟು ಸ್ಥಾನ?

ಇದೀಗ ಪ್ರಕಟವಾದ ಎಸ್ಸೆಸ್ಸೆಲ್ಸಿ ಫಲಿತಾಂಶ ಹಲವು ನಿರೀಕ್ಷೆಗಳನ್ನು ಹುಟ್ಟುಹಾಕಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಕಡಾ 98.40ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಫಲಿತಾಂಶದಲ್ಲಿ ಮೊದಲ ಸ್ಥಾನ ಪಡೆದಿದೆ. ಉಡುಪಿ ಜಿಲ್ಲೆ ಶೇ 98.18 ರ ಫಲಿತಾಂಶದೊಂದಿಗೆ 2ನೇ ಸ್ಥಾನದಲ್ಲಿದೆ. ಉತ್ತರ ಕನ್ನಡ 3ನೇ ಸ್ಥಾನ (ಶೇ 98.09), ಹಾಸನ 4ನೇ ಸ್ಥಾನ (ಶೇ 97.51) ಗಳಿಸಿವೆ.

### ಪ್ರಿಯಾಂಕ್‌ಗೆ ಕುಟುಕಿದ ಬಿಜೆಪಿ

ಕರ್ನಾಟಕದಲ್ಲಿ ಎಸ್‌ಎಸ್‌ಎಲ್ಸಿ ಪರೀಕ್ಷೆ ಫಲಿತಾಂಶ 2026 ಪ್ರಕಟ ಆಗಿದ್ದು, ಈ ಬಾರಿಯ ಪರೀಕ್ಷೆಯಲ್ಲಿ ನಾಡಿನ ಹೆಮ್ಮೆಯ ವಿದ್ಯಾರ್ಥಿಗಳು ಒಟ್ಟು ಶೇ. 94.1 ಫಲಿತಾಂಶ ತಂದಿದ್ದಾರೆ. ಇನ್ನು ಎಸ್‌ಎಸ್‌ಎಲ್ಸಿ ಪರೀಕ್ಷೆಯಲ್ಲಿ ಕಲಬುರಗಿ ಜಿಲ್ಲೆಗೆ ಕೊನೆಯ ಸ್ಥಾನ ಬಂದಿರುವುದಕ್ಕೆ, ರಾಜ್ಯ ಬಿಜೆಪಿ ಘಟಕವು ಕಾಂಗ್ರೆಸ್ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ತರಾಟೆಗೆ ತೆಗೆದುಕೊಂಡಿದೆ.

### ಸರ್ಕಾರಿ ಶಾಲೆ ಮಗು ಫಸ್ಟ್

ಎಸ್‌ಎಸ್‌ಎಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿರುವ ಪ್ರಾರ್ಥನಾ ಬಿರಾದಾರ್ ಅವರ ತಂದೆ ನಾಗಪ್ಪ ಬಿರಾದಾರ್ ಸರ್ಕಾರಿ ಶಾಲೆಯ ಶಿಕ್ಷಕ. ಮಗಳನ್ನು ತಮ್ಮ ಶಾಲೆಯಲ್ಲಿಯೇ ಓದಿಸಿ ರಾಜ್ಯಕ್ಕೆ ಮೊದಲ ಸ್ಥಾನ ಗಳಿಸುವಂತೆ ಮಾರ್ಗದರ್ಶನ ಮಾಡಿ ಸಾಕಷ್ಟು ಪೋಷಕರಿಗೆ ಸ್ಫೂರ್ತಿಯಾಗಿದ್ದಾರೆ. ಎಷ್ಟೋ ಜನ ತಮ್ಮ ಮಕ್ಕಳನ್ನು ಕಾನ್ವೆಂಟ್‌ನಲ್ಲಿ ಓದಿಸುತ್ತಿದ್ದಾರೆ. ಇಂತಹವರಿಗೆ ನಾಗಪ್ಪ ಬಿರಾದಾರ್ ಮಾದರಿ..!

## ರವಿ ರಮೇಶ್ ಜಾಜಿಯವರ ಕಾರ್ಯಕ್ಕೆ ಶ್ಲಾಘನೆ

• ಮಲ್ಲಮ್ಮ ನುಡಿ ವಾರ್ತೆ ಹುಮ್ನಾಬಾದ್

ಕೆಲವರು ಸಮಾಜದ ಉನ್ನತಿಗೆ ಸದಾ ಚಿಂತಿಸುತ್ತಾರೆ. ಹಲವರು ತಮ್ಮ ಕುಟುಂಬದ ಬಗ್ಗೆ ಮಾತ್ರ ಯೋಚಿಸುತ್ತಾರೆ. ರವಿ ದಿ, ರಮೇಶ್ ಜಾಜಿ ಇವರು ಮೊದಲನೇ ಸಾಲಿಗೆ ಸೇರುತ್ತಾರೆ.



ರವಿ ದಿ, ರಮೇಶ್ ಜಾಜಿ ಇವರು ಹುಮ್ನಾಬಾದಿನ ಆರ್ಯವೈಶ್ಯ ಮುಕ್ತಿಧಾಮದಲ್ಲಿ ತಮ್ಮ ತಂದೆ–ತಾಯಿ ಸ್ಮರಣಾರ್ಥವಾಗಿ 25 ಕುರ್ಚಿಯ ಅಥವಾ ಆಸನದ ವ್ಯವಸ್ಥೆ ಮಾಡಿ ಗಮನ ಸೆಳೆದಿದ್ದಾರೆ. ಅಪರೂಪದ ಈ ಕಾರ್ಯವನ್ನು ನೆರವೇರಿಸಿದ್ದಕ್ಕಾಗಿ ಸಮಸ್ತ ಆರ್ಯವೈಶ್ಯ ಬಾಂಧವರು ವತಿಯಿಂದ . ರವಿ ದಿ, ರಮೇಶ್ ಜಾಜಿ ಅವರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸಿದ್ದಾರೆ. ಅವರಿಗೆ ದೇವರು ಆಯುರಾರೋಗ್ಯ, ಸಿರಿ ಸಂಪತ್ತು,




ದಾನಮಾಡುವ ಮನಸ್ಸು ಕೊಟ್ಟು ಹರಿಸಲೆಂದು ಪ್ರಾರ್ಥಿಸಿದ್ದಾರೆ. ಹುಮ್ನಾಬಾದ್ ನಗರದ ಆರ್ಯವೈಶ್ಯ ಜನಾಂಗದ ಸ್ಮಶಾನ ಭೂಮಿಯ ರಸ್ತೆಯನ್ನು ರವಿ ರಮೇಶ್ ಜಾಜಿ ಯವರು ನಿರ್ಮಿಸಲು ಉದಾರ ಮನದಿಂದ ಹಣ ನೀಡಿದ್ದಕಾಗಿ ಅವರಿಗೆ ಧನ್ಯವಾದಗಳು ಎಂದು ತಿಳಿಸಿದ್ದಾರೆ.

## ಜೆಡಿಎಸ್‌ಗೆ ಹೋದ್ರೆ ನಾವೂ ಹೋಗ್ತೀವಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು


ಜೆಡಿಎಸ್‌ನಲ್ಲಿದ್ದ ನಮ್ಮನ್ನ ಕಾಂಗ್ರೆಸ್‌ಗೆ ಕರೆತಂದವರು ಈಗ ವಾಪಸ್ ಹೋದ್ರೆ ನಮ್ಮನ್ನೂ ಕರೆದುಕೊಂಡು ಹೋಗಿ ಎಂದು ಸಚಿವ ಜಮೀರ್‌ಅಹ್ಮದ್ ಖಾನ್‌ಗೆ ಶಾಸಕ ಬಾಲಕೃಷ್ಣ ತಾಕೀತು ಮಾಡಿದ್ದಾರೆ.ಸುದ್ದಿಗಾರರೊಂದಿಗೆ ಮಾತನಾಡಿ, ಸಚಿವ





ಜಮೀರ್‌ಅಹ್ಮದ್ ಜೆಡಿಎಸ್ ಪಕ್ಷಕ್ಕೆ ವಾಪಸ್ ಹೋಗುವುದಾದರೆ ನಮ್ಮನ್ನೂ ಕರೆದುಕೊಂಡೇ ಹೋಗಬೇಕಾಗುತ್ತದೆ. ಆಂತರಿಕವಾಗಿ ಇಂತಹ ಬೆಳವಣಿಗೆ ಆಗಿದೆಯೋ, ಇಲ್ಲವೋ ಎಂಬುದು ಗೊತ್ತಿಲ್ಲ, ನಮ್ಮಜೊತೆ ಚರ್ಚಿಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.




| Subject | Student Name | SSLC Reg No | 125 /100 | CATEGORY |
|---|---|---|---|---|
| ENGLISH | K TEJAS | 20260292135 | 124 | 2A |
| KANNADA | K V PRAJWAL | 20260569647 | 100 | C1 |
| KANNADA | K MABUSUBANI | 20260569652 | 100 | 2A |
| KANNADA | B S DARSHAN KUMAR | 20260305139 | 100 | 2A |
| KANNADA | O VAHIDA | 20260751849 | 100 | C1 |
| HINDI | K V PRAJWAL | 20260569647 | 100 | C1 |
| MATHEMATICS | K V PRAJWAL | 20260569647 | 89 | C1 |
| SCIENCE | K V PRAJWAL | 20260569647 | 89 | C1 |
| SOCIAL SCIENCE | K V PRAJWAL | 20260569647 | 98 | C1 |

| RESULTS | BOYS | GIRLS | |
|---|---|---|---|
| DISTINCTION | 2 | 0 | 02 |
| 1 st CLASS | 8 | 5 | 13 |
| 2 nd CLASS | 2 | 0 | 02 |
| PASS CLASS | 1 | 0 | 01 |
| TOTAL | 13 | 05 | 18 |

| | | |
|---|---|---|
| P | PASS | 18 |
| NC | NOT COMPLETED | 1 |
| M | MALPRACTICE | 0 |
| WB | WITHHELD | 0 |

TOTAL : 19

## ರಾಜ್ಯದಲ್ಲಿ ಇನ್ನೂ ಮುಗಿಯದ ಕುರ್ಚಿಯ ಗುದ್ದಾಟ: ಚೆಲುವಾದಿ ನಾರಾಯಣಸ್ವಾಮಿ, ಬಿಜೆಪಿ ಮುಖಂಡ

# ಪಿಯು ಪರೀಕ್ಷೆಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಕರವೇ ಪ್ರತಿಭಾ ಪುರಸ್ಕಾರ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದ ವತಿಯಿಂದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಜಿಲ್ಲೆಗೆ ಕೀರ್ತಿ ತಂದಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ನಗರದ ಸರಕಾರಿ ಡಿಗ್ರಿ ಕಾಲೇಜ್ ಸಭಾಂಗಣದಲ್ಲಿ ದಿನಾಂಕ : 27-04-2026 ಸೋಮವಾರ, ಬೆಳಗ್ಗೆ : 10:30 ಕ್ಕೆ ಆಯೋಜಿಸಲಾಗಿದೆ.

ದಿವ್ಯಸಾನಿಧ್ಯವನ್ನು ಶ್ರೀ ಷ.ಬ್ರ.ಅಭಿನವ ಮುನೀಂದ್ರ ಶಿವಾಚಾರ್ಯ ಮಹಾಸ್ವಾಮಿಗಳು, ಸುಕ್ಷೇತ್ರ ಹಲಕರ್ಟಿ ಮತ್ತು ವಡ್ನಳ್ಳಿ ಕಟ್ಟಿಮನಿ ಸಂಸ್ಥಾನ ಹಿರೇಮಠದ

ಉದ್ಘಾಟನೆಯನ್ನು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರು ನೆರವೇರಿಸಲಿದ್ದಾರೆ. ಅಧ್ಯಕ್ಷತೆಯನ್ನು ಕರವೇ ಜಿಲ್ಲಾದ್ಯಕ್ಷ ಟಿ.ಎನ್. ಭೀಮುನಾಯಕ ವಹಿಸುವರು,

ಕನ್ನಡಾಂಭೆ ಭಾವಚಿತ್ರ ಪೂಜೆಯನ್ನು ಪೊಲೀಸ್ ಅಧೀಕ್ಷಕ ಪೃಥ್ವಿಕ್ ಶಂಕರ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಶರಣಪ್ಪ ಮಾನೇಗಾರ,

ಸರ್ಕಾರಿ ಪದವಿ ಕಾಲೇಜು ಪ್ರಾಂಶುಪಾಲ ಸುಭಾಷ್‌ಚಂದ್ರ ಕೌಲಗಿ, ಐಎಎಸ್ ಸಾಧಕಿ ಡಾ॥ ನಿವೇದಿತಾ ಭಾವಿಮನಿ,

ವಕೀಲರ ಸಂಘದ ಜಿಲ್ಲಾಧ್ಯಕ್ಷ ರವೀಂದ್ರ ಎಸ್. ಪಾಟೀಲ್, ಅಗ್ರಣೀಯ ಬ್ಯಾಂಕ ವ್ಯವಸ್ಥಾಪಕ ಸುನೀಲ್ ಬತ್ನಿ ಆಗಮಿಸುವರು.

ಕರವೇ ಮುಖಂಡರಾದ ಮಲ್ಲು ಮಾಳಿಕೇರಿ, ಅಂಬ್ರೇಶ ಹತ್ತಿಮನಿ, ವಿಶ್ವರಾಜ ಪಾಟೀಲ್, ಭೀಮಶಂಕರ ಹತ್ತಿಕುಣಿ, ನಿಂಗಪ್ಪ ಗುಡಿಗುಡಿ ಪಾಲ್ಗೊಳ್ಳುವರು. ಸರ್ವರೂ ಪಾಲ್ಗೊಂಡು ಯಶಸ್ವಿಗೊಳಿಸುವಂತೆ ಕರವೇ ಕೋರಿದೆ.

# ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸೌರಭ, ಭಜನೆ ಸಾಂಪ್ರದಾಯಿಕ ಹಾಡುಗಳ ಕಾರ್ಯಕ್ರಮ



• ಮಲ್ಲಮ್ಮ ನುಡಿ ವಾರ್ತೆ ಬೀದರ್

2025-26ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಸಂಘ ಸಂಸ್ಥೆಗಳ ಧನಸಹಾಯ ಯೋಜನೆಯಡಿ ಶ್ರೀ ಹುಚ್ಚಲಿಂಗೇಶ್ವರ ಕಲೆ ಮತ್ತು ಸಾಂಸ್ಕೃತಿಕ ಸಂಘ (ರಿ) ಬೀದರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸೌರಭ, ಭಜನೆ ಹಾಗೂ ಸಾಂಪ್ರದಾಯಿಕ ಹಾಡುಗಳ ಕಾರ್ಯಕ್ರಮವನ್ನು ಚಿಟಗುಪ್ಪಾ ತಾಲ್ಲೂಕಿನ ಸರಕಾರಿ ಪದವಿ ಪೂರ್ವ ಕಾಲೇಜು ಬೇಮಳಖೇಡಾದಲ್ಲಿ ಅದ್ದೂರಿಯಾಗಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಉದ್ಘಾಟಕರಾಗಿ ಷ.ಬ್ರ.ಡಾ॥ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಸಂಸ್ಥಾನ ಹಿರೇಮಠ ಬೇಮಳಖೇಡಾರವರು ದೀಪ ಬೆಳಗಿಸುವುದರೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಸಂಗೀತದಿಂದ ಜೀವನದಲ್ಲಿ ನೆಮ್ಮದಿ, ಶಾಂತಿ ಸೀಗುತ್ತದೆ. ಇಲಾಖೆಯು ಗಡಿ ಭಾಗದಲ್ಲಿ ಕನ್ನಡ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಸಿದ್ರಾಮ ಸಿಂಧೆ ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರರವರು ಮಾತನಾಡುತ್ತ ಗ್ರಾಮೀಣ ಭಾಗದ ಕಲಾವಿದರಿಗೆ ಗುರುತಿಸಿ ಅವರಿಗೆ ಜಿಲ್ಲೆ ಮತ್ತು ರಾಜ್ಯಮಟ್ಟದ ವೇದಿಕೆಗಳನ್ನು ಕಲ್ಪಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ನಶಿಸಿ ಹೋಗುತ್ತಿರುವ ಜಾನಪದ, ಭಜನೆ, ಬೀಸುವ ಕುಟ್ಟುವ ಪದಗಳು, ಸೋಬಾನಪದಗಳು ಇನ್ನಿತರೆ ಸಾಂಪ್ರಾದಾಯಿಕ ಹಾಡುಗಳನ್ನು ಸಂರಕ್ಷಿಸಿ ಅವುಗಳನ್ನು ಮುಂದಿನ ಪೀಳಿಗೆಗೆ ಕಲಿಸಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮಂಜುನಾಥ ಅಧ್ಯಕ್ಷರು ಮಾಜಿ ಗ್ರಾಮ ಪಂಚಾಯತ ಬೇಮಳಖೇಡಾ, ಶ್ರೀ ಸಂಜುಕುಮಾರ ಕಾರ್ಯದರ್ಶಿಗಳು ಗ್ರಾಮ ಪಂಚಾಯತ ಬೇಮಳಖೇಡಾ, ಶ್ರೀ ವೀರಶೆಟ್ಟಿ ಭಾಸ್ಕರ ನಿರ್ದೇಶಕರು ಕೃಷಿ ಪತ್ತಿನ ಸಹಕಾರಿ ಸಂಘ ಬೇಮಳಖೇಡಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿಗಳಾದ ಕು.ಕ್ಲೆಮೇಂಟಿನಾ ಉಪಸ್ಥಿತರಿದ್ದರು, ಕಾರ್ಯಕ್ರಮದ ನಿರೂಪಣೆಯನ್ನು ಸುಧಾಕರ ಎಲ್ಲಾನೊರರವರು ನೇರವೇರಿಸಿದರು.

ಕಾರ್ಯಕ್ರಮದಲ್ಲಿ ಜಾನಪದಗಾಯನವನ್ನು ಸುನೀತಾ ಮತ್ತು ತಂಡ, ಸಂಪ್ರದಾಯಪದ ಕಮಳಮ್ಮ ಮತ್ತು ತಂಡ, ಭಜನೆ ಪದ ಸಿದ್ದಮ್ಮಾ ಮತ್ತು ತಂಡ, ಸೋಬಾನಪದ ಕವಿತಾ ಮತ್ತು ತಂಡ ಉಡಮನಳ್ಳಿ ಭರತನಾಟ್ಯ ಸಾಕ್ಷಿ ದಿಗಂಬರ್ ಮತ್ತು ತಂಡ, ಕೋಲಾಟ ಲಕ್ಷ್ಮೀಬಾಯಿ ಮತ್ತು ತಂಡ ತಾಳಮಡಗಿ ಕುಟ್ಟು ಬೀಡುವ ಪದ ಕಾಶಮ್ಮಾ ಮತ್ತು ತಂಡ ಉಡಮನಳ್ಳಿ, ಗೊಂದಳಿ ಪದ ಶಾಮರಾವ ಮತ್ತು ತಂಡ ಮೋಹರಂ ಪದ ಮಹಾರುದ್ರಪ್ಪಾ ಮತ್ತು ತಂಡ ಮೀನಕೇರಾ, ತತ್ವಪದ ಸುಶೀಲಮ್ಮಾ ಮತ್ತು ತಂಡದವರು ಕಲಾ ಪ್ರದರ್ಶನ ನೀಡಿದರು.

# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



## ರೈತರು ಉಳಿದರೆ ದೇಶ ಉಳಿಯುತ್ತದೆ: ರೈತರ ಪರ ಕಾಳಜಿ ವಹಿಸಲು ಆಗ್ರಹ

**ಹುಮನಾಬಾದ್: "ರೈತರು ಉಳಿದರೆ ದೇಶ ಉಳಿಯುತ್ತದೆ" ಎಂಬ ಸಂದೇಶದೊಂದಿಗೆ ರೈತರ ಸಮಸ್ಯೆಗಳ ಕುರಿತು ಸಾರ್ವಜನಿಕ ವಲಯದಲ್ಲಿ ಚರ್ಚೆ ಗರಿಗೆದರಿದೆ. ಕೃಷಿ ಕ್ಷೇತ್ರದಲ್ಲಿ ದಿನದಿಂದ ದಿನಕ್ಕೆ ಎದುರಾಗುತ್ತಿರುವ ಸಂಕಷ್ಟಗಳು ರೈತರ ಬದುಕನ್ನು ಸಂಕೀರ್ಣಗೊಳಿಸುತ್ತಿವೆ ಎಂಬ ಆತಂಕ ವ್ಯಕ್ತವಾಗುತ್ತಿದೆ.**

**ಅಕಾಲಿಕ ಮಳೆ, ಬೆಳೆ ನಷ್ಟ, ಮಾರುಕಟ್ಟೆಯಲ್ಲಿ ಬೆಲೆ ಕುಸಿತ ಹಾಗೂ ಸಾಲದ ಬಾಧೆಗಳಿಂದ ರೈತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ತಕ್ಷಣ ಸ್ಪಂದಿಸಿ, ರೈತರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂಬ ಒತ್ತಾಯ ಕೇಳಿಬರುತ್ತಿದೆ.**

**ಸ್ಥಳೀಯ ರೈತ ಮುಖಂಡರು ಮಾತನಾಡಿ, ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಖಚಿತಪಡಿಸಬೇಕು, ಬೆಳೆ ನಷ್ಟಕ್ಕೆ ತಕ್ಷಣ ಪರಿಹಾರ ನೀಡಬೇಕು ಹಾಗೂ ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಬೇಕು ಎಂದು ಆಗ್ರಹಿಸಿದರು.**

**ಜೊತೆಗೆ ಮಧ್ಯವರ್ತಿಗಳ ಹಾವಳಿಯನ್ನು ಕಡಿಮೆ ಮಾಡಿ, ರೈತರಿಗೆ ನೇರ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು ಅವಶ್ಯಕವೆಂದು ತಿಳಿಸಿದರು.**

**ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಆಧಾರಿತ ಜೀವನ ಸಾಗಿಸುತ್ತಿರುವ ಕುಟುಂಬಗಳಿಗೆ ಸರ್ಕಾರದ ಯೋಜನೆಗಳು ಸರಿಯಾಗಿ ತಲುಪಬೇಕು. ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳದಿದ್ದರೆ ದೇಶದ ಆಹಾರ ಭದ್ರತೆಗೆ ಧಕ್ಕೆಯಾಗಬಹುದು ಎಂಬ ಆತಂಕ ವ್ಯಕ್ತವಾಗಿದೆ.**

**ರೈತನಿಗೆ ಗೌರವ ಹಾಗೂ ಭದ್ರತೆ ಒದಗಿಸುವುದು ಸಮಾಜದ ಪ್ರತಿಯೊಬ್ಬರ ಜವಾಬ್ದಾರಿ. ರೈತರ ಉಳಿವು ದೇಶದ ಅಭಿವೃದ್ಧಿಗೆ ಅತಿ ಮುಖ್ಯ ಎನ್ನುವುದು ಎಲ್ಲರ ಒಪ್ಪಿಗೆಯ ಮಾತಾಗಿದೆ.**

# ಸೇವಾಲಾಲ ಮಹಿಳಾ ಕಲಾ ಸಂಘದಿಂದ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸಂಭ್ರಮ



• ಮಲ್ಲಮ್ಮ ನುಡಿ ವಾರ್ತೆ ಬೀದರ್

ಸೇವಾಲಾಲ ಮಹಿಳಾ ಕಲಾ ಮತ್ತು ಸಾಂಸ್ಕೃತಿಕ ಸಂಘ (ರಿ) ಬಗದಲ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ಬಂಜಾರಾ ಹಾಗೂ ಲಂಬಾಣಿ ಹಾಡುಗಳು, ಭಜನೆ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಬೀದರ್ ತಾಲೂಕಿನ ಬಗದಲ್ ಗ್ರಾಮದ ಶ್ರೀಪತ ಮಹಾರಾಜ ಮಂದಿರದಲ್ಲಿ ಬುಧವಾರ ಅದ್ದೂರಿಯಾಗಿ ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ್‌ನ ಸಹಾಯಕ ನಿರ್ದೇಶಕರಾದ ಶ್ರೀ ಸಿದ್ದರಾಮ ಶಿಂಧೆ ಅವರು, ಬಂಜಾರಾ ಮತ್ತು ಲಂಬಾಣಿ ಸಮುದಾಯದ ಸಂಸ್ಕೃತಿ ಕರ್ನಾಟಕದ ವೈವಿಧ್ಯಮಯ ಪರಂಪರೆಯ ಅಮೂಲ್ಯ ಭಾಗವಾಗಿದೆ ಎಂದು ಹೇಳಿದರು.

ಅವರು ಮಾತನಾಡುತ್ತಾ, "ಬಂಜಾರಾ ಹಾಗೂ ಲಂಬಾಣಿ ಜನಾಂಗದ ಜನಪದ ಹಾಡುಗಳು, ಭಜನೆಗಳು, ನೃತ್ಯಗಳು ಮತ್ತು ವೇಷಭೂಷಣಗಳು ನಮ್ಮ ರಾಜ್ಯದ ಸಾಂಸ್ಕೃತಿಕ ಸಂಪತ್ತಿನ ಪ್ರತೀಕಗಳಾಗಿವೆ. ಈ ಸಮುದಾಯದ ಜೀವನ ಶೈಲಿ, ಆಚರಣೆಗಳು ಹಾಗೂ ಸಂಗೀತ ಪರಂಪರೆ ಇಂದಿನ ಯುವಪೀಳಿಗೆಗೆ ಪರಿಚಯವಾಗಬೇಕು. ಇಂತಹ ಕಾರ್ಯಕ್ರಮಗಳು ಕೇವಲ ಮನರಂಜನೆಗಾಗಿ ಮಾತ್ರವಲ್ಲ, ನಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಸೇತುವೆಯಾಗಿವೆ," ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೇವಾಲಾಲ ಮಹಿಳಾ ಕಲಾ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷರಾದ ಶ್ರೀಮತಿ ಶಾರದಾಬಾಯಿ ರಾಠೋಡ ವಹಿಸಿಕೊಂಡರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿಗಳಾದ ಸುಧಾಕರ ಹಾಗೂ ಕು. ಕ್ಲೆಮೆಂಟಿನಾ ಉಪಸ್ಥಿತರಿದ್ದರು. ಬಗದಲ್ ತಾಂಡಾದ ಗ್ರಾಮಸ್ಥರಾದ ವೀರಶೆಟ್ಟಿ ದೇಸಾಯಿ, ಗುರು ರಾಜಗಿರಿ, ಮಶಾಕ್ ಮಹಾರಾಜ, ರಮೇಶ್, ನರಸಿಂಗ ಮತ್ತು ದಿನೇಶ್ ಸೇರಿದಂತೆ ಅನೇಕರು ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ತಂದರು.

# ಗಡಿ ಭಾಗದ ಕೀರ್ತಿ ಹೆಚ್ಚಿಸಿದ ಗುರಕುಲ ಶಾಲೆ



• ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ

ಗಡಿ ನಾಡಿನಲ್ಲಿ ಶೈಕ್ಷಣಿಕ ಕ್ರಾಂತಿ ಮಾಡುತ್ತಿರುವ ಗ್ರಾಮೀಣ ಭಾಗದ ತಾಲೂಕಿನ ಕಂದಗುಳ ಗ್ರಾಮದ ಡಾ. ಚನ್ನಬಸವ ಪಟ್ಟದ್ದೇವರು ಗುರುಕುಲ ಪ್ರೌಢಶಾಲೆ, 2025-26ನೆಯ ಸಾಲಿನ ಎಸ್‌ಎಸ್‌ಎಲ್ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ನೀಡಿದೆ. ಎಸ್‌ಎಸ್‌ಎಲ್ಸಿ ಪರೀಕ್ಷೆ ಬರೆದಿರುವ ಒಟ್ಟು 42 ವಿದ್ಯಾರ್ಥಿಗಳಲ್ಲಿ 9 ವಿದ್ಯಾರ್ಥಿಗಳು ಅಗ್ರ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. 26 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

3ಜನ ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ನಾಗರಾಜ ತಂದೆ ಕಲ್ಲಪ್ಪ 613 (98.08) ಶ್ರೇಣಿ ಪಡೆದು ಪ್ರಥಮ ಸ್ಥಾನ ಪಡೆದರೆ, ಸುನೀಲ ತಂದೆ ಸತೀಶಕುಮಾರ 581 (92.96) ಅಂಕಗಳನ್ನು ಪಡೆದು ದ್ವಿತೀಯ ಸ್ಥಾನ ಪಡೆದಿದ್ದು ಸ್ನೇಹಾ ತಂದೆ ದಯಾನಂದ 577 (92.32) ಅಂಕಗಳನ್ನು ಪಡೆದು ತೃತೀಯ ಸ್ಥಾನವನ್ನು ಪಡೆದುಕೊಂಡಿದ್ದಾಳೆ. ತರುಣ ತಂದೆ ಸುದರ್ಶನ್ 576 (92.16) ಪ್ರಜ್ಞಾ ತಂದೆ ಮಾಣಿಕರಾವ 575 (92.)

ಸುಮೀತ ತಂದೆ ಮನೋಹರ್ 566 (90.56) ಅಭಿನೇತ್ರ ತಂದೆ ಮಲ್ಲಪ್ಪ 565 (90.40) ರೇವಣಸಿದ್ದ ತಂದೆ ರಾಜಶೇಖರ 560 (89.60) ವೈಷ್ಣವಿ ತಂದೆ ಕಾರ್ತಿಕ 537 (85.92) ಕಾವ್ಯಂಜಲಿ ತಂದೆ ನೀಲಕಂಠ 531 (84.96) ಸವಿತಾ ತಂದೆ ವಿಠಲ 526 (84.14) ಶ್ರೇಯಾ ತಂದೆ ಅನೀಲ 525 (84.)

ಸಾಯಿಕುಮಾರ ತಂದೆ ತುಕಾರಾಮ 520 (83.20) ಮಹಾನಂದಾ ತಂದೆ ರಾಜಕುಮಾರ 518 (8.88) ಸುಶಾಂತರೆಡ್ಡಿ ತಂದೆ ರವೀಂದ್ರರೆಡ್ಡಿ 518 (82.88) ಬೇಬಿ ತಂದೆ ಭೀಮರಾವ 516 (82.56) ಭವಾನಿ ತಂದೆ ತುಕಾರಾಮ 512 (81.92) ಅಂಕಗಳು ಪಡೆದು ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಮಕ್ಕಳ ಈ ಸಾಧನೆಗೆ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷರಾದ ನಾಡೋಜ ಡಾ. ಬಸವಲಿಂಗ ಪಟ್ಟದೇವರು ಹಾಗೂ ಹಿರೇಮಠ

ಸಂಸ್ಥಾನ ವಿದ್ಯಾ ಪೀಠದ ಪೀಠಾಧಿಪತಿಗಳಾದ ಶ್ರೀ ಗುರುಬಸವ ಪಟ್ಟದೇವರು,

ಆಡಳಿತಾಧಿಕಾರಿಗಳಾದ ಮೋಹನ ರೆಡ್ಡಿ, ಮಾಣಿಕರಾವ ಹೌಶೆಟ್ಟಿ, ಶಾಲೆಯ ಮುಖ್ಯ ಶಿಕ್ಷಕಿ ರೇಖಾ ಮಂಜುನಾಥ್ ಹಾಗೂ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳ ಪಾಲಕರು ಹರ್ಷ ವ್ಯಕ್ತಪಡಿಸಿದ್ದಾರೆ.

# ಹುಮನಾಬಾದ ತಾಲೂಕಿಗೆ 91.25% ಪ್ರತಿಶತ ಫಲಿತಾಂಶ ಗುಡಾಳ ಹರ್ಷ



• ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ

2026ಮಾರ್ಚ್ ಏಪ್ರಿಲನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹುಮನಾಬಾದ್ ತಾಲೂಕಿನಲ್ಲಿ 5361 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅದರಲ್ಲಿ 4892 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಇಬ್ಬರು ವಿದ್ಯಾರ್ಥಿಗಳು ತಾಲೂಕಿನಲ್ಲಿ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾಗಿದ್ದಾರೆ. ಚಿಟಗುಪ್ಪ ಪಟ್ಟಣದ ಜ್ಞಾನ ಗಂಗಾ ಪ್ರೌಢ ಶಾಲೆ ಆದಿತ್ಯ ಹಾಗೂ ಮೊಹಮ್ಮದ್ ಖೂಸ್ರು ಎಂಬ ವಿದ್ಯಾರ್ಥಿಗಳು 625 ಕ್ಕೆ 621 ಅಂಕ ಪಡೆದು ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದು ರಾಜ್ಯಕ್ಕೆ ಐದನೇ ರಾಂಕ್ ಪಡೆದಿದ್ದಾರೆ.

ಹಳ್ಳಿಖೇಡ (ಬಿ) ಪಟ್ಟಣದ ಮಾತೋಶ್ರೀ ಕಸ್ತೂರಿಬಾಯಿ ತಾಳಪಳ್ಳಿ ಪ್ರೌಢ ಶಾಲೆಯ ವಿದ್ಯಾರ್ಥಿ ಆಯುಷಿ 625ಕ್ಕೆ 619, ಬಿಂದು ಶ್ರೀ ರಾಮ್ ಅಂಡ್ ರಾಜ್ ಪ್ರೌಢ ಶಾಲೆ ಹುನಾಬಾದ್ ಹಾಗೂ ಭೂಮಿಕಾ ಆದರ್ಶ ವಿದ್ಯಾಲಯ ಬೇಮಳಖೇಡಾ ವಿದ್ಯಾರ್ಥಿಗಳು 625ಕ್ಕೆ 618 ಅಂಕಗಳನ್ನು ಪಡೆದಿದ್ದಾರೆ.

ತಾಲೂಕಿನ ಐದು ಜನ ಟಾಪರ್ ವಿದ್ಯಾರ್ಥಿಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಟೇಶ್ ಗುಡಾಳ್ ಅಭಿನಂದಿಸಿದ್ದಾರೆ. ತಾಲೂಕಿನ ಎಸ್‌ಎಸ್‌ಎಲ್‌ಸಿ ಫಲಿತಾಂಶಕ್ಕೆ ಶ್ರಮಿಸಿದ ಎಲ್ಲಾ ಶಾಲೆಯ ಮುಖ್ಯ ಗುರುಗಳಿಗೂ ಸಹ ಶಿಕ್ಷಕರಿಗೂ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳಿಗೂ ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಟೇಶ ಗುಡಾಳ ಅಭಿನಂದನೆಗಳು ತಿಳಿಸಿದ್ದಾರೆ.

# ಚನ್ನಬಸವ ಪಟ್ಟದ್ದೇವರು ಪ್ರೌಢಶಾಲೆಗೆ ನೂರಕ್ಕೆ ನೂರು ಫಲಿತಾಂಶ; ಅಮೃತಾಗೆ ರಾಜ್ಯಕ್ಕೆ 8ನೇ ಸ್ಥಾನ



• ಮಲ್ಲಮ್ಮ ನುಡಿ ವಾರ್ತೆ, ಕಮಲನಗರ

ಗಡಿಭಾಗದ ಶಿಕ್ಷಣ ಸಂಸ್ಥೆಯಾದ ಶ್ರೀ ಚನ್ನಬಸವ ಪಟ್ಟದ್ದೇವರು ಪ್ರೌಢಶಾಲೆಯು 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-01ರಲ್ಲಿ ಅಭೂತಪೂರ್ವ ಸಾಧನೆ ಮಾಡಿದೆ. ಶಾಲೆಯು ಶೇ.100ರಷ್ಟು ಫಲಿತಾಂಶ ದಾಖಲಿಸುವ ಮೂಲಕ ಜಿಲ್ಲೆಯ ಗಮನ ಸೆಳೆದಿದೆ.

ರಾಜ್ಯಮಟ್ಟದಲ್ಲಿ ಮಿಂಚಿದ ಪ್ರತಿಭೆ ಶಾಲೆಯ ವಿದ್ಯಾರ್ಥಿನಿ ಅಮೃತಾ ವಿನೋದಕುಮಾರ ಒಟ್ಟು 625 ಅಂಕಗಳಿಗೆ 618 (ಶೇ. 98.88) ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ 8ನೇ ಸ್ಥಾನ ಅಲಂಕರಿಸಿ ಶಾಲೆಗೆ ಕೀರ್ತಿ ತಂದಿದ್ದಾಳೆ.

ಟಾಪ್ 20 ಸಾಧಕರ ಪಟ್ಟಿ: ಅಮೃತಾ ಮಾತ್ರವಲ್ಲದೆ, ಶಾಲೆಯ ಹಲವಾರು ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ: ಈಶ್ವರ ಅನಿಲಕುಮಾರ: 607 (97.12%) ಚೈತನ್ಯ ಪ್ರೇಮಸಾಗರ: 601 (96.16%) ಚೇತನಾ ವೆಂಕಟ ಹಾಗೂ ಮಹೇಶ್ವರಿ ಅವಿನಾಶ: ತಲಾ 597 (95.52%) ಭಾಗ್ಯಶ್ರೀ ಸಂಜೀವ: 591 (94.56%) ಅಂಜಲಿ ಭೀಮಾಶಂಕರ ಹಾಗೂ ಸೃಷ್ಟಿ ಗುರುನಾಥ: 586 (93.76%) ಅಂಕಿತಾ ಪವನ: 585 (93.60%) ಇವರೊಂದಿಗೆ ವೈಷ್ಣವಿ, ಪ್ರತಿಜ್ಞಾ, ಸಾಕ್ಷಿ, ನೈತಿಕ, ಪರಮೇಶ್ವರ, ಸುಶಾಂತ, ಭಕ್ತಿ, ಸಚೀನ, ತನುಶ್ರೀ, ಸೃಷ್ಟಿ ಸಂಗ್ರಾಮ ಮತ್ತು ಶಿವಾನಿ ಅವರು ಅಂಕಗಳನ್ನು ಪಡೆಯುವ ಮೂಲಕ ವಿಷಯದ ಮೇಲಿನ ತಮ್ಮ ಹಿಡಿತವನ್ನು ಸಾಬೀತುಪಡಿಸಿದ್ದಾರೆ.

ಗಡಿಭಾಗದ ಶಾಲೆಯ ಈ ಅದ್ಭುತ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ಪರಮ ಪೂಜ್ಯ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು, ಪರಮ ಪೂಜ್ಯ ಗುರುಬಸವ ಪಟ್ಟದ್ದೇವರು, ಸಂಸ್ಥೆಯ ಆಡಳಿತಾಧಿಕಾರಿಗಳಾದ ಶ್ರೀ ಮೋಹನ ರೆಡ್ಡಿ ಹಾಗೂ ಶಾಲೆಯ ಆಡಳಿತಾಧಿಕಾರಿಗಳಾದ ಶ್ರೀ ಚನ್ನಬಸವ ಘಾಳೆ ಮತ್ತು ಸಮಸ್ತ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

90% ಕ್ಕಿಂತ ಹೆಚ್ಚಿನ ಅಂಕ ಪಡೆದು ಸಾಧನೆ ಮಾಡಿದ್ದಾರೆ.

ಫಲಿತಾಂಶದ ಮುಖ್ಯಾಂಶಗಳು: ಒಟ್ಟು ಹಾಜರಾದ ವಿದ್ಯಾರ್ಥಿಗಳು: 80 ಒಟ್ಟು ಉತ್ತೀರ್ಣರು: 80 (ಶೇ. 100 ಫಲಿತಾಂಶ) ಅಗ್ರಶ್ರೇಣಿ (Distinction): 31 ವಿದ್ಯಾರ್ಥಿಗಳು ಪ್ರಥಮ ದರ್ಜೆ: 49 ವಿದ್ಯಾರ್ಥಿಗಳು

ವಿಷಯವಾರು ನೂರಕ್ಕೆ ನೂರು ಅಂಕಗಳು: ಕನ್ನಡ ವಿಷಯದಲ್ಲಿ ಒಬ್ಬರು, ಹಿಂದಿಯಲ್ಲಿ 11 ವಿದ್ಯಾರ್ಥಿಗಳು, ವಿಜ್ಞಾನದಲ್ಲಿ ಒಬ್ಬರು ಹಾಗೂ ಸಮಾಜ ವಿಜ್ಞಾನ ವಿಷಯದಲ್ಲಿ 8 ವಿದ್ಯಾರ್ಥಿಗಳು 100ಕ್ಕೆ 100

> "ಗ್ರಾಮೀಣ ಭಾಗದ ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ. ಶಿಕ್ಷಕರ ಶ್ರಮ ಮತ್ತು ವಿದ್ಯಾರ್ಥಿಗಳ ಶಿಸ್ತು ಈ ಯಶಸ್ಸಿಗೆ ಕಾರಣ,
> **ಚನ್ನಬಸವ ಘಾಳೆ, ಶಾಲೆ ಆಡಳಿತಾಧಿಕಾರಿಗಳು**

# ಎಲ್ಲ ಯೋಗಗಳಲ್ಲಿ ಶ್ರೇಷ್ಠ ಯೋಗ ರಾಜಯೋಗ: ಪ್ರತಿಮಾ ಬಹೆನ್‌ಜಿ



• ಮಲ್ಲಮ್ಮ ನುಡಿ ವಾರ್ತೆ ಬೀದರ್

ಯೋಗಗಳಲ್ಲಿ ಶ್ರೇಷ್ಠವಾದ ಯೋಗ ರಾಜಯೋಗವಾಗಿದ್ದು, ಶಾರೀರಿಕ ಜೊತೆಗೆ ಮಾನಸಿಕ ಆರೋಗ್ಯ ಬಹಳ ಮುಖ್ಯವಾಗಿದೆ ಎಂದು ಪ್ರಜಾಪಿತಾ ಬ್ರಹ್ಮಾಕುಮಾರಿಸ್ ಈಶ್ವರಿಯ ವಿಶ್ವವಿದ್ಯಾಲಯ ರಾಜಯೋಗ ಕೇಂದ್ರ ಪಾವನಧಾಮದ ಸಂಚಾಲಕಿ ಬಿ.ಕೆ ಪ್ರತಿಮಾ ಬಹೆನ್‌ಜಿ ಹೇಳಿದರು.

ಗುರುವಾರ ನಗರದ ಜನವಾಡ ರಸ್ತೆಯಲ್ಲಿರುವ ಬ್ರಹ್ಮಾಕುಮಾರಿಸ್ ಕೇಂದ್ರ ಪಾವನಧಾಮ ಅವರಣದಲ್ಲಿ ಇತ್ತಿಚೆಗೆ ನಗರದಲ್ಲಿ ಜರುಗಿದ ಯೋಗ ಮಹೋತ್ಸವ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಇಂದು ಆತ್ಮ ಸಶಕ್ತ ಆಗಬೇಕಾದರೆ ಪ್ರಕೃತಿ ಸಮತೋಲನವಾಗಿರಬೇಕು. ಪ್ರಕೃತಿಯ ಪ್ರಮುಖ ಘಟ್ಟವೆಂದರೆ ದೇಶದ ಯುವಜನತೆ ಸಶಕ್ತರಾಗಬೇಕಾದರೆ ಮಾನಸಿಕ ಸ್ವಾಸ್ಥಂದ ಅಗತ್ಯವಿದ್ದು, ಪರಮಾತ್ಮನ ವಾಸಸ್ಥಳದಲ್ಲಿ ಸಮ್ಮಿಲಿತರಾದರೆ ಅವರಲ್ಲಿ ಆತ್ಮಚಿಂತನೆ ಹಾಗೂ ಅಧ್ಯಾತ್ಮದ ಶಕ್ತಿ ಜಾಗೃತಗೊಳ್ಳುತ್ತದೆ ಎಂದರು.

ಬ್ರಹ್ಮಾಕುಮಾರಿ ಕೇಂದ್ರದಿಂದ ಸನ್ಮಾನಿತರಾಗಿ ಮಾತನಾಡಿರುವ ಯೋಗ ಗುರು ಗೋರಖನಾಥ ಕುಂಬಾರ ಮಾತನಾಡಿ, ಬುಕ್ ರೆಕಾರ್ಡ್ ಪ್ರಕಾರ ಯೋಗ ಮಹೋತ್ಸವ ಆಚರಿಸುವ ಮೂಲಕ ಈ ಭಾಗದಲ್ಲಿ ಯೋಗಮಯ ವಾತಾವರಣ ಹಾಗೂ ಯುವಜನರಲ್ಲಿ ಯೋಗದ ವಾತಾವರಣ ಬಿತ್ತಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮೊದಲು ಪತಂಜಲಿ ಮಹರ್ಷಿಗಳು ಭಾರತದಲ್ಲಿ ಯೋಗವನ್ನು ಪ್ರಚಾರ ಹಾಗೂ ಪ್ರಸಾರ ಮಾಡಿದ್ದರು. ಈಗ ಬಾಬಾ ರಾಮದೇವ ಅವರು ಆ ಕಾರ್ಯವನ್ನು ನಮ್ಮಂಥವರ ಮೂಲಕ ಮುಂದುವರೆಸಿದ್ದಾರೆ. ಇದಕ್ಕೆ ಬ್ರಹ್ಮಾಕುಮಾರಿ ಕೇಂದ್ರ ಸರ್ವ ರೀತಿಯ ಸಹಕಾರ ನೀಡಿದಕ್ಕೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಅಕ್ಕಪಡೆಯ ರಾಜ್ಯ ಸಂಯೋಜಕಿ ಶೈನಿ ಗುಂಟಿ ಮಾತನಾಡಿ,

ಯುವಜನರಿಗೆ ಅಧ್ಯಾತ್ಮದ ಶಿಕ್ಷಣ ಜರೂರಿಯಾಗಿದೆ. ಅಪರಾಧ ಮುಕ್ತ ದೇಶವಾಗಬೇಕಾದರೆ ಯುವಕರು ಅಧ್ಯಾತ್ಮದ ಕಡೆ ತಿರುಗಬೇಕು. ಆಗ ಯಾವ ಅಕ್ಕಪಡೆಯ ಅವಶ್ಯಕತೆ ಇರುವುದಿಲ್ಲ ಎಂದರು. ಸ್ವದೇಶಿ ಏನರ್ಜಿ ಫೌಂಡೇಷನ್ ಅಧ್ಯಕ್ಷ ಆನಂದ ರಡ್ಡಿ ವೇದಿಕೆಯಲ್ಲಿದ್ದರು. ಕೇಂದ್ರದ ಹಿರಿಯ ರಾಜಯೋಗ ಶಿಕ್ಷಕಿ ಬಿ.ಕೆ ಗುರುದೇವಿ ಅಕ್ಕನವರು ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಕೇಂದ್ರದ ಸಹೋದರ, ಸಹೋದರಿಯರು ಕಾರ್ಯಕ್ರಮದಲ್ಲಿದ್ದರು.

# ಮನೆಗೆ ನುಗ್ಗಿ ಕಳ್ಳತನ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ನಗರದ ಕೌಲ್‌ಬಜಾರ್ ಪೊಲೀಸ್ ಠಾಣೆ ವ್ಯಾಪ್ತಿಯ ಆರ್. ಕೆ. ಕಾಲೊನಿಯಲ್ಲಿ ದುಷ್ಕರ್ಮಿಗಳು ಮನೆಯೊಂದಕ್ಕೆ ನುಗ್ಗಿ 21 ಲಕ್ಷ ನಗದು ಕಳ್ಳತನ ಮಾಡಿದ್ದಾರೆ.

ಸರ್ಕಾರಿ ನೌಕರರಾದ ಆರ್.ಕೆ. ಕಾಲೊನಿಯ ನಿವಾಸಿ ಚನ್ನಬಸವ (35) ನೀಡಿದ ದೂರಿನಂತೆ ಆಧಾರದಲ್ಲಿ ಪೊಲೀಸರು ಎಫ್‌ಐಆರ್ ದಾಖಲು ಮಾಡಿಕೊಂಡಿದ್ದಾರೆ.

ಏ.18ರ ರಾತ್ರಿ 11.30ರಿಂದ ಏ.19ರ ಬೆಳಿಗ್ಗೆ 5.30ರ ನಡುವಿನ ಅವಧಿಯಲ್ಲಿ ಘಟನೆ ನಡೆದಿದೆ. ದುಷ್ಕರ್ಮಿಗಳು ಮನೆಯ ಬೀಗ ಮುರಿದು ಒಳನುಗ್ಗಿ ಕಬೋರ್ಡ್ ತೆರೆದು ಅದರಲ್ಲಿ ಇರಿಸಿದ್ದ ನಗದು ಕಳ್ಳತನ ಮಾಡಿದ್ದಾರೆ. ಈ ಸಂಬಂಧ ಪೊಲೀಸರು ತನಿಖೆ ಆರಂಭಿಸಿದ್ದಾರೆ.



# ಮೇ3ರಿಂದ ಉರ್ಸ್: ಅಹ್ವಾನ





• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಕಲಬುರಗಿ ಮೇ 3ರಿಂದ 5ರವರೆಗೆ 2026ರಲ್ಲಿ ನಡೆಯಲಿರುವ ಹಝುರತ್ ಖ್ವಾಜಾ ಬಂದಾ ನವಾಜ್ ದರ್ಗಾದ 622ನೇ ಉರ್ಸ್ ಶರೀಫ್ ಅಂಗವಾಗಿ, ದರ್ಗಾದ ಸಜ್ಜಾದಾ ನಶೀನ್ ಹಾಗೂ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷರಾದ ಆಡಿ. Hafiz Syed Muhammad Ali Al-Hussaini ಅವರು ಕರ್ನಾಟಕದ ಮುಖ್ಯಮಂತ್ರಿಯಾದ Siddaramaiah ಮತ್ತು ಉಪಮುಖ್ಯಮಂತ್ರಿಯಾದ

ಆ. ಏ. Shivakumar ಅವರನ್ನು ಭೇಟಿ ಮಾಡಿ ಉರ್ಸ್ ಕಾರ್ಯಕ್ರಮಕ್ಕೆ ಅಧಿಕೃತ ಆಹ್ವಾನ ನೀಡಿದರು.

ಈ ಸಂದರ್ಭದಲ್ಲಿ ಸರ್ಕಾರದ ಮುಖ್ಯ ಸಚೇತನರಾಗಿರುವ Saleem Ahmed, ವಿಧಾನ ಪರಿಷತ್ ಸದಸ್ಯೆ ಏಟಇಝ ಃಚಿಟಿಂ ಹಾಗೂ ನಿಲಂಗಾ ಶರೀಫ್‌ನ ಸಜ್ಜಾದಾ ನಶೀನ್ ಜನಾಬ್ ಸಯ್ಯದ್ ಹೈದರ ಪಾಶಾ ಉಪಸ್ಥಿತರಿದ್ದರು.

# ಮಾನವ ಕಲ್ಯಾಣಕ್ಕೆ ಆದಿಶಂಕರರ ತತ್ವ ದಾರಿದೀಪ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ವೇದಗಳ ಸಾರವನ್ನೇ ತಮ್ಮ 'ಅದ್ವೈತ' ಸಿದ್ಧಾಂತದ ಮೂಲಕ ಜಗತ್ತಿಗೆ ಪರಿಚಯಿಸಿದ ಶ್ರೀ ಶಂಕರಾಚಾರ್ಯರು ವಿಶ್ವದ ಮಹಾನ್ ದಾರ್ಶನಿಕರಾಗಿದ್ದಾರೆ. ಅವರ ದರ್ಶನ ಶಾಸ್ತ್ರವು ಕೇವಲ ಒಂದು ವರ್ಗಕ್ಕಲ್ಲ, ಬದಲಾಗಿ ಇಡೀ ಮಾನವ ಜನಾಂಗದ ಕಲ್ಯಾಣಕ್ಕೆ ಪೂರಕವಾಗಿದೆ ಎಂದು ರಂಗಾಯಣದ ಮಾಜಿ ನಿರ್ದೇಶಕ ಹಾಗೂ ಪತ್ರಕರ್ತ ಪ್ರಭಾಕರ ಜೋಶಿ ಹೇಳಿದರು.

ನಗರದಲ್ಲಿ ಇಂದು ಎಸ್ ಎಂ ಪಂಡಿತ್ ರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಇವರುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಶ್ರೀ ಶಂಕರಾಚಾರ್ಯರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಶಂಕರಾಚಾರ್ಯರು ವೇದಗಳಿಗೆ ಹೊಸ ಭಾಷೆಯ ಬರೆಯುವ ಮೂಲಕ ಸಮಾಜಕ್ಕೆ ಸರಿಯಾದ ದಾರಿಯನ್ನು ತೋರಿಸಿಕೊಟ್ಟಿದ್ದಾರೆ. ಅವರು ಯಾವುದೇ ಹೊಸ ಸಿದ್ಧಾಂತವನ್ನು ಹುಟ್ಟುಹಾಕಲಿಲ್ಲ, ಬದಲಾಗಿ ಅಸ್ತಿತ್ವದಲ್ಲಿದ್ದ ವೇದಗಳ ಜ್ಞಾನವನ್ನೇ ದರ್ಶನವನ್ನಾಗಿ ರೂಪಿಸಿದರು ಎಂದು ತಿಳಿಸಿದರು.

ಧರ್ಮವು ಸರಿಯಾದ ದಾರಿಯಲ್ಲಿದ್ದರೆ ಅದು ಬದುಕಿಗೆ ಬೆಳಕಾಗುತ್ತದೆ. ಅದೇ ಧರ್ಮ ಹಾದಿ ತಪ್ಪಿದರೆ ಸಮಾಜಕ್ಕೆ ಬೆಂಕಿಯಾಗಿ ಪರಿಣಮಿಸುತ್ತದೆ. ಮನುಷ್ಯರು ಸರಿ–ತಪ್ಪುಗಳ ವಿವೇಚನೆಯೊಂದಿಗೆ ಶಂಕರಾಚಾರ್ಯರ ಅಹಿಂಸಾತ್ಮಕ ಮತ್ತು ಜ್ಞಾನಯುಕ್ತ ಹಾದಿಯನ್ನು ಅನುಸರಿಸುವುದು ಇಂದಿನ ಕಾಲದ ಅವಶ್ಯಕತೆಯಾಗಿದೆ ಎಂದರು.

ಶ್ರೀ ಶೃಂಗೇರಿ ಶಾರದಾ ಪೀಠ ವಿಶೇಷ ಪ್ರತಿನಿಧಿ ಪ್ರಕಾಶ ಎಚ್. ಕುಲಕರ್ಣಿ ಅವರು ಮಾತನಾಡಿ, ಶೃಂಗೇರಿ ಜಗದ್ಗುರುಗಳ ಆಶಯದಂತೆ ರಾಜ್ಯದ

ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಶಂಕರಜಯಂತಿಯನ್ನು ಅಧಿಕೃತವಾಗಿ ಆಚರಿಸುತ್ತಿರುವುದು ಅತ್ಯಂತ ಶ್ಲಾಘನೀಯ ಎಂದರು.

ಆದಿ ಶಂಕರಾಚಾರ್ಯರು 8ನೇ ಶತಮಾನದಲ್ಲೇ ಸಮಾಜದಲ್ಲಿ ಸಮಾನತೆ ಹಾಗೂ ಸ್ತ್ರೀ ಸ್ವಾತಂತ್ರ್ಯದ ತತ್ವಗಳನ್ನು ಸಾರಿದ್ದರು. ಅವರ ಅದ್ವೈತ ಸಿದ್ಧಾಂತವನ್ನು ಪ್ರತಿಯೊಬ್ಬರೂ ಪಾಲಿಸಬೇಕು ಎಂದು ಹೇಳಿದರು.



ಜಿಲ್ಲಾಧಿಕಾರಿ ಕಚೇರಿಯ ಸಹಾಯಕ ಶಿವಪ್ರಭು ಹಿರೇಮಠ ಅವರು ಮಾತನಾಡಿ, ಇಂದಿನ ಸಮಾಜದಲ್ಲಿ ನಮಗೆ ಏಳನೇ ಶತಮಾನದ ಶಂಕರಾಚಾರ್ಯರು ಮತ್ತು ಬಸವಣ್ಣನವರಂತಹ ಶರಣರು ನೆನಪಿದ್ದಾರೆ ಎಂದರೆ ಅದಕ್ಕೆ ಅವರು ಸಮಾಜಕ್ಕೆ ನೀಡಿದ ಕೊಡುಗೆಯೇ ಕಾರಣ. ಶರಣರ ವಿಚಾರಗಳನ್ನು ನಾವು ಕೇವಲ ಭಾಷಣಕ್ಕೆ ಸೀಮಿತಗೊಳಿಸುತ್ತಿದ್ದೇವೆ, ಆದರೆ ಅವುಗಳನ್ನು ವೈಯಕ್ತಿಕ ಜೀವನದಲ್ಲಿ ಅಳವಡಿಸಿಕೊಳ್ಳುತ್ತಿಲ್ಲ. ಪ್ರವಚನದಲ್ಲಿ ಪ್ರೀತಿಯ ಬಗ್ಗೆ ಕೇಳುವ ನಾವು ಮನೆಗೆ ಬಂದ ಕೂಡಲೇ ನೆರೆಹೊರೆಯವರೊಂದಿಗೆ ಜಗಳವಾಡುತ್ತೇವೆ. ಇಂದಿನ ಶಿಕ್ಷಿತ ಸಮಾಜದಲ್ಲಿ ಸಂಸ್ಕಾರದ ಕೊರತೆ ಎದ್ದು ಕಾಣುತ್ತಿದೆ ಎಂದರು.

ಯಾದಗಿರಿ ಪಶುಪಾಲನ ಇಲಾಖೆ ಪಶು ವೈದ್ಯಕೀಯ ಪರೀಕ್ಷಕಿ ಅನುರಾಧ ನಾಯಕ್ ಅವರು ಉಪನ್ಯಾಸ ನೀಡಿ ಮಾತನಾಡಿ, ಆದಿ ಶಂಕರಾಚಾರ್ಯರು ಕೇವಲ ದಾರ್ಶನಿಕರಲ್ಲ, ಅವರು ಅಧ್ಯಾತ್ಮದ ಮೂಲಕ ಭಾರತವನ್ನು ಭಾವನಾತ್ಮಕವಾಗಿ ಒಂದುಗೂಡಿಸಿದ ಮಹಾನ್ ಸಂಘಟನಾ ಚತುರರು. ಧರ್ಮವು ಸಂಕಷ್ಟದಲ್ಲಿದ್ದಾಗ ಶಂಕರಾಚಾರ್ಯರು 'ಅದ್ವೈತ ಸಿದ್ಧಾಂತ'ದ ಮೂಲಕ ಜೀವ ಮತ್ತು ಪರಮಾತ್ಮ ಒಂದೇ ಎಂದು ಸಾರಿದರು.

# ನಾವೀನ್ಯತೆ ಸಾಮಾಜಿಕ ಜವಾಬ್ದಾರಿ ವಿದ್ಯಾರ್ಥಿಗಳಿಗೆ ಅಗತ್ಯ: ರಾಜ್ಯಪಾಲ




• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

"ಜ್ಞಾನ ಮತ್ತು ತಂತ್ರಜ್ಞಾನ ವೇಗವಾಗಿ ಬದಲಾಗುತ್ತಿರುವ ಯುಗದಲ್ಲಿ ವಿದ್ಯಾರ್ಥಿಗಳಿಗೆ ನಿರಂತರವಾಗಿ ಕಲಿಯುವ ಸಾಮರ್ಥ್ಯ, ನಾವೀನ್ಯತೆಯ ಮನಸ್ಥಿತಿ ಮತ್ತು ಸಾಮಾಜಿಕ ಜವಾಬ್ದಾರಿಯ ಪ್ರಜ್ಞೆ ಅತ್ಯಗತ್ಯವಾಗಿದೆ ಎಂದು ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ಹೇಳಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ ಘಟಿಕೋತ್ಸವ ಸಮಾರಂಭದಲ್ಲಿ ಗೌರವಾನ್ವಿತ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರೊಂದಿಗೆ ಭಾಗವಹಿಸಿ ಅವರು ಮಾತನಾಡಿದರು. "ವಿದ್ಯಾರ್ಥಿಗಳು ಜ್ಞಾನವನ್ನು ವೈಯಕ್ತಿಕ ಯಶಸ್ಸಿಗೆ ಮಾತ್ರವಲ್ಲದೆ ಸಮಾಜ ಮತ್ತು ರಾಷ್ಟ್ರದ ಉನ್ನತಿಗಾಗಿಯೂ ಬಳಸಬೇಕು" ಎಂದರು.

" ಪ್ರಸ್ತುತ ಭಾರತ ಜಾಗತಿಕ ವೇದಿಕೆಯಲ್ಲಿ ಉದಯೋನ್ಮುಖ ಶಕ್ತಿಯಾಗಿ ಹೊರಹೊಮ್ಮುತ್ತಿದೆ. ನಮ್ಮ ದೇಶದ ಯುವ ಶಕ್ತಿ ನಮ್ಮ ದೊಡ್ಡ ಆಸ್ತಿ. "ಸ್ವಾವಲಂಬಿ ಭಾರತ"ವನ್ನು ನಿರ್ಮಿಸುವಲ್ಲಿ ಯುವಶಕ್ತಿಯ ಪಾತ್ರ ಅತ್ಯಂತ ಮುಖ್ಯವಾಗಿದೆ. ಎಲ್ಲಿಗೆ ಹೋದರೂ, ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಿದರೂ, ಶ್ರೇಷ್ಠತೆ, ಪ್ರಾಮಾಣಿಕತೆ ಮತ್ತು ಸೇವಾ ಮನೋಭಾವವು ಯುವಜನತೆಯ ಮಾರ್ಗದರ್ಶಿ ತತ್ವಗಳಾಗಿರಲಿ" ಎಂದು ಹೇಳಿದರು.

"ಗುಣಮಟ್ಟದ ಶಿಕ್ಷಣ, ಸಂಶೋಧನೆ ಮತ್ತು ನಾವೀನ್ಯತೆಯ ಮೂಲಕ ದೇಶದ ಅಭಿವೃದ್ಧಿಗೆ ಗಮನಾರ್ಹ ಕೊಡುಗೆಗಳನ್ನು ನೀಡಿದೆ. ಹೊಸ ಶಿಕ್ಷಣ ನೀತಿಗೆ ಅನುಗುಣವಾಗಿ, ಬಹುಶಿಸ್ತೀಯ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿಗೆ ಒತ್ತು ನೀಡುವುದು ಇಂದಿನ ಅಗತ್ಯವಾಗಿದೆ ಮತ್ತು ಈ ವಿಶ್ವವಿದ್ಯಾಲಯವು ಈ ದಿಕ್ಕಿನಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂಬ ವಿಶ್ವಾಸವಿದೆ" ಎಂದು ಭರವಸೆ ವ್ಯಕ್ತಪಡಿಸಿದರು.

"ಪರಿಸರ ಸಂರಕ್ಷಣೆ ಅಭಿವೃದ್ಧಿಯಷ್ಟೇ ಮುಖ್ಯವಾಗಿದೆ. ಯುವಪೀಳಿಗೆ ಸುಸ್ಥಿರ ಅಭಿವೃದ್ಧಿಯ ತತ್ವಗಳನ್ನು ಅಳವಡಿಸಿಕೊಂಡು, ಪ್ರಕೃತಿಗೆ ಸಂವೇದನಾಶೀಲರಾಗಿ ಮತ್ತು ಜವಾಬ್ದಾರಿಯುತ ನಾಗರಿಕರಾಗಬೇಕು. "ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ" ಅಂದರೆ, ಒಬ್ಬ ವ್ಯಕ್ತಿಗೆ ತನ್ನ ಕೆಲಸವನ್ನು ಮಾಡುವ ಹಕ್ಕಿದೆ, ಆದರೆ ಅದರ ಫಲಿತಾಂಶಗಳ ಬಗ್ಗೆ ಚಿಂತಿಸಬಾರದು. ಸರಳವಾಗಿ ಹೇಳುವುದಾದರೆ, ನಿಮ್ಮ ಕೆಲಸವನ್ನು ಸಂಪೂರ್ಣ ಸಮರ್ಪಣೆಯಿಂದ ಮಾಡಿ ಮತ್ತು ಫಲಿತಾಂಶಗಳ ಬಗ್ಗೆ ಚಿಂತಿಸಬೇಡಿ. ಈ ದಿನ ಪದವಿ ಪಡೆದ ಪ್ರತಿಯೊಬ್ಬ ವಿದ್ಯಾರ್ಥಿಯು ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳೊಂದಿಗೆ ಸಜ್ಜಾಗಿದ್ದಾರೆ. ಆ ಜ್ಞಾನವನ್ನು ಸಮಾಜದ ಕಲ್ಯಾಣಕ್ಕಾಗಿ ಉಪಯೋಗಿಸಿಕೊಳ್ಳಿ" ಎಂದು ಕರೆ ನೀಡಿದರು.

ಈ ವೇಳೆ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಸೇರಿದಂತೆ ಮುಂತಾದ ಗಣ್ಯರು ಹಾಜರಿದ್ದರು.

# 174ನೇ ದಿನದ ಕಾರ್ಖಾನೆ ತೊಲಗಿಸಿ ಧರಣಿಗೆ ಹೊಸಳ್ಳಿ ಯುವಕ ಸಂಘ ಬೆಂಬಲ

• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ




ನಗರಸಭೆ ಮುಂದಿನ ಬಲ್ಡೋಟ ತೊಲಗಿಸಿ ಕೊಪ್ಪಳ ಉಳಿಸಿ, ಕೇಂದ್ರ ಪರಿಸರ ಇಲಾಖೆ ಶಿಫಾರಸಿನಂತೆ ಅಲ್ಲಾನಗರ, ಹಿರೇಬಗನಾಳ ಸುತ್ತಲಿನ ಸ್ಪಾಂಜ್ ಐರನ್ ಘಟಕಗಳ ಸ್ಥಳಾಂತರಕ್ಕೆ ಆಗ್ರಹಿಸಿ, ಬಸಾಪುರ ಕೆರೆ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಿ, ನಗರ ಸಮೀಪದ ಬಲ್ಡೋಟ ಎಂ.ಎಸ್.ಪಿ.ಎಲ್ ಪೆಲ್ಲೆಟ್ ಘಟಕ ಬಂದ್ ಮಾಡಬೇಕೆಂದು 174ನೇ ದಿನದಿಂದ ನಡೆಯುತ್ತಿರುವ ಧರಣಿ ಹೋರಾಟಕ್ಕೆ ಬಿ. ಹೊಸಳ್ಳಿ ಗ್ರಾಮ ಯುವಕ ಸಂಘ ಬೆಂಬಲಿಸಿತು.

ಯುವಕ ಸಂಘ ಮುಖಂಡ ನಾಗರಾಜ ದೊಡ್ಡಮನಿ ಮಾತನಾಡಿ, ಬಿ. ಹೊಸಳ್ಳಿ ಗ್ರಾಮದ ಕೃಷಿ ಬೆಳೆಗಳು ಕಾರ್ಖಾನೆ ಧೂಳು ಬೀಳುವುದರಿಂದ ಹಾಳಾಗುತ್ತಿವೆ. ಇಳುವರಿ ಬರುವುದಿಲ್ಲ. ಬೆಳೆ ಬಂದರೂ ಕಳಪೆ ಗುಣಮಟ್ಟದ ಕಾರಣದಿಂದ ಮಾರುಕಟ್ಟೆಯಲ್ಲಿ ಮಾರುವುದಿಲ್ಲ. ಈ ಸ್ಪಾಂಜ್ ಐರನ್, ವಿದ್ಯುತ್, ಉಕ್ಕು ತಯಾರಿಸುವ ಘಟಕಗಳನ್ನು ತಕ್ಷಣದಿಂದಲೇ ಮುಚ್ಚಿ ಈ ಹಳ್ಳಿಯ ಕೃಷಿ, ಜನರ ಆರೋಗ್ಯ, ಜೀವ ಉಳಿಸಬೇಕೆಂದು ಸರಕಾರಕ್ಕೆ ಆಗ್ರಹ ಮಾಡಿದರು.

ಗುರುವಾರ 175ನೇ ದಿನದ ಹೋರಾಟ ಬೆಂಬಲಿಸಲು ನಾಡಿನ ಹಿರಿಯ ಸಾಹಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಕುಂ. ವೀರಭದ್ರಪ್ಪ, ಆಳಂದ ವಿರಕ್ತ ಮಠದ ಕೋರಣೇಶ್ವರ ಸ್ವಾಮಿಗಳು, ಧಾರವಾಡ ನಿವಾಸಿ ಪರಿಸರ, ಮಹಿಳಾಪರ ಬರಹಗಾರರಾದ ಶಾರದಾ ಗೋಪಾಲ ಅವರು ಬಾಧಿತ ಹಿರೇಬಗನಾಳ, ಹಾಲವರ್ತಿ, ಕುಣಿಕೇರಿ ಮತ್ತು ತಾಂಡಾ ಜನರನ್ನು ಭೇಟಿ ಮಾಡಿ ಅವರ ಅಹವಾಲು ಆಲಿಸಿ ಬಂದು ವೇದಿಕೆಯಲ್ಲಿ ಮಾತನಾಡುವರು ಎಂದು ಜಂಟಿ ಕ್ರಿಯಾ ವೇದಿಕೆ ಪ್ರಕಟಣೆ ಮಾಡಿದೆ.

ಧರಣಿಯಲ್ಲಿ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಎಚ್.ಎಸ್.ಪಾಟೀಲ್, ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ, ಮಂಜುನಾಥ ಜಿ. ಗೊಂಡಬಾಳ, ಪ್ರಕಾಶಕ ಡಿ.ಎಂ.ಬಡಿಗೇರ, ನಿವೃತ್ತ ಉಪನ್ಯಾಸಕ ಶಂಭುಲಿಂಗಪ್ಪ ಹರಗೇರಿ, ರವಿ ಕಾಂತನವರ, ರಾಜಶೇಖರ ಏಳುಬಾವಿ, ಮೂಕಪ್ಪ ಮೇಸ್ತ್ರಿ ಬಸಾಪುರ, ಶರಣು ಶೆಟ್ಟರ್, ಬಿ.ಜಿ. ಕರಿಗಾರ, ಮಂಜುನಾಥ ಮಾಲಿಪಾಟೀಲ್, ಯಮನೂರಪ್ಪ ಹಾಳಕೇರಿ, ರಮೇಶ ಡಂಬ್ರಳ್ಳಿ, ಬಸವರಾಜ ಪೂಜಾರ ಕಾಸನಕಂಡಿ, ಶಿವಕುಮಾರ ಹೊಸಳ್ಳಿ, ನಾಗರಾಜ ಕುಷ್ಟಗಿ, ಹನುಮಪ್ಪ ಹೊಸಳ್ಳಿ, ಆಟೋ ಮಂಜಪ್ಪ ಆಟೋ, ಸಂಗಮೇಶ್ವರ ಪಾಟೀಲ್, ಪಂಪಣ್ಣ ಹನುಮಪ್ಪ ಹೊಸಳ್ಳಿ, ದೇವರಾಜ ಹೊಸಳ್ಳಿ, ಬಸವರಾಜ ಹೊಸಳ್ಳಿ, ಶಾಂತಕುಮಾರ ಹೊಸಳ್ಳಿ, ಪಂಪಣ್ಣ ಚಿಂತಪಲ್ಲಿ, ಸುಂಕಮ್ಮ ಪಡಚಿಂತಿ, ಭೀಮಪ್ಪ ಯಲಬುರ್ಗಾ, ಮಹಾದೇವಪ್ಪ ಮಾವಿನಮಡು, ವಿಜಯಮಹಾಂತೇಶ ಹಟ್ಟಿ, ಶಿವಪ್ಪ ಜಲ್ಲಿ, ರತ್ನಮ್ಮ ದೊಡ್ಡಮನಿ ಇದ್ದರು.

# ಗುತ್ತಿಗೆ ಆಧಾರದ ಮೇಲೆ ಮಾಜಿ ಸೈನಿಕರ ನೇಮಕಾತಿಗೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ರಾಜ್ಯದ ಹಲವು ಜಿಲ್ಲೆಗಳಲ್ಲಿ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯಲ್ಲಿ ಖಾಲಿಯಿರುವ ವೀಕ್ಷಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ, ಈ ಹುದ್ದೆಗಳಿಗೆ ತಾತ್ಕಾಲಿಕವಾಗಿ 11 ತಿಂಗಳ ಗುತ್ತಿಗೆ ಆಧಾರದ ಮೇಲೆ ಒಟ್ಟು 550 ಮಾಜಿ ಸೈನಿಕರನ್ನು ನೇಮಿಸಿಕೊಳ್ಳಲು ರಾಜ್ಯ ಸರ್ಕಾರದಿಂದ ಅನುಮೋದನೆ ದೊರೆತ್ತಿದ್ದು, ಇದಕ್ಕಾಗಿ ಕಲಬುರಗಿ, ಬೀದರ, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ಆಸಕ್ತಿಯುಳ್ಳ ಮಾಜಿ ಸೈನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಕಲಬುರಗಿ, ಬೀದರ, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ಆಸಕ್ತಿಯುಳ್ಳ ಮಾಜಿ ಸೈನಿಕರು ಸ್ವಯಂ ವಿವರ (ಖಇ–ಖಗಒಇ) ಗಳನ್ನೊಳಗೊಂಡ ಲಿಖಿತ ಅರ್ಜಿಯನ್ನು 2026ರ ಏಪ್ರಿಲ್ 24ರೊಳಗಾಗಿ (ಪ್ರತಿದಿನ ಬೆಳಿಗ್ಗೆ 8 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ) ಕಲಬುರಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರ ಕಚೇರಿಯಲ್ಲಿ ಖುದ್ದಾಗಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರ ಕಚೇರಿಯನ್ನು ಹಾಗೂ ಕಚೇರಿ ದೂರವಾಣಿ ಸಂಖ್ಯೆ 08472–225003ಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

# ಆಕ್ಷೇಪಣೆ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಕಲಬುರಗಿ ಮಹಾನಗರ ಪಾಲಿಕೆಯಿಂದ 2025–26ನೇ ಸಾಲಿಗೆ 24.10ರ ಯೋಜನೆಯ 2024–25ನೇ ಸಾಲಿನ ಎಸ್.ಎಫ್.ಸಿ. ಪರಿಷ್ಕೃತ ಕ್ರಿಯಾ ಯೋಜನೆಯಡಿ ಪರಿಶಿಷ್ಟ ಜಾತಿಯ ಎಮ್.ಬಿ.ಬಿ.ಎಸ್/ ಬಿ.ಇ. ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಲ್ಯಾಪ್‌ಟಾಪ್ ಖರೀದಿಗಾಗಿ ಶೇ.24.10ರ ಅನುದಾನದಡಿ ಸಹಾಯಧನಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕ ಅರ್ಹ ಹಾಗೂ ಅನರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕಲಬುರಗಿ ಮಹಾನಗರಪಾಲಿಕೆಯ ನೋಟೀಸ್ ಬೋರ್ಡ್‌ನಲ್ಲಿ ಈಗಾಗಲೇ ಪ್ರಚುರಪಡಿಸಲಾಗಿದೆ.

ಈ ತಾತ್ಕಾಲಿಕ ಅರ್ಹ ಹಾಗೂ ಅನರ್ಹ ಅಭ್ಯರ್ಥಿಗಳ ಪಟ್ಟಿಗೆ ಆಕ್ಷೇಪಣೆಗಳು ಇದ್ದಲ್ಲಿ 2026ರ ಮೇ 13ರ ರೊಳಗಾಗಿ ಪೂರಕ ದಾಖಲೆಗಳೊಂದಿಗೆ ಕಲಬುರಗಿ ಮಹಾನಗರಪಾಲಿಕೆ ಕಚೇರಿಯಲ್ಲಿ ಆಕ್ಷೇಪಣೆ ಸಲ್ಲಿಸಬೇಕು. ತದನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕಲಬುರಗಿ ಮಹಾನಗರ ಪಾಲಿಕೆಯ ಉಪ ಆಯುಕ್ತರು (ಆಡಳಿತ) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ತರಬೇತಿ ಕಾರ್ಯಕ್ರಮ: ಅರ್ಜಿ ಆಹ್ವಾನ

ಕಲಬುರಗಿ,ಏ.22.(ಕರ್ನಾಟಕ ವಾರ್ತೆ)–ಕಲಬುರಗಿ ಎಸ್.ಬಿ.ಐ. ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ಜಿಲ್ಲೆಯ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಉಚಿತವಾಗಿ ಕೆಳಕಂಡ ದಿನಾಂಕಗಳಂದು ವಿವಿಧ ತರಬೇತಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಇದಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಸ್ಥೆಯ ಎಸ್.ಬಿ.ಐ. ಆರ್‌ಸೆಟ್ ನಿರ್ದೇಶಕರು ತಿಳಿಸಿದ್ದಾರೆ.

ಏಪ್ರಿಲ್ 27 ರಿಂದ ಮೇ 10 ರವರೆಗೆ ಕೃಷಿ ಉದ್ಯಮಿ (ಕುರಿ ಮತ್ತು ಆಡು ಸಾಕಾಣಿಕೆ, ಹೈನುಗಾರಿಕೆ ಮತ್ತು ಎರೆಹುಳು ಗೊಬ್ಬರ ತಯಾರಿಕೆ) ತರಬೇತಿ ನೀಡಲಾಗುತ್ತಿದ್ದು, ಅರ್ಜಿ ಸಲ್ಲಿಕೆಗೆ ಏಪ್ರಿಲ್ 26 ರಂದು ಕೊನೆಯ ದಿನವಾಗಿದೆ.

ಮೇ 15 ರಿಂದ ಜೂನ್ 14 ರವರೆಗೆ ಹೊಲಿಗೆ ತರಬೇತಿ (ಮಹಿಳೆಯರಿಗಾಗಿ) ನೀಡಲಾಗುತ್ತಿದ್ದು, ಅರ್ಜಿ ಸಲ್ಲಿಕೆಗೆ ಮೇ 14 ರಂದು ಕೊನೆಯ ದಿನವಾಗಿದೆ.


ಮೇ 7 ರಿಂದ ಜೂನ್ 10 ರವರೆಗೆ ಬ್ಯೂಟಿ ಪಾರ್ಲರ್ ಮತ್ತು ಮ್ಯಾನೇಜ್‌ಮೆಂಟ್ ತರಬೇತಿ ನೀಡಲಾಗುತ್ತಿದ್ದು, ಅರ್ಜಿ ಸಲ್ಲಿಕೆಗೆ ಮೇ 6 ರಂದು ಕೊನೆಯ ದಿನವಾಗಿದೆ. ಮೇ 10 ರಿಂದ ಜೂನ್ 10 ರವರೆಗೆ ಎಲೆಕ್ಟ್ರಿಕಲ್ ಮೋಟಾರ ರಿವೈಂಡಿಂಗ್ ಮತ್ತು ರಿಪೇರ್ ಸರ್ವಿಸ್ ತರಬೇತಿ ನೀಡಲಾಗುತ್ತಿದ್ದು, ಅರ್ಜಿ ಸಲ್ಲಿಕೆಗೆ ಮೇ 09 ರಂದು ಕೊನೆಯ ದಿನವಾಗಿದೆ.

ಈ ತರಬೇತಿ ಸಂದರ್ಭದಲ್ಲಿ ಉಚಿತ ಊಟ ಹಾಗೂ ವಸತಿ ಸೌಲಭ್ಯ ನೀಡಲಾಗುತ್ತದೆ. ವಯೋಮಿತಿ 18 ರಿಂದ 45 ವರ್ಷದೊಳಗಿನ ಬಿ.ಪಿ.ಎಲ್., ಅಂತ್ಯೋದಯ ರೇಷನ್, ಎಮ್‌ಜಿಎನ್‌ಆರ್‌ಇಜಿಎ ಕಾರ್ಡ್ ಹೊಂದಿದ ಕುಟುಂಬದ ನಿರುದ್ಯೋಗಿ ಅಭ್ಯರ್ಥಿಗಳು ಸಂಸ್ಥೆಯಿಂದ ನಿಗದಿತ ಅರ್ಜಿ ನಮೂನೆಯನ್ನು ಪಡೆದು ಭರ್ತಿ ಮಾಡಿ ಅವಶ್ಯಕ ದಾಖಲಾತಿಗಳೊಂದಿಗೆ ಮೇಲ್ಕಂಡ ಕೊನೆಯ ದಿನಾಂಕದೊಳದಾಗಿ ಅರ್ಜಿ ಸಲ್ಲಿಸಬೇಕು.

ಮತ್ತಿತರ ಹೆಚ್ಚಿನ ಮಾಹಿತಿಗಾಗಿ ತರಬೇತಿ ಸಂಸ್ಥೆಯನ್ನು ಬೆಳಿಗ್ಗೆ 9.30 ರಿಂದ ಸಂಜೆ 5.30 ಗಂಟೆಯವರೆಗೆ ಹಾಗೂ ಮೊಬೈಲ್ ಸಂಖ್ಯೆ 9901694389, 9900135705, 7019939996, 9901098123 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

# ಅದಿರು ಸಾಗಾಣೆ ಪತ್ತೆ ಹಚ್ಚಿದ ತುಕರಾಂ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ




ಈ ಜಿಲ್ಲೆಗೂ ಅಕ್ರಮ ಅದಿರು ಸಾಗಾಣೆಗೂ ಬಿಡಿಸಲಾರದ ಸಂಬಂಧ, ನಂಟು. ಏನೇ ಕ್ರಮಗಳನ್ನು ಕೈಗೊಂಡರೂ ಅಕ್ರಮ ದಂಧೆ ಸ್ವರೂಪ ಬೇರೆ ಬೇರೆ ರೂಪದಲ್ಲಿ ನಡೆಯುತ್ತಲೇ ಇದೆ ಎಂಬುದನ್ನು ಲೋಕಸಭಸ ಸದಸ್ಯ ಇ.ತುಕರಾಂ ಅವರು ಇಂದು ಪತ್ತೆಹಚ್ಚಿ ಹೊರ ಹಾಕಿದ್ದಾರೆ.

ಸಂಡೂರು ಭಾಗದ ಗಣಿ ಪ್ರದೇಶಗಳಿಂದ ಕಬ್ಬಿಣ ಅದಿರನ್ನು ತುಂಬಿಕೊಂಡು ದಿನನಿತ್ಯ 1500 ಕ್ಕೂ ಹೆಚ್ಚು ಲಾರಿಗಳು ಜಿಂದಾಲ್ ಉಕ್ಕು ಕಾರ್ಖಾನೆ ಮತ್ತು ಇತರೇ ಕಾರ್ಖಾನೆಗಳಿಗೆ ಅದಿರನ್ನು ಸಾಗಿಸುತ್ತವೆ.

ಒಂದು ಲಾರಿಯಲ್ಲಿ ಕನಿಷ್ಟ 18 ರಿಂದ 40 ಟನ್ ವರೆಗೆ ಅದಿರನ್ನು ಸಾಗಾಟ ಮಾಡಲಾಗುತ್ತದೆ.

ಅದಿರು ಉತ್ಪಾದನೆಯ ಪ್ರದೇಶದಲ್ಲಿ ಪರ್ಮಿಟ್ ಜನರೇಟ್ ಮಾಡಿ ಅದರಲ್ಲಿ ಎಷ್ಟು ಅದಿರು ಸಾಗಾಣೆ ಎಲ್ಲಿಗೆ ಮಾಡಲಾಗುತ್ತದೆ ಎಂಬುದನ್ನು ಉಲ್ಲೇಖಿಸಲಾಗಿರುತ್ತದೆ.

ಅದಿರನ್ನು ಹೊತ್ತು ತರುವ ಲಾರಿ ಪರ್ಮಿಟ್ ನೊಂದಿಗೆ ಬರುತ್ತದೆ. ಲಾರಿ ನಿಗಧಿ ಪ್ರದೇಶಕ್ಕೆ ನಿಗಧಿತ ಅದಿರನ್ನು ಸಾಗಾಟ ಮಾಡುತ್ತಿದೆಯೇ ಎಂವುದನ್ನು ಪತ್ತೆಹಚ್ಚಲು ಬಂಡಿ ಹಟ್ಟಿ ಬಳಿ ಚೆಕ್ ಪೋಸ್ಟ್ ನಿರ್ಮಾಣ ಮಾಡಿದೆ. ಗಣಿ ಇಲಾಖೆ. ಇಲ್ಲಿ ಲಾರಿಯ ತೂಕ, ಎಷ್ಟು ಪ್ರಮಾಣದ ಅದಿರು ಸಾಗಾಟ ಆಗುತ್ತದೆ ಎಂವುದನ್ನು ವೇ ಬ್ರಿಡ್ಜ್ ಮೂಲಕ ಪರಿಶೀಲನೆ ಮಾಡಲಾಗುತ್ತದೆ.

ಆದರೆ ಕಳೆದ ಹಲವು ತಿಂಗಳಿಂದ 4 ಚೆಕ್ ಪೋಸ್ಟ್ ಗಳಲ್ಲಿ ಕೇವಲ ಒಂದು ಮಾತ್ರ ಕೆಲಸ ಮಾಡುತ್ತಿದೆ. ಇನ್ನು ಮೂರು ಕೆಟ್ಟು ನಿಂತಿವೆ. ಆದರೂ ಈ ಕೆಟ್ಟ ಚೆಕ್ ಪೋಸ್ಟ್ ನಲ್ಲಿಯೇ ಲಾರಿ ಸಾಗಿ ಮುದ್ರೆ ಹಾಕಿಸಿಕೊಂಡು ಎಲ್ಲ ಸರಿ ಇದೆ ಎಂಬಂತೆ ಸಾಗಾಟ ಮಾಡಲಾಗುತ್ತಿದೆ.

ಸರಿ ಇರುವ ಚೆಕ್ ಪೋಸ್ಟ್ ನಲ್ಲಿ ಮಾತ್ರ ಸರಿಯಾದ ಪ್ರಮಾಣದ ಅದಿರು ತುಂಬಿರುವ ಲಾರಿಗಳು ಸಾಗುತ್ತವೆ. ನಿಗಧಿತ ಪ್ರಮಾಣಕ್ಕಿಂತ ಹೆಚ್ಚು ಅದಿರನ್ನು ತರುವ ಲಾರಿಗಳು ಕೆಟ್ಟಿರುವ ಚೆಕ್ ಪೋಸ್ಟ್‌ಗಳಲ್ಲಿ ಸಾಗಿ ಅಕ್ರಮ ವ್ಯವಹಾರ ಮಾಡುತ್ತಿವೆ ಎಂಬುದು ಈಗ ಬಹಿರಂಗಗೊಂಡಿದೆ.

ಇಲ್ಲಿ ಇಂದು ಇದನ್ನು ಪತ್ತೆಹಚ್ಚಿದ ಲೋಕಸಭಾ ಸದಸ್ಯ ಇ.ತುಕರಾಂ ಅವರು ಇಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಪ್ರಶ್ನಿಸಿದರೆ ಕೆಟ್ಟಿರುವ ಬಗ್ಗೆ ಕಳೆದ ಮೂರು ತಿಂಗಳಿಗೂ ಮೊದಲೇ ಮೇಲಾಧಿಕಾರಿಗಳಿಗೆ ತಿಳಿಸಿದೆ. ಆದರೆ ಅವರು ಸರಿ ಮಾಡಿಸಿಲ್ಲ ಎನ್ನುತ್ತಿದ್ದಾರೆ.

ಇದರಲ್ಲಿ ಗಣಿ ಇಲಾಖೆ ಅಧಿಕಾರಿಗಳು ಶಾಮೀಲಾಗಿ ಈ ದಂದೆ ನಡೆಸಿದ್ದಾರೆ. ಕೋಟ್ಯಾಂತರ ರೂ ಮೌಲ್ಯದ ಅದಿರನ್ನು ಅಕ್ರಮವಾಗಿ ಸಾಗಾಟ ನಡೆದಿದೆ ಎಂಬುದು ತುಕರಾಂ ಅವರ ಆರೋಪವಾಗಿದೆ.

ಈ ಬಗ್ಗೆ ವಿವರಣೆ ಕೇಳಲು ಕರೆ ಮಾಡಿದರೆ ಗಣಿ ಇಲಾಖೆಯ ಅಧಿಕಾರಿ ದ್ವಿತೀಯ ಅವರು ಸ್ವೀಕರಿಸಲಿಲ್ಲ.

ಒಟ್ಟಾರೆ ಇಲ್ಲಿ ಅಕ್ರಮವಾಗಿ ಅದಿರಿನ ಸಾಗಾಟ ನಡೆದಿರುವುದಂತೂ ಸತ್ಯ ಎನ್ನುತ್ತಾರೆ ಸಂಡೂರಿನ ಜನತೆ. ಇದರ ಲಾಭ ಪಡೆಯುವವರು ಜಿಂದಾಲ್ ಸಂಸ್ಥೆ. ಇನ್ನು ಎನ್ ಎಂಡಿಸಿ ಅಧಿಕಾರಿಗಳ ಕೈವಾಡವೂ ಇರುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

# ಸಿಇಟಿ ಪರೀಕ್ಷೆ: ನಿಷೇಧಾಜ್ಞೆ ಜಾರಿ

• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ

ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿನ ಸರ್ಕಾರಿ ಸೀಟುಗಳ ಪ್ರವೇಶಕ್ಕಾಗಿ ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ–2026ರ (ಸಿಇಟಿ) ಪರೀಕ್ಷೆಗಳು ಏಪ್ರಿಲ್ 23 ಮತ್ತು 24 ರಂದು ನಡೆಯಲಿದ್ದು, ಪರೀಕ್ಷೆಗಳು ಸುಗಮ ಹಾಗೂ ಶಾಂತಿಯುತವಾಗಿ ನಡೆಯುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿ ಪ್ರದೇಶದಲ್ಲಿ ನಿಷೇಧಾಜ್ಞೆಯನ್ನು ಜಾರಿಗೊಳಿಸಿ ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಅವರು ಆದೇಶ ಹೊರಡಿಸಿದ್ದಾರೆ.

ಸಿಇಟಿ ಪರೀಕ್ಷೆಗಳು ಏಪ್ರಿಲ್ 23 ಮತ್ತು 24 ರಂದು ಬೆಳಿಗ್ಗೆ 10.30 ರಿಂದ 11.50ರ ವರೆಗೆ ಹಾಗೂ ಮಧ್ಯಾಹ್ನ 2.30 ರಿಂದ 3.50 ಗಂಟೆಯವರೆಗೆ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಒಟ್ಟು 17 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, ಪರೀಕ್ಷೆಗಳನ್ನು ಸುಗಮ ಮತ್ತು ಶಾಂತಿಯುತವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಅಂತರದ ಪ್ರದೇಶದಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163 ರನ್ವಯ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ನಿಷೇಧಾಜ್ಞೆ ಜಾರಿಯನ್ವಯ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಎಸ್.ಟಿ.ಡಿ. ಮೊಬೈಲ್, ಪೇಜರ್, ಜರಾಕ್ಸ್, ಟೈಪಿಂಗ್ ಮುಂತಾದವುಗಳನ್ನು ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಹಾಗೂ ನಿಯೋಜಿತ ಶಿಕ್ಷಕರನ್ನು ಜಾಗೃತದಳದವರನ್ನು ಹೊರತುಪಡಿಸಿ ಇನ್ನುಳಿದವರಿಗೆ ಪರವಾನಿಗೆ ಇಲ್ಲದೆ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಮಾಡುವುದನ್ನು ನಿಷೇಧಿಸಿದೆ. ಪರೀಕ್ಷಾ ಕೇಂದ್ರಗಳ ಸುತ್ತಲೂ ಜನರು ಮಾರಕಾಸ್ತ್ರಗಳನ್ನು ಹಿಡಿದು ತಿರುಗಾಡುವುದನ್ನು ನಿಷೇಧಿಸಿದೆ. ಈ ಆದೇಶವು ಮದುವೆ, ಶವ ಸಂಸ್ಕಾರಗಳು ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ವಯವಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

# ಮೃತ ವ್ಯಕ್ತಿಯ ಸಂಬಂಧಿಕರ ಪತ್ತೆಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ವಿಶ್ವವಿದ್ಯಾಲಯದ ಪೊಲೀಸ್ ಠಾಣೆಯ ವ್ಯಾಪ್ತಿಯ ಆರ್ಯನ್ ಕಾಲೇಜ ಮತ್ತು ಯಲ್ಲಪ್ಪ ಪೂಜಾರಿ ಇವರ ಲೇಔಟ್ ಹತ್ತಿರ ಇರುವ ಮಹಾನಗರ ಪಾಲಿಕೆಯ ಒಳಚರಂಡಿ ನೀರಿನಲ್ಲಿ ದಿನಾಂಕ: 21–04–2026 ರಂದು ಬೆಳಿಗ್ಗೆ 11.30 ಗಂಟೆಗೆ ಸುಮಾರಿಗೆ ಅಂದಾಜು 50 ರಿಂದ 55 ವರ್ಷದ ಅಪರಿಚಿತ ಪುರುಷ ವ್ಯಕ್ತಿಯ ಶವವು ಪತ್ತೆಯಾಗಿದೆ ಎಂದು ಕಲಬುರಗಿ ನಗರ ವಿಶ್ವವಿದ್ಯಾಲಯದ ಪೊಲೀಸ್ ಠಾಣೆಯ ಎ.ಎಸ್.ಐ. ಯವರಾದ ಸೈಯದ್ ಗೌಸ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಮೃತಪಟ್ಟ ವ್ಯಕ್ತಿಯು ಸಧೃಡ ಮೈಕಟ್ಟು ಹೊಂದಿದ್ದು, ಬಿಳಿ ಬಣ್ಣದ ಹಾಫ್ ಶರ್ಟ್ ಧರಿಸಿರುತ್ತಾರೆ. ಬಲಗೈ ಮೊಂಡಾಗಿದ್ದು, ಅಂಗವಿಕಲನಾಗಿರುತ್ತಾನೆ. ಈ ಮೃತಪಟ್ಟ ವ್ಯಕ್ತಿಯ ಹೆಸರು, ವಿಳಾಸ ಹಾಗೂ ಸಂಬಂಧಿಕರ ಪತ್ತೆಗಾಗಿ ಶವವನ್ನು ಕಲಬುರಗಿ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಶವಗಾರ ಕೋಣೆಯಲ್ಲಿ ಇಡಲಾಗಿದೆ.

ಈ ಮೃತ ವ್ಯಕ್ತಿಯ ಸಂಬಂಧಿಕರು ಯಾರಾದರೂ ಇದ್ದಲ್ಲಿ ವಿಶ್ವವಿದ್ಯಾಲಯದ ಪೊಲೀಸ್ ಠಾಣೆ–ಯ ದೂರವಾಣಿ ಸಂಖ್ಯೆ 08472–263629, ವಿಶ್ವವಿದ್ಯಾಲಯದ ಪೊಲೀಸ್ ಠಾಣೆಯ ಪಿ.ಐ. ಇವರ ಮೊಬೈಲ್ ಸಂಖ್ಯೆ–9480805527 ಹಾಗೂ ಕಲಬುರಗಿ ಕಂಟ್ರೋಲ್ ರೂಮ್ ಮೊಬೈಲ್ ಸಂಖ್ಯೆ 9480805500ಗೆ ಸಂಪರ್ಕಿಸಲು ಕೋರಲಾಗಿದೆ.

# ಶಾಲಾ ವಿದ್ಯಾರ್ಥಿಗಳಿಂದ ಅಶೋಕನ ಶಿಲಾ ಶಾಸನ ವೀಕ್ಷಣೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಸಮೀಪದ ಜನತಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು, ಶಾಲಾ ಶಿಕ್ಷಕರೊಂದಿಗೆ ಮಸ್ಕಿ ಅಶೋಕನ ಶಿಲಾ ಶಾಸನ ಹಾಗೂ ಅಭಿನಂದನಾ ಸ್ಫೂರ್ತಿ ಧಾಮ ಗುರುವಾರ ವೀಕ್ಷಿಣೆ ಮಾಡಿದರು.

ಶಾಲಾ ಶಿಕ್ಷಣ ಇಲಾಖೆ ರಾಯಚೂರು-ಕ್ಷೇತ್ರ ಶಿಕ್ಷಣಾಧಿಕಾರಿ ಲಿಂಗಸುಗೂರು ಹಾಗೂ ಇಂಡಿಯಾ ಸುಧಾರ್ ಎಜುಕೇಶನ್ ಮತ್ತು ಚಾರಿಟೇಬಲ್ ಟ್ರಸ್ಟ್ ಬೆಂಗಳೂರು ಇವರುಗಳ ನೇತೃತ್ವದಲ್ಲಿ ಮಕ್ಕಳ ಮನೋಲ್ಲಾಸಕ್ಕಾಗಿ 15ದಿನಗಳ ಉಚಿತ ಬೇಸಿಗೆ ಶಿಬಿರ ನಿಮಿತ್ಯ ದೇಶ ಸುತ್ತು, ಕೋಶ ಓದು ಅನ್ನುವ ಹಾಗೆ ಜನತಾಪುರ ಶಾಲಾ ವಿದ್ಯಾರ್ಥಿಗಳು ಹಾಳೆಗಳಲ್ಲಿ ಕೌಶಲ್ಯ ತರಬೇತಿಯೊಂದಿಗೆ, ಮನೋಲ್ಲಸಕ್ಕಾಗಿ ಅಶೋಕನ ಶಿಲಾಶಾಸನ ವೀಕ್ಷಣೆ ಹಾಗೂ ಅಭಿನಂದನಾ ಸ್ಫೂರ್ತಿ ಧಾಮ ಮತ್ತು ಇತಿಹಾಸ ತಿಳುವಳಿಕೆಗಾಗಿ ವೀಕ್ಷಣೆ ಮಾಡಿದರು.ಇದೇ ವೇಳೆ ಶಾಲಾ ಶಿಕ್ಷಕ ಮೌನೇಶ್ ಎಂ. ವಿಶ್ವಕರ್ಮ ವಿದ್ಯಾರ್ಥಿಗಳಿಗೆ ಅಶೋಕನ ಚಕ್ರವರ್ತಿ ಜೀವನ ಚರಿತ್ರೆ, ಮೌರ್ಯ ಸಾಮ್ರಾಜ್ಯದ ಪರಿಚಯ, ರಕ್ತಸಿಕ್ತ ಕಳಿಂಗ ಯುದ್ಧದ ನಂತರ ಹಿಂಸಾಚಾರ, ಅಹಿಂಸೆ ಮತ್ತು ಧರ್ಮ ವಿಜಯ ನೀತಿ ವಿಷಯವಾಗಿ ಮಕ್ಕಳಿಗೆ ತಿಳಿಸಿದರು.

ಸಹ ಶಿಕ್ಷಕ ರವಿ ಕುಮಾರ, ಅಥಿತಿ ಶಿಕ್ಷಕಿ ಜ್ಯೋತಿ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಬಂಗಾರ ನಗದು ವಶ: ಆರೋಪಿ ಬಂಧನ



• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಕಳ್ಳತನ ಪ್ರಕರಣಗಳ ಪತ್ತೆಗೆ ಹುಣಸಗಿ ಹಾಗೂ ಕೆಂಭಾವಿ ಪೊಲೀಸ್ ಠಾಣೆಗಳ ಸಂಯುಕ್ತ ತಂಡ ಯಶಸ್ವಿ ಕಾರ್ಯಾಚರಣೆ ನಡೆಸಿ, ಒಟ್ಟು ಐದು ಪ್ರಕರಣಗಳನ್ನು ಬಯಲಿಗೆಳೆದು 40.80 ಲಕ್ಷ ಮೌಲ್ಯದ ಬಂಗಾರದ ಆಭರಣಗಳು ಹಾಗೂ 2.80 ಲಕ್ಷ ನಗದು ವಶಪಡಿಸಿಕೊಂಡಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ ತಿಳಿಸಿದ್ದಾರೆ.

ಪಟ್ಟಣದ ವೃತ್ತ ಕಚೇರಿ ಪೊಲೀಸ್ ಠಾಣೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು. ಆರೋಪಿಗಳಾದ ನಾಗಪ್ಪ ಮತ್ತು ಭೀರಪ್ಪ (ಮೂಲತಃ ಕೆಂಭಾವಿ) ಇವರಿಂದ ಸುಮಾರು 32 ತೊಲಿ (320 ಗ್ರಾಂ) ಬಂಗಾರದ ಆಭರಣಗಳು (ಸುಮಾರು 38 ಲಕ್ಷ ಮೌಲ್ಯ) ಹಾಗೂ 2.80 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ. ಮತ್ತೊಬ್ಬ ಆರೋಪಿ ರಾಘವೇಂದ್ರ (ಗದಗ) ಅವರಿಂದ 10 ತೊಲಿ ಬಂಗಾರದ ಆಭರಣಗಳನ್ನು ಜಪ್ತಿ ಮಾಡಲಾಗಿದೆ.

ಪ್ರಕರಣದ ವಿವರ:ಮಾರ್ಚ್ 27, 2026 ರಂದು ಹುಣಸಗಿ ಪಟ್ಟಣದ ಮಠದವರ ಓಣಿಯ ಬಾಡಿಗೆ ಮನೆಯಲ್ಲಿ ನಡೆದ ಭಾರೀ ಕಳ್ಳತನ ಪ್ರಕರಣದಲ್ಲಿ, ಅಪರಿಚಿತರು ಬಾಗಿಲು ಹಾಗೂ

ಅಲಮಾರಿಯ ಕೀಲಿಗಳನ್ನು ಮುರಿದು ಒಳನುಗ್ಗಿ, ಸುಮಾರು 73 ಗ್ರಾಂ ಬಂಗಾರದ ಆಭರಣಗಳು (ಅಂದಾಜು 8.40 ಲಕ್ಷ) ಮತ್ತು 10,000 ನಗದು ಕಳವು ಮಾಡಿದ್ದರು. ಈ ಸಂಬಂಧ ಹುಣಸಗಿ ಠಾಣೆ-ಯ ಗುನ್ನೆ ನಂ. 39/2025, 155/2025, 56/2026 ಹಾಗೂ ಕೆಂಭಾವಿ ಠಾಣೆಯ ಗುನ್ನೆ ನಂ. 46/2025 ಪ್ರಕರಣಗಳು ದಾಖಲಾಗಿದ್ದವು.ತನಿಖೆಯಲ್ಲಿ ಆರೋಪಿಗಳು ಜೇವರ್ಗಿ, ಶಹಾಪೂರ, ಸಿಂದಗಿ, ಯಲಬುರ್ಗಾ, ಬಸವನಬಾಗೇವಾಡಿ ಹಾಗೂ ರಾಯಚೂರ ನೇತಾಜಿ ನಗರ ಠಾಣೆಗಳ ವ್ಯಾಪ್ತಿಯಲ್ಲಿಯೂ ನಡೆದ ಹಲವು ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದು ಪತ್ತೆಯಾಗಿದೆ.

ಈ ಕಾರ್ಯಾಚರಣೆಯಲ್ಲಿ ಹುಣಸಗಿ ವೃತ್ತ ಕಚೇರಿ ಮತ್ತು ಕೆಂಭಾವಿ ಠಾಣೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದು, ಅವರ ಕಾರ್ಯಕ್ಕೆ ಬಹುಮಾನ ಘೋಷಿಸಲಾಗಿದೆ.ಆರೋಪಿಗಳನ್ನು ಬಂಧಿಸಲಾಗಿದೆ.ಈ ಸಂದರ್ಭದಲ್ಲಿ ಡಿವೈಎಸ್ಪಿ ಜಾವೀದ ಇನಾಂದಾರ, ಸಿಪಿಐ ರವಿಕುಮಾರ ಎಸ್.ಎನ್., ಕ್ರೈಂ ಪಿಎಸ್‌ಐ ಭಾಗಣ್ಣ, ಎಎಸ್‌ಐ ಮೌನೇಶ ಬಡಿಗೇರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಸಂಭ್ರಮದಿಂದ ಶ್ರೀನೇಟಣೇಶ್ವರ ಪಟ್ಟದದೇವರ ಕಾರ್ಯಕ್ರಮ



• ಮಲ್ಲಮ್ಮ ನುಡಿ ವಾರ್ತೆ , ಕುರುಗೋಡು

ಬಾದನಹಟ್ಟಿ ಗ್ರಾಮದಲ್ಲಿ ಸಂಭ್ರಮದಿಂದ ಜರುಗಿದ ಶ್ರೀನೇಟಣೇಶ್ವರ ಪಟ್ಟದದೇವರ ಕಾರ್ಯಕ್ರಮ

ಕುರುಗೋಡು.ಏ.23 ಸಮೀಪದ ಬಾದನಹಟ್ಟಿ ಗ್ರಾಮದಲ್ಲಿ ಹಾಲುಮತ ಸಮಾಜದ ಕರಿಮಲೆಗೋತ್ರದ ಕೊಡ್ಲೇಲ್ಲೇರು ಬೆಡಗಿನ ಹಾಲುಮತ ಸಮಾಜದ ನೇತೃತ್ವದಲ್ಲಿ ಶ್ರೀನೇಟಣೇಶ್ವರದೇವರ ಪಟ್ಟದ ದೇವರು ಕಾರ್ಯಕ್ರಮದ ಸಹಸ್ರಾರು ಸಂಖ್ಯೆಯ ಭಕ್ತರ ಸಮೂಹದೊಂದಿಗೆ ಸಡಗರ-ಸಂಭ್ರಮದಿಂದ ಜರುಗಿತು.

ಪಟ್ಟದ ದೇವರು ಕಾರ್ಯಕ್ರಮದ ನಿಮಿತ್ತ ಕುರುಗೋಡು ಶ್ರೀಕಲ್ಲುಗೇಶ್ವರ, ಬಾದನಹಟ್ಟಿಯ ಶ್ರೀಆಗಲೂರೇಶ್ವರ, ಶ್ರೀಮಲ್ಲೇಶ್ವರ, ಅಂತಾಪುರಶ್ರೀಮಲೆಮ್ಮ, ಶ್ರೀಹಾಲುಮರದಪ್ಪ, ಬಾದನಹಟ್ಟಿಯ ಶ್ರೀಮಲ್ಲೇಶ್ವರ, ಪಾಲ್ಥೂರೇಶ್ವರ, ಶ್ರೀಈರಲಿಂಗೇಶ್ವರ,

ಯಳಪ್ರಾಳ್ ಶ್ರೀಕರೆಪ್ಪ ದೇವರುಗಳ ಮೆರವಣಿಗೆ ಡೊಳ್ಳು, ತಾಳ, ಮೇಳ ಸಕಲ ವಾದ್ಯಗಳೊಂದಿಗೆ ಅದ್ದೂರಿಯಿಂದ ಮೆರವಣಿಗೆ ಮಾಡಿ ಶ್ರೀನೇಟಣೇಶ್ವರ ದೇವಸ್ಥಾನದಲ್ಲಿ ಕುಳ್ಳೀರಿಸಿದರು.

ಸತತ 2 ದಿನಗಳ ಕಾಲ ಪಟ್ಟದ ದೇವರುಕಾರ್ಯಕ್ರಮಕ್ಕೆ ಸಹಕರಿಸಿದ ಬಾದನಹಟ್ಟಿ ಗ್ರಾಮದ ವಿವಿದ ಗೋತ್ರದ ಹಾಲುಮತ ಸಮಾಜದ ಬಂದುಗಳು, ಮತ್ತು ಊರಿನ ಸಮಸ್ಥ ಸದ್ಭಕ್ತಾದಿಗಳಿಗೆ ಕರಿಮಲೆಗೋತ್ರದ ಕುಟುಂಬವರ್ಗದ ಮುಖಂಡ ಕರೆಣ್ಣ ಅವರು ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.ನಂತರ ಬಾದನಹಟ್ಟಿ ಗ್ರಾಮದ ಕರಿಮಲೆ ಗೋತ್ರದವರಾದ ಕೊಡ್ಲೇಲೇರು ಬೆಡಗಿನ ಹಾಲುಮತ ಸಮಾಜದ ಬಂದುಗಳು ಶ್ರೀನೇಟಣೇಶ್ವರ ದೇವಸ್ಥಾನದ ಮುಂಭಾಗದಲ್ಲಿ

ತಮ್ಮ ಬಂದುಗಳಿಂದ ಬಟ್ಟೆಗಳನ್ನು ಸ್ವೀಕರಿಸಿ ದಾರ್ಮಿಕ ಕಾರ್ಯಕ್ರಮದಿಂದ ಸಾಲು-ಸಾಲಾಗಿ ಪಟ್ಟಏರಿದರು. ಸತತ 2 ದಿನಗಳ ಕಾಲ ಶ್ರೀನೇಟಣೇಶ್ವರ ಪಟ್ಟದ ದೇವರು ಕಾರ್ಯಕ್ರಮಕ್ಕೆ ಆಗಮಿಸಿದ ಸಾವಿರಾರು ಮಂದಿ ಭಕ್ತರು ಪ್ರಸಾದ ಸ್ವೀಕರಿಸಿ ಶ್ರೀನೇಟಣೇಶ್ವರದೇವರ ಕೃಪೆಗೆ ಪಾತ್ರರಾದರು.

# ದೀಪಗಳಿಲ್ಲದ ದಾರಿಯಲಿ ನಡೆಯಬಹುದು, ಕನಸುಗಳಿಲ್ಲದ ಜೀವನದಲ್ಲಿ ನಡೆಯಲಾಗದು



• ಮಲ್ಲಮ್ಮ ನುಡಿ ವಾರ್ತೆ, ಗಂಗಾವತಿ

ಇಂದು ಬಸವ ಜಯಂತಿಯನ್ನು ಇಡೀ ವಿಶ್ವವೇ ಆಚರಿಸುತ್ತಿದೆ. ಆದರೆ ಸುಮಾರು ನೂರಾರು ವರ್ಷಗಳ ಹಿಂದೆಯೇ ಅಧಿಕೃತವಾಗಿ ಬಸವ ಜಯಂತಿ ಆಚರಣೆಗೆ ಶ್ರೀಕಾರ ಹಾಕಿದ ಕೀರ್ತಿ ಧಾರವಾಡದ ಮೃತ್ಯುಂಜಯ ಅಪ್ಪಗಳಿಗೆ ಹಾಗೂ ಕರ್ನಾಟಕದ ಗಾಂಧಿ ಹರ್ಡೇಕರ್ ಮಂಜಪ್ಪನವರಿಗೆ ಸಲ್ಲುತ್ತದೆ. ಹನ್ನೆರಡನೆಯ ಶತಮಾನದಲ್ಲಿ 1719 ವೇಶ್ಯೆಯರನ್ನು ಪುಣ್ಯಾಂಗನೆಯರನ್ನಾಗಿ ಮಾಡಿದ ವಿಶ್ವದ ಮೊದಲ ಸಂತ ವಿಶ್ವಗುರು ಬಸವಣ್ಣನವರು. ದೀಪಗಳಿಲ್ಲದ ದಾರಿಯಲ್ಲಿ ನಡೆಯಬಹುದು, ಆದರೆ ಕನಸುಗಳಿಲ್ಲದ ಜೀವನ ವ್ಯರ್ಥವಾದುದು ಎಂದು ಡಾ. ಮಹಾಂತ ಬಸವಲಿಂಗ ಸ್ವಾಮಿಗಳು ಹೇಳಿದರು.

ತಾಲೂಕು ಆಡಳಿತ, ತಾಲೂಕು ಪಂಚಾಯತಿ, ನಗರಸಭೆ ಹಾಗೂ ಬಸವ ಜಯಂತಿ ಆಚರಣೆ ಸಮಿತಿ ಇವರ ಸಹಯೋಗದಲ್ಲಿ ಬಸವ ಜಯಂತಿ ಅಂಗವಾಗಿ ನಡೆದ "ಶರಣರ ಜೀವನ ದರ್ಶನ" ಪ್ರವಚನದ ಮಂಗಲೋತ್ಸವ ಸಮಾರಂಭವು ಏಪ್ರಿಲ್-20 ಸೋಮವಾರ ಶ್ರೀ ಕೊಟ್ಟೂರು ಬಸವೇಶ್ವರ ವೇದಿಕೆಯಲ್ಲಿ ನಡೆದು ಮುಖ್ಯ ಉಪನ್ಯಾಸಕರಾಗಿ ಅವರು ಮಾತನಾಡುತ್ತಾ ಹಲವಾರು ಉದಾಹರಣೆಗಳ ಮೂಲಕ ಶರಣತತ್ವ ಸಂದೇಶಗಳನ್ನು ತಿಳಿಸಿದರು.

ಅಧ್ಯಕ್ಷತೆವಹಿಸಿದ್ದ ತಹಶೀಲ್ದಾರರಾದ ವಿಶ್ವನಾಥ ಮುರಡಿ ಯವರು ಬಸವ ಜಯಂತಿಯ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಗ್ಗೆ ಸಂತಸವನ್ನು ಹಂಚಿಕೊಂಡರು. ಆಚರಣೆ ಸಮಿತಿಯ ಮಹಿಳಾ ವಿಭಾಗದ

ಅಧ್ಯಕ್ಷರಾದ ಶ್ರೀಮತಿ ಡಿ.ಜಿ. ಮಠದ್ ರವರು ಇಂತಹ ಸಮಾರಂಭಗಳು ಮೇಲಿಂದ ಮೇಲೆ ಆಗುತ್ತಲಿದ್ದರೆ ಮೊಬೈಲ್ ಗೆ ವಿಶ್ರಾಂತಿ ಸಿಗುತ್ತದೆ ಎಂದರು.

ವೇದಿಕೆಯ ಮೇಲೆ ಆಚರಣೆ ಸಮಿತಿಯ ಗೌರವಾಧ್ಯಕ್ಷರಾದ ಎಫ್. ಷಣ್ಮುಖಪ್ಪ, ಕಾರ್ಯಾಧ್ಯಕ್ಷರಾದ ಅರಳಿ ಶೇಖರಪ್ಪ, ದೇವಸ್ಥಾನ ಸಮಿತಿಯ ಹೊಸಳ್ಳಿ ಶಂಕರಗೌಡ ಹಾಗೂ ಬಸವಪರ ಸಂಘಟನೆಗಳ ಕೆ. ಬಸವರಾಜ, ದಿಲೀಪಕುಮಾರ ವಂದಾಲ ಚನ್ನಬಸಮ್ಮ ಕಂಪ್ಲಿ,, ಸಿ. ಮಹಾಲಕ್ಷ್ಮಿ ಉಪಸ್ಥಿತರಿದ್ದರು.

ಪ್ರವಚನದಲ್ಲಿ ಸೇವೆಗೈದವರನ್ನು ಸಮಿತಿ ಸನ್ಮಾನಿಸಿತು. ಎಫ್. ರಾಘವೇಂದ್ರ, ಶ್ರೀನಿವಾಸ, ಡಾ. ನಾರಿನಾಳ ಶ್ರೀಗಳನ್ನು ಸಮಿತಿ ಸದಸ್ಯರನ್ನು

ಸನ್ಮಾನಿಸಿದರು. ಈ ಸಮಾರಂಭವು ವಿರೇಶ ಅಸರಡ್ಡಿ ಸ್ವಾಗತಗೈದು, ಎ.ಕೆ. ಮಹೇಶಕುಮಾರ ನಿರೂಪಿಸಿ ವಚನ ಮಂಗಲದೊಂದಿಗೆ ಮುಕ್ತಾಯವಾಯಿತು. ಆನೇಗುಂದಿ ರಸ್ತೆಯ ಬಸವೇಶ್ವರ ಸರ್ಕಲ್, ಶ್ರೀಕೃಷ್ಣದೇವರಾಯ ವೃತ್ತದ ಹತ್ತಿರವಿರುವ

ಅಶ್ವಾರೂಢ ಬಸವಣ್ಣ, ಮಲ್ಲಿಕಾರ್ಜುನ ಮಠ ಹಾಗೂ ವಿರುಪಾಪುರದಲ್ಲಿಯ ಶ್ರೀಗುರುಬಸವಮಂಟಪ ಮತ್ತು ಕೆ.ಎಸ್.ಆರ್.ಟಿ.ಸಿ ಯವರಿಂದ ಬಸವಜಯಂತಿ ನಡೆದುದು ವಿಶೇಷವಾಗಿತ್ತು.

### ಯುಜಿಸಿ ಮಾರ್ಗಸೂಚಿಗಳ ಉಲ್ಲಂಘನೆ

# ಪದವಿ ಪ್ರದಾನದಲ್ಲಿ ಗಂಭೀರ ಅಕ್ರಮ, ತಕ್ಷಣ ಕ್ರಮಕ್ಕೆ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ, ವಿಜಯಪುರ



ವಿಜಯಪುರ : ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪಿಎಚ್.ಡಿ. ಪದವಿ ಪ್ರದಾನ ಪ್ರಕ್ರಿಯೆಯಲ್ಲಿ ಯುನಿವರ್ಸಿಟಿ ಗ್ರಾಂಟ್ಸ್ ಕಮಿಷನ್ (ಗಉಅ) ನಿಗದಿಪಡಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿಲ್ಲ ಎಂಬ ಗಂಭೀರ ಆರೋಪಗಳು ವಿದ್ಯಾರ್ಥಿಗಳು ಹಾಗೂ ಸಂಶೋಧಕರ ವಲಯದಲ್ಲಿ ಕೇಳಿಬರುತ್ತಿವೆ ಎಂದು ದ್ರಾವಿಡ ವಿದ್ಯಾರ್ಥಿ ಪರಿಷತ್ ಸಂಘಟನೆ ತೀವ್ರ ಆತಂಕ ವ್ಯಕ್ತಪಡಿಸಿದೆ.

ಈ ಸಂದರ್ಭದಲ್ಲಿ ಮಾತನಾಡಿದ ದ್ರಾವಿಡ ವಿದ್ಯಾರ್ಥಿ ಪರಿಷತ್ ಮುಖಂಡ ಅಕ್ಷಯ್ ಕುಮಾರ್ ಅಜಮನಿ ಉನ್ನತ ಶಿಕ್ಷಣದ ಗುಣಮಟ್ಟವನ್ನು ಕಾಪಾಡುವ ಉದ್ದೇಶದಿಂದ ಯುಜಿಸಿ ರೂಪಿಸಿರುವ ಒಟಿಟಿಟಣಟ ಖಣಚಿಟಿಜಚಿಡಿಫ ಚಿಟಿಜ ಕಡಿಂಛಿಜಜಣಡಿಜ ಜಿಂಡಿ ಂತಿಚಿಡಿಜ ಂಜ ಕು.ಆ. ಆಜ-ಠಡಿಜಜ ನಿಯಮಗಳು ಕೇವಲ ಮಾರ್ಗಸೂಚಿಗಳಲ್ಲ, ಅವು ಕಡ್ಡಾಯವಾಗಿ ಪಾಲಿಸಬೇಕಾದ ಶೈಕ್ಷಣಿಕ ಮಾನದಂಡಗಳಾಗಿವೆ ಆದರೆ, ಕೆಲ ವಿಶ್ವವಿದ್ಯಾಲಯಗಳು ಈ ನಿಯಮಗಳನ್ನು ನಿರ್ಲಕ್ಷ್ಯ ಮಾಡುತ್ತಿರುವುದು ಶಿಕ್ಷಣ ವ್ಯವಸ್ಥೆಗೆ ಧಕ್ಕೆಯಾಗಿದೆ ಎಂದು ಆರೋಪಿಸಿದರು...

ಯುಜಿಸಿ ನಿಯಮಾವಳಿಗಳ ಪ್ರಕಾರ ಪಿಎಚ್.ಡಿ. ಪದವಿ ಪ್ರದಾನಕ್ಕೆ ಕೆಳಗಿನ ಅಂಶಗಳು ಕಡ್ಡಾಯವಾಗಿವೆ:

ಸಂಶೋಧನಾ ಪ್ರಬಂಧವನ್ನು ಕನಿಷ್ಠ ಇಬ್ಬರು ಬಾಹ್ಯ ತಜ್ಞರಿಂದ ಮೌಲ್ಯಮಾಪನ ಮಾಡುವುದು, ಸಕಾರಾತ್ಮಕ ವರದಿಗಳ ನಂತರ ಬಹಿರಂಗ ವೈವಾ-ವೋಸ್ ನಡೆಸುವುದು, ಕನಿಷ್ಠ ಒಂದು ಸಂಶೋಧನಾ ಲೇಖನವನ್ನು ಪಿಯರ್-ರಿವ್ಯೂಡ್ ಜರ್ನಲ್‌ನಲ್ಲಿ ಪ್ರಕಟಿಸುವುದು, ಎರಡು ಸಂಶೋಧನಾ ಪ್ರಸ್ತುತಿಗಳನ್ನು ಕಾನ್ಫರೆನ್ಸ್/ಸೆಮಿನಾರ್‌ಗಳಲ್ಲಿ ನೀಡುವುದು, ಪ್ಲೇಜಿಯಾರಿಸಂ ಮಿತಿ ಪಾಲನೆ ನಿಗದಿತ ಅವಧಿಯೊಳಗೆ ಪ್ರಬಂಧ ಸಲ್ಲಿಕೆ ಪ್ರಾವಿಷನಲ್ ಸರ್ಟಿಫಿಕೇಟ್ ನೀಡದೇ ಇರುವುದು, ಇದರ ಜೊತೆಗೆ, ಪ್ರಿ-ಸಬ್ಮಿಷನ್ ಸೆಮಿನಾರ್, ರಿಸರ್ಚ್ ಅಡ್ವೈಸರಿ ಕಮಿಟಿ (ಖಂಅ) ಸಭೆಗಳು, ಪಾರದರ್ಶಕ ಪ್ರವೇಶ ಪ್ರಕ್ರಿಯೆ ಹಾಗೂ ಯುಜಿಸಿ ಮಾನ್ಯತೆ ಹೊಂದಿರುವ ಜರ್ನಲ್‌ಗಳಲ್ಲಿ ಮಾತ್ರ ಪ್ರಕಟಣೆಗಳ ಪರಿಗಣನೆ ಕಡ್ಡಾಯವಾಗಿದೆ. ಆದರೂ, ಈ ನಿಯಮಗಳನ್ನು ಪಾಲಿಸದೆ ಪದವಿ ಪ್ರದಾನ ಮಾಡಲಾಗುತ್ತಿರುವುದು ವಿದ್ಯಾರ್ಥಿಗಳಿಗೆ ಅನ್ಯಾಯವಾಗುವುದಲ್ಲದೆ, ಪಿಎಚ್.ಡಿ. ಪದವಿಯ ಮೌಲ್ಯವನ್ನು ಕುಗ್ಗಿಸುವ ಕೆಲಸವಾಗಿದೆ ಎಂದು ದ್ರಾವಿಡ ವಿದ್ಯಾರ್ಥಿ ಪರಿಷತ್ ಸಂಘಟನೆ ಆರೋಪಿಸಿದೆ.ಈ ಹಿನ್ನೆಲೆದಲ್ಲಿ ಸಂಘಟನೆಯ ಪ್ರಮುಖ ಬೇಡಿಕೆಗಳು:ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಯುಜಿಸಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ತಕ್ಷಣ ಸೂಚನೆ ನೀಡಬೇಕು, ಪಿಎಚ್.ಡಿ. ಪದವಿ ಪ್ರದಾನ ಪ್ರಕ್ರಿಯೆಯ ಮೇಲ್ವಿಚಾರಣೆಗಾಗಿ ಉನ್ನತ ಮಟ್ಟದ ತನಿಖಾ ಸಮಿತಿ ರಚಿಸಬೇಕು, ನಿಯಮ ಉಲ್ಲಂಘನೆ ಮಾಡಿದ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು, ವಿದ್ಯಾರ್ಥಿಗಳಿಗಾಗಿ ವಿಶೇಷ ದೂರು ಪರಿಹಾರ ವ್ಯವಸ್ಥೆ (Grievance Cell) ಸ್ಥಾಪಿಸಬೇಕು, ಪಿಎಚ್.ಡಿ. ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಡಿಜಿಟಲ್ ಮತ್ತು ಪಾರದರ್ಶಕವಾಗಿಸಬೇಕು, ಸರ್ಕಾರ ತಕ್ಷಣ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳದಿದ್ದಲ್ಲಿ, ಮುಂದಿನ ದಿನಗಳಲ್ಲಿ ರಾಜ್ಯವ್ಯಾಪಿ ಹೋರಾಟವನ್ನು ಆರಂಭಿಸುವುದಾಗಿ ಸಂಘಟನೆ ಎಚ್ಚರಿಸಿದೆ.ಈ ವೇಳೆ ಮುಖಂಡರಾದ ಚನ್ನು ಕಟ್ಟಿಮನಿ, ಗೌಡಪ್ಪ ಗೌಡ ಬಡಿಗೇರ್, ರಾಹುಲ್ ಕಳಸದವರ (ಕಾರ್ಯದರ್ಶಿ), ಮಂಜುನಾಥ್ ಕವಳಿ, ಪ್ರತಾಪ ತೊಳನೂರ , ಆಕಾಶ ಕುರ್ಣಿ, ಭೀಮು ಬಡಿಗೇರ್ , ಪರಸು, ಸಾಯಬಣ್ಣ, ನಿಂಗಣ್ಣ, ಸಚಿನ್, ಸುದೀಪ, ರಾಕೇಶ್, ಸುನಿಲ್, ಭೀಮರಾಯ ವಿಶಾಲ್ ಮುಂತಾದವರಿದ್ದರು.

# ಮಹಾ ಪುರುಷ ಭಗೀರಥ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ, ಯಲಬುರ್ಗಾ

ಪಟ್ಟಣದ ಮಲಕಸಮುದ್ರ ರಸ್ತೆಗೆ ಇರುವ ಶ್ರೀ ಮಹಾ ಪುರುಷ ಭಗೀರಥ ವೃತ್ತದಲ್ಲಿ ಕಂದಾಯ ಇಲಾಖೆ, ಪಟ್ಟಣ ಪಂಚಾಯತಿ, ಕೃಷಿ ಇಲಾಖೆ ಹಾಗು ವಿವಿಧ ಇಲಾಖೆಯ ಅಧಿಕಾರಿಗಳು,ಪಟ್ಟಣ ಪಂಚಾಯತಿ ಮಾಜಿ ಸದಸ್ಯರು ಮತ್ತು ಭಗೀರಥ ಸಮಾಜದ ಪದಾಧಿಕಾರಿಗಳು,

ಗುರು ಹಿರಿಯರು ಸೇರಿಕೊಂಡು ಸರಳ ರೀತಿಯಲ್ಲಿ ಪೂಜೆ ಸಲ್ಲಿಸಿದ ಬಳಿಕ ಸರ್ವರು ಪುಷ್ಪಾರ್ಚನೆ ಸಲ್ಲಿಸಿ ಮಹಾ ಪುರುಷ ಶ್ರೀ ಭಗೀರಥನ ಜಯಂತಿ ಆಚರಿಸಿದರು.

### ನರೇಗಾ ಯೋಜನೆಯಡಿ ರೈತನ ಬಾಳಿಗೆ ಭಾಗ್ಯೋದಯ

# ಬರಡು ಭೂಮಿಯಲ್ಲಿ ಉಕ್ಕಿದ ಗಂಗೆ



• ಮಲ್ಲಮ್ಮ ನುಡಿ ವಾರ್ತೆ, ಕಮಲನಗರ

ತಾಲೂಕಿನ ಡಿಗ್ಗಿ ಗ್ರಾಮ ಪಂಚಾಯತ ವ್ಯಾಪ್ತಿಯ ರಾಂಪುರ ಗ್ರಾಮದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಯೋಜನೆಯಡಿ ಸೌಲಭ್ಯ ಪಡೆದ ರೈತ ದೇವಿದಾಸ ಹೊಳಸಮುದ್ರೆ ಅವರ ಹೊಲದಲ್ಲಿ ಸಮೃದ್ಧ ನೀರು ಕಂಡಿದ್ದು, ರೈತ ಕುಟುಂಬದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

ಬಹಳ ದಿನಗಳಿಂದ ನೀರಿನ ಅಭಾವದಿಂದ ಕೃಷಿ ಚಟುವಟಿಕೆ ಕೈಬಿಟ್ಟಿದ್ದ ರೈತರು, ನರೇಗಾ ಯೋಜನೆಯಡಿ ಮಂಜೂರಾದ ಬಾವಿ/ಕೊಳವೆ ಬಾವಿ ಕಾಮಗಾರಿಯನ್ನು ಕೈಗೆತ್ತಿಕೊಂಡಿ-ದ್ದರು. ಭೂತಾಯಿಯ ಒಡಲಿಂದ ಜಲಧಾರೆ ಚಿಮ್ಮಿದಾಗ ರೈತ

ಕುಟುಂಬದ ಕಣ್ಣಾಲಿಗಳು ಆನಂದಬಾಷ್ಪದಿಂದ ತುಂಬಿದ್ದವು. ಗಂಗಾ ಮಾತೆಗೆ ಬಾಗಿನ ಅರ್ಪಿಸಿ, ವಿಶೇಷ ಪೂಜೆ ಸಲ್ಲಿಸುವ ಮೂಲಕ ಭೂತಾಯಿಗೆ ಕೃತಜ್ಞತೆ ಸಲ್ಲಿಸಲಾಯಿತು.

> “ನನ್ನ ಹೊಲದಲ್ಲಿ ನೀರು ಬರುತ್ತದೆ ಎಂಬ ಭರವಸೆಯೇ ಇರಲಿಲ್ಲ. ಆದರೆ ಪಂಚಾಯತ್ ಅಧಿಕಾರಿಗಳ ಮಾರ್ಗದರ್ಶನ ಮತ್ತು ನರೇಗಾ ಯೋಜನೆಯ ಸಹಾಯದಿಂದ ಇಂದು ನನ್ನ ಜಮೀನಿನಲ್ಲಿ ಗಂಗೆ ಉಕ್ಕಿದ್ದಾಳೆ. ಇನ್ನು ಮುಂದೆ ನೆಮ್ಮದಿಯಿಂದ ಕೃಷಿ ಮಾಡುತ್ತೇನೆ,
>
> **ಸಚಿನ ದೇವಿದಾಸ ಹೊಳಸಮುದ್ರೆ**
> **ಫಲಾನುಭವಿ ರೈತ, ರಾಂಪುರ**

> “ನರೇಗಾ ಯೋಜನೆ ಕೇವಲ ಕೂಲಿ ಕೆಲಸಕ್ಕಷ್ಟೇ ಸೀಮಿತವಲ್ಲ, ಇದು ರೈತರ ಹೊಲದಲ್ಲಿ ಆಸ್ತಿ ಸೃಜನೆ ಮಾಡುವ ಅದ್ಭುತ ಶಕ್ತಿ ಹೊಂದಿದೆ. ಈ ರೈತರು ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡಿದ್ದಕ್ಕೆ ಇಂದು ಅವರ ಬದುಕು ಹಸನಾಗಿದೆ.
>
> **ವೆಂಕಟೇಶರಾವ ದೇಶಪಾಂಡೆ,**
> **ಅಭಿವೃದ್ಧಿ ಅಧಿಕಾರಿ, ಗ್ರಾಪಂ. ಡಿಗ್ಗಿ**

### ಕಬ್ಬು ಬೆಳೆಗಾರರ ಬಾಕಿ ಬಿಡುಗಡೆಗೆ ಶಾಸಕ ಕಂದಕೂರ ಒತ್ತಾಯ

# ನಿರ್ಲಕ್ಷ್ಯ ವಹಿಸಿದರೇ ಕೋರ್ ಗ್ರೀನ್ ಶುಗರ್ ಫ್ಯಾಕ್ಟರಿಗೆ ಬೀಗ ಜಡಿಯುವ ಎಚ್ಚರಿಕೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕಬ್ಬು ಬೆಳೆಗಾರರ ಬಾಕಿ ಉಳಿಸಿಕೊಂಡಿರುವ 42 ಕೋಟಿ ರೂ. ಮೇ ಮೊದಲ ವಾರದಲ್ಲಿ ಬಿಡುಗಡೆ ಮಾಡಲು ವಡಗೇರಾ ತಾಲೂಕಿನ ಕೋರ್ ಗ್ರೀನ್ ಶುಗರ್ ಫ್ಯಾಕ್ಟರಿ ಆಡಳಿತ ಮಂಡಳಿಯವರಿಗೆ ಕಡಕ್ ಸೂಚನೆ

ನೀಡಬೇಕು, ಇದಕ್ಕೂ ನಿರ್ಲಕ್ಷ್ಯ ವಹಿಸಿದರೇ ರೈತರೊಂದಿಗೆ ಫ್ಯಾಕ್ಟರಿಗೆ ಬೀಗ ಜಡಿಯುವುದಾಗಿ ಶಾಸಕ ಶರಣಗೌಡ ಕಂದಕೂರ ಅವರು ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರದಲ್ಲಿ ಎಚ್ಚರಿಸಿದ್ದಾರೆ.



ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಯ 3341 ರೈತರು ಶುಗರ್ ಪ್ಯಾಕ್ಟರ್ ಗೆ ಕಬ್ಬು ಮಾರಾಟ ಮಾಡಿದ್ದಾರೆ. ಇದಕ್ಕೆ ರೈತರಿಗೆ ಒಟ್ಟು142 ಕೋಟಿ ರೂ. ಪಾವತಿಸಬೇಕಿತ್ತು. ಆದರೇ ಇಲ್ಲಿಯವರೆಗೂ 100 ಕೋಟಿ ರೂ. ಮಾತ್ರ ಪಾವತಿಸಲಾಗಿದೆ. ಇನ್ನೂ 42 ಕೋಟಿ ರೂ.

ಬಾಕಿ ಇದೆ. ಈ ಹಣ ಬಿಡುಗಡೆಗೆ ಅನೇಕ ಸಲ ರೈತರು ಮನವಿ ಮಾಡಿದರೂ ಕೆಲಸ ಆಗಿಲ್ಲ, ಆಗ ರೈತರು ನನ್ನನ್ನು ಭೇಟಿ ಮಾಡಿ ವಿಷಯ ತಿಳಿಸಿದಾಗ ನಾನೇ ಖುದ್ದಾಗಿ ಆಡಳಿತ ಮಂಡಳಿಯವರಿಗೆ ದೂರವಾಣಿ ಮೂಲಕ ಮಾತಾಡಿದಾಗ ಕಳೆದ ಫೆಬ್ರವರಿ ತಿಂಗಳಲ್ಲಿ ಪಾವತಿಸುವುದಾಗಿ ಹೇಳಿದರು. ಆದರೇ ಏಪ್ರೀಲ್ ತಿಂಗಳು ಮುಗಿಯುತ್ತ ಬಂದರೂ

ಹಣ ರೈತರಿಗೆ ಪಾವತಿಸಿಲ್ಲ ಎಂದು ಡಿಸಿ ಅವರಿಗೆ ಬರೆದ ಪತ್ರದಲ್ಲಿ ವಿವರಿಸಿದ್ದಾರೆ. ಕೂಡಲೇ ಆಡಳಿತ ಮಂಡಳಿಗೆ ಈ ಕುರಿತು ಮಾತಾಡಿ, ಬಾಕಿ ಹಣ ಬಿಡುಗಡೆಗೊಳಿಸಬೇಕೆಂದು ಶಾಸಕ ಕಂದಕೂರ ಮನವಿಯಲ್ಲಿ ಡಿಸಿ ಅವರಿಗೆ ಕೋರಿದ್ದಾರೆ.

# ವಿದ್ಯುತ್ ತಗುಲಿ ಲೈನ್‌ಮ್ಯಾನ್ ಸಾವು

• **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ತಾಲ್ಲೂಕಿನ ಖಟಕ್ ಚಿಂಚೋಳಿ ಗ್ರಾಮದಲ್ಲಿ ಬುಧವಾರ ವಿದ್ಯುತ್ ತಗುಲಿ ಲೈನ್ ಮ್ಯಾನ್ ಬಿರೇಶ ಹುಲೇಪ್ಪಾ ಜೊಲ್ಲೆ (31) ಸ್ಥಳದಲ್ಲಿ ಸಾವನ್ನಪ್ಪಿದ್ದಾನೆ.

ಪ್ರತಿದಿನದಂತೆ ಮಧ್ಯಾಹ್ನ ವಿದ್ಯುತ್ ಫೇಸ್ ಬದಲಾವಣೆ ಮಾಡುವಾಗ ಈ ಅವಘಡ ಸಂಭವಿಸಿದೆ.

ಮೃತ ಲೈನ್ ಮ್ಯಾನ್ ಬಸವಕಲ್ಯಾಣ ತಾಲೂಕಿನಲ್ಲಿ ಗೌರ ಗ್ರಾಮದವರಾಗಿದ್ದು, ಸುಮಾರು ಹತ್ತು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರು.

ಈ ಸಂಬಂಧ ಖಟಕ ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಉತ್ತಮ ಅಂಕ



• **ಮಲ್ಲಮ್ಮ ನುಡಿ ವಾರ್ತೆ , ಬಸವನಬಾಗೇವಾಡಿ**

ತಾಲೂಕಿನ ಸೋಲವಾಡಗಿ ಗ್ರಾಮದ ಬಸವರಾಜು ಎಸ್ ಬಿದರಕುಂದಿ ಅವರ ಅವಳಿ ಜವಳಿ ಮಕ್ಕಳಿಗೆ ಈ ಬಾರಿ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ್ದಾರೆ. ಇಬ್ಬರೂ ಹಾಸನದ ಯುನಿಟೆಡ್ ಅಕಾಡೆಮಿ ಯಲ್ಲಿ ಓದಿದ ಜ್ಯೋತಿಗೆ 616 ಅಂಕಗಳು ಲಭಿಸಿದರೆ, ಕಿರಣ 607ಅಂಕ ಲಭಿಸಿವೆ.

# ವಂದಾಲಿ ಗ್ರಾಮದಲ್ಲಿ ಸಾಮೂಹಿಕ ವಿವಾಹ



• **ಮಲ್ಲಮ್ಮ ನುಡಿ ವಾರ್ತೆ, ಮುದಗಲ್**

ಸಮೀಪದ ವಂದಾಲಿ ಗ್ರಾಮದಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗಿತು. ಬಸವ ಜಯಂತಿ ಉತ್ಸವ ನಿಮಿತ್ಯ ಕೋಡಿಹಾಳ ಶ್ರೀ ಕರಿ ಬಸವೇಶ್ವರ ಜಾತ್ರಾ ಮಹೋತ್ಸವದಲ್ಲಿ ಶ್ರೀ ಪರಮ ಪೂಜ್ಯ ಶ್ರೀ ಗುಡದೂರು ದೊಡ್ಡಬಸವಾರ್ಯ ತಾತನವರ ಪುರಾಣ ಪ್ರವಚನ ಜರುಗಿತು. ಶ್ರೀ ವೇ. ಮೂ. ರಾಚಯ್ಯ ಹಿರೇಮಠ ವಂದಾಲಿ ಶ್ರೀ ವೇ. ಮೂ. ವೀರಯ್ಯಸ್ವಾಮಿ ಹಿರೇಮಠ ವಂದಾಲಿ ಶ್ರೀಗಳಿಂದ ರುದ್ರಾಭಿಷೇಕ, ಮಾಲಾರ್ಪಣೆ, ಮಹಾ ಮಂಗಳಾರತಿಯೊಂದಿಗೆ ವಿವಿಧ ಧಾರ್ಮಿಕ ಆಚರಣೆಗಳು ಜರುಗಿದವು. ಶ್ರೀ ವೇ. ಮೂ. ಅಮರಯ್ಯ ಹಿರೇಮಠ ವಂದಾಲಿ ಶ್ರೀಗಳಿಂದ ಸುಮಂಗಲೆಯರ ಕುಂಬಾಭಿಷೇಕ ಕಾರ್ಯ ಮಾಡಲಾಯಿತು. ಶ್ರೀ ದೊಡ್ಡಬಸವಾರ್ಯರು ಮತ್ತು ಶಿವಶರಣೆ ಶರಣಮ್ಮ ತಾಯಿಯವರ ಪಲ್ಲಕ್ಕಿಗೆ ಮುದ್ದಲಗುಂದಿ ಗ್ರಾಮಸ್ಥರಿಂದ ಹೂವಿನಹಾರ ನೇರವೇರಿಸಿದರು. ಗುರಬಸಯ್ಯ ಸ್ವಾಮಿ ಹಾಗೂ ಅಮರೇಶ ಕುಲಕರ್ಣಿ ನೇತೃತ್ವದಲ್ಲಿ ಮೆರವಣಿಗೆ ಕಾರ್ಯ ಗಂಗಾ ಸ್ಥಳದವರೆಗೆ ಜರುಗಿತು. 9 ಜೋಡಿ ಸಾಮೂಹಿಕ ವಿವಾಹಗಳು ಜರುಗಿದವು. ಮಹಾ ಪ್ರಸಾದ ನಡೆಯಿತು.

ಪರಮ ಪೂಜ್ಯ ಶ್ರೀ ಗುರಯ್ಯ ತಾತನವರು, ನಂದವಾಡಗಿ ಚೆನ್ನಬಸವ ಶಿವಾಚಾರ್ಯ, ಅಂಕಲಿಮಠ ಶ್ರೀ ಸಿದ್ದೇಶ್ವರ ಸ್ವಾಮಿಜೀ, ವಂದಾಲಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಜಾತ್ರಾ ಮಹೋತ್ಸವದಲ್ಲಿ ಭಾಗಿಯಾಗಿದ್ದರು.

# ರಾಜ್ಯಪಾಲರಿಂದ ಬಂಗಾರದ ಪದಕ ಪಡೆದ ಶ್ವೇತಾ ಮೇಟಿ

• **ಮಲ್ಲಮ್ಮ ನುಡಿ ವಾರ್ತೆ, ಸಿಂಧನೂರು**




ಪಾಟೀಲ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿ ಕು. ಶ್ವೇತಾ ಮೇಟಿ ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಮಂಗಳವಾರ ವಿಜಯಪುರದಲ್ಲಿ ನಡೆದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿವಿಯ 17ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹೋಟ್ ಅವರಿಂದ ಬಂಗಾರದ ಪದಕ ಪಡೆದು ಭಾಜನರಾಗಿದ್ದಾರೆ.

ಪದವಿ ವಿಜ್ಞಾನ ವಿಭಾಗದ ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯಕ್ಕೆ ಅತ್ಯಧಿಕ ಅಂಕ ಪಡೆದುಕೊಂಡಿದ್ದಾಳೆ. ವಿವಿ ಅಡಿಯಲ್ಲಿ ಸುಮಾರು 26 ಜಿಲ್ಲೆಗಳಲ್ಲಿ ಕಾಲೇಜುಗಳಿದ್ದು, ಅತ್ಯಧಿಕ ಅಂಕಗಳನ್ನು ಪಡೆಯುವುದು ಸುಲಭ ಸಾಧ್ಯವಿಲ್ಲ. ಶ್ವೇತಾ ಅಮೋಘ ಸಾಧನೆ ಮಾಡುವ ಮೂಲಕ ಸಿಂಧನೂರಿನ ಕೀರ್ತಿ ಪತಾಕೆ ಹಾರಿಸಿದ್ದಾರೆ.

ಗೋಲ್ಡ್ ಮೆಡಲ್ ಪಡೆದುಕೊಂಡ ವಿದ್ಯಾರ್ಥಿನಿ ಕು.ಶ್ವೇತಾ ಮೇಟಿ ಮಾತನಾಡಿ, ಪಾಟೀಲ್ ಶಿಕ್ಷಣ ಸಂಸ್ಥೆ ನಮಗೆ ವಿದ್ಯೆ ಕಲಿಸುವುದರ ಜೊತೆಗೆ ಸಂಸ್ಕಾರವನ್ನು ಕಲಿಸಿದೆ. ಇಂದಿನ ಆಧುನಿಕ ಯುಗದಲ್ಲಿ ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಗೋಲ್ಡ್ ಮೆಡಲ್ ರಾಜ್ಯಪಾಲರಿಂದ ಪ್ರಶಸ್ತಿ ಪಡೆದುಕೊಂಡಿದ್ದು, ನನಗೆ ಸಂತಸ ತಂದಿದೆ.

ಪಾಟೀಲ್ ಕಾಲೇಜಿನ ಉಪನ್ಯಾಸಕರು ಉತ್ತಮ ಬೋಧನೆ, ಆಡಳಿತ ಮಂಡಳಿ ಶಿಸ್ತು, ಸಂಯಮ ಕಲಿಸಿದ ಪರಿಣಾಮ ನಾನು ಈ ಮಟ್ಟಕ್ಕೆ ಬೆಳೆಯಲು ಕಾರಣ, ನಮ್ಮ ಕಾಲೇಜಿನ ಉಪನ್ಯಾಸಕರು, ತಂದೆ-ತಾಯಿ, ಅಕ್ಕ-ಮಾವ ಇವರೆಲ್ಲರ ನನಗೆ ಪ್ರೋತ್ಸಾಹ ನೀಡಿದ್ದಾರೆ. ನಾನು ಎನ್ನೆಸ್ಸೆಸ್ ಶಿಬಿರಗಳಿಂದ ಉತ್ತಮ ತರಬೇತಿ ಪಡೆದು ಬಹಳಷ್ಟು ಕಲಿತಿದ್ದೇನೆ, ಇದು ನನ್ನ ಓದಿಗೆ ಬಹಳಷ್ಟು ಪ್ರೇರಣೆಯಾಯಿತು. ಎನ್ನೆಸ್ಸೆಸ್ ಶಿಬಿರಾರ್ಥಿ ಆಗಿದ್ದರಿಂದ ಜಮ್ಮು-ಕಾಶ್ಮೀರದ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ದೊರೆಯಿತು ಎಂದು ತಿಳಿಸಿದರು. ವಿದ್ಯಾರ್ಥಿನಿಯ ಸಾಧನೆಗೆ ಪಾಟೀಲ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್.ಪಂಪಾಪತಿ ಪಾಟೀಲ್, ಅಭಿವೃದ್ಧಿ ಸಮಿತಿ ಅಧ್ಯಕ್ಷ ಶರಣಬಸವ ವಕೀಲ, ಆಡಳಿತಾಧಿಕಾರಿ ಭಾರತಿ ಕೃಷ್ಣ ನೆಕ್ಕಂಟಿ, ಪ್ರಾಚಾರ್ಯ ಮಾರುತಿ ಭಂಡಾರಕರ್ ಅಭಿನಂದನೆ ಸಲ್ಲಿಸಿದ್ದಾರೆ.

(ಕಾಲೇಜಿನಿಂದ ದೊರೆತ ಅವಕಾಶಕಾಶಗಳು)

ಕಾಲೇಜಿನ ಮೂರು ಎ□□□□□□ಸ್ ಶಿಬಿರದಲ್ಲಿ ಭಾಗಿ, ಜಮ್ಮು ಕಾಶ್ಮೀರದಲ್ಲಿ ಪಾಲ್ಗೊಂಡ ಯಕ್ಷಗಾನ ನೃತ್ಯದಲ್ಲಿ ಭಾಗವಹಿಸಿದ್ದು ಸಂತಸದ ಕ್ಷಣಗಳು. ಕಾಲೇಜಿನ ವಿದ್ಯಾರ್ಥಿನಿಗಳ ಪ್ರತಿನಿಧಿಯಾಗಿ ಕರ್ತವ್ಯ.

ಕಾಲೇಜಿನ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಭಾಗಿ. ಯುವ ಮಹಿಳಾ ಸಬಲೀಕರಣದಲ್ಲಿ ಪಾಲ್ಗೊಂಡಿದ್ದು. ಯುವ ಜನೋತ್ಸವದಲ್ಲಿ ಭಾಗಿ.

> “ನಮ್ಮ ಸಂಸ್ಥೆ 28 ಯೂನಿವರ್ಸಿಟಿ ಯಾರ್ಂಕ್, 15 ಗೋಲ್ಡ್ ಮೆಡಲ್, 700 ಸ್ಥಳಗಳಲ್ಲಿ ಉದ್ಯೋಗ ಅವಕಾಶ ನೀಡಿದ್ದು, ಹಾಗೂ ಡಿಗ್ರಿ ಕಾಲೇಜಿನ ವಿದ್ಯಾರ್ಥಿನಿ ಬಿ.ಎಸ್.ಸಿ ಪದವಿ ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಗೋಲ್ಡ್ ಮೆಡಲ್ ಪಡೆದುಕೊಂಡಿದ್ದು, ನಮ್ಮ ಕಾಲೇಜಿಗೆ ಹೆಮ್ಮೆ ತಂದಿದೆ. ವಿಜಯಪುರ ಜಿಲ್ಲೆಯ ಮಹಿಳಾ ವಿಶ್ವವಿದ್ಯಾನಿಲಯದ 17ನೇ ವಾರ್ಷಿಕ ಘಟಿಕೋತ್ಸವದಲ್ಲಿ ರಾಜ್ಯಪಾಲರಿಂದ ಪ್ರಶಸ್ತಿ ಪ್ರಧಾನವಾಗಿದೆ ಇದು ನಮ್ಮ ಕಾಲೇಜಿಗೆ ಅಷ್ಟೇ ಅಲ್ಲದೆ ತಾಲೂಕಿನ ಹೆಮ್ಮೆಯ ವಿಷಯವಾಗಿದೆ.
>
> **ಪಾಟೀಲ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಆರ್.ಸಿ ಪಾಟೀಲ್)**

> “ಕಾರಟಗಿ ತಾಲೂಕಿನ ಚಳ್ಳೂರು ಗ್ರಾಮದಲ್ಲಿ ನಾವು ಸಣ್ಣ ರೈತರಾಗಿದ್ದು, ನಮ್ಮ ಕಸುಬು ಕೃಷಿಯಾಗಿದೆ. ನಮ್ಮ ಜಮೀನಿನ ಜೋತೆಗೆ ಇನ್ನಿತರ ಜಮೀನನ್ನು ಸಾಗುವಳಿ ಮಾಡುತ್ತಾ ಜೀವನ ಸಾಗಿಸುತ್ತಿದ್ದೇವೆ. ನಮಗೆ ನಮ್ಮ ಮಗಳ ಸಾಧನೆ ನೋಡಿ ಇಂತಹ ಮಗಳನ್ನು ಪಡೆದೆದ್ದು ನಮ್ಮ ಪುಣ್ಯ ಎಂದಿನಿಸುತ್ತದೆ. ಮಗಳ ಸಾಧನೆಯಿಂದಾಗಿ ನಮಗೆ ಗೌರವ ಸಿಗುವಂತಾಗಿದೆ. ನಮ್ಮ ಕುಟುಂಬದವರು ಹಾಗೂ ಗ್ರಾಮದವರು ಕೂಡ ಸಂತಷ ವ್ಯಕ್ತಪಡಿಸಿದ್ದಾರೆ. ಅವಳ ಮುಂದಿನ ವಿದ್ಯಾಭ್ಯಾಸಕ್ಕಾಗಿ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ.
>
> **ಕು.ಶ್ವೇತಾ ಮೇಟಿ ತಂದೆ ದೇವರಡ್ಡಿ ಮೇಟಿ**

# ಬಿಸಿಲಿನ ಶಾಖದಿಂದ ರಕ್ಷಣೆ ಅಗತ್ಯ:ಹಿರೇಮಠ




• **ಮಲ್ಲಮ್ಮ ನುಡಿ ವಾರ್ತೆ, ಸಿಂಧನೂರು**

ತಾಲೂಕಿನ ಹಟ್ಟಿ ಗ್ರಾಮದಲ್ಲಿ ಸಾರ್ವತ್ರಿಕ ಮಕ್ಕಳ ಹೊರವಲಯ ಲಸಿಕಾ ಕಾರ್ಯಕ್ರಮದಲ್ಲಿ " *ಬಿಸಿಲಿನ ಶಾಖದಿಂದ ನಿಮ್ಮನ್ನು ರಕ್ಷಿಸಿಕೊಳ್ಳಿ"* ಗ್ರಾಮದ ಹಿರಿಯ ನಾಗರಿಕರಿಗೂ ಹಾಗೂ ಗರ್ಭಿಣಿಯರಿಗೂ ಹಾಗೂ ತಾಯಂದಿರಿಗೆ ಬಿಸಿಲಿನ ಶಾಖದಿಂದ ಹೇಗೆ ರಕ್ಷಿಸಿಕೊಳ್ಳುವುದರ ಬಗ್ಗೆ ಮಾಹಿತಿ ನೀಡಲಾಯಿತು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಜ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರ ಹಾಗೂ ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಗಾಂಧಿನಗರ ಇವರ ವ್ಯಾಪ್ತಿಗೆ ಬರುವ ಹಟ್ಟಿ ಗ್ರಾಮದಲ್ಲಿ ಶ್ರೀಮತಿ ಗೀತಾ ಹಿರೇಮಠ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು ಇವರು ಮಾತನಾಡಿ ಗರ್ಭಿಣಿ ಮತ್ತು ತಾಯಂದಿರನ ಉದ್ದೇಶಿಸಿ ಅನಾರೋಗ್ಯ ಪೀಡಿತರ ಮತ್ತು ಹೆಚ್ಚು ಸಮಯದಿಂದ ಔಷಧಿ ಸೇವಿಸುವವರು ಬಿಸಿಲಿನಲ್ಲಿ ಹೆಚ್ಚು ಪರಿಶ್ರಮ ಮಾಡುವುದನ್ನು ತಪ್ಪಿಸಬೇಕು ಹೆಚ್ಚುತ್ತಿರುವ ಶಾಖಕ್ಕೆ ಹೊಂದಿಕೊಳ್ಳಲು ಮತ್ತು ಬಿಸಿಲಿನಿಂದ ತಪ್ಪಿಸುವ ತಂಪಾದ ಕುಡಿಯುವ ನೀರು ಮತ್ತು ನೆರಳಿನ ಸ್ಥಳ ಅಥವಾ ತಂಪಾದ ಕೋಣೆಗಳನ್ನು ಒದಗಿಸುವುದು ನಿಮ್ಮ ಪ್ರದೇಶದ ತೀವ್ರ ಶಾಖ ಅಥವಾ ಉಷ್ಣತೆಯ ಮುನ್ಸೂಚನೆಗಳಿಗೆ ಗಮನ ಕೊಡಿ ಎಂದು ಹೇಳಿದರು

ಶರೀರ ತಾಪಮಾನ ಹೆಚ್ಚು ಆಗಿದ್ದವರು ಅಥವಾ ಪ್ರಜ್ಞೆ ಹೀನವಾಗಿರುವವರು ಅಥವಾ ಗೊಂದಲಕ್ಕೊಳಗದವರು ಅಥವಾ ಬೆವರುವಿಕೆ ಇಲ್ಲದಿರುವವರು ಕಂಡು ಬಂದರೆ ತಕ್ಷಣವೇ ಹತ್ತಿರದ ಆರೋಗ್ಯ ಕಾರ್ಯಕರ್ತರನ್ನು ಸಂಪರ್ಕಿಸಿ ಅಥವಾ ತಕ್ಷಣವೇ 108 ಅಥವಾ 102 ಕ್ಕೆ ಕರೆ ಮಾಡಿ ಚಿಕಿತ್ಸೆಯನ್ನು ಪಡೆಯತಕ್ಕದ್ದು ಶೀಘ್ರವಾಗಿ ತಂಪು ಮಾಡಲು ಮತ್ತು ಪ್ರಥಮ ಚಿಕಿತ್ಸೆಗಾಗಿ ವ್ಯವಸ್ಥೆ ಮಾಡಿಕೊಳ್ಳುವಂತೆ ನೋಡಿಕೊಳ್ಳಬೇಕೆಂದರು

ಹೆಚ್ಚು ಶ್ರಮದ ಕೆಲಸವನ್ನು ಬೆಳಗ್ಗೆ ಮತ್ತು ಸಂಜೆ ಸಮಯದಲ್ಲಿ ಮಾಡಿರಿ ಕೆಲಸದ ವೇಗವನ್ನು ಕಡಿಮೆ ಮಾಡಿ ಉದ್ಯೋಗಗಳ ಮಧ್ಯೆ ಕೆಲಸವನ್ನು ಹಂಚಿಕೊಳ್ಳುವಂತದ್ದು ಹೊರಾಂಗಣದ ಕೆಲಸ ಸಮಯದಲ್ಲಿ ವಿಶ್ರಾಂತಿ ಸಮಯವನ್ನು ಹೆಚ್ಚಿಸಿ ಪ್ರತಿಯೊಂದು ಗಂಟೆಗೆ ಕೆಲಸದ ನಂತರ ಕನಿಷ್ಠ ಐದು ನಿಮಿಷ ವಿಶ್ರಾಂತಿಯನ್ನು ಪಡೆಯುವಂಥದ್ದು 30 ನಿಮಿಷಗಳ ಕಾಲ ತಂಪಾದ ವಾತಾವರಣದಲ್ಲಿ ವಿಶ್ರಾಂತಿ ಮಾಡಿ ನಿಮ್ಮ ಉಷ್ಣತೆಯು ಕಡಿಮೆಯಾದರೆ ನಿಮಗೆ ಉತ್ತಮವೆನಿಸುವುದು ಎಂದರು

ನಿರ್ಜಲೀಕರಣವನ್ನು ತಡೆಗಟ್ಟಲು ಉತ್ತಮ ಮಾರ್ಗವೆಂದರೆ ನೀವು ಬಾಯಾರಿಕೆಯಾಗುವ ಮೊದಲು ನೀರು ಕುಡಿಯುವುದು, ಹೆಚ್ಚಾಗಿ ಶಾಖ ಒತ್ತಡದಿಂದ ಆಗುತ್ತದೆ ತಲೆನೋವು,ಬಳಲಿಕೆ ಹೆಚ್ಚಾದ ದೇಹದ ಉಷ್ಣತೆ,ಹೆಚ್ಚಾದ ಬೆವರು ಉಸಿರಾಟದ ತೊಂದರೆ ನೀವು ಶಾಖದ ಒತ್ತಡ ಲಕ್ಷಣಗಳನ್ನು ಹೊಂದಿದ್ದರೆ ಪ್ರಥಮ ಚಿಕಿತ್ಸೆಯನ್ನು ಪಡೆದುಕ್ಕೊಳು ವಂಥದ್ದು ತಂಪಾಗಿರಿ ಸುರಕ್ಷಿತವಾಗಿರಿ ಎಂದು ಹೇಳಿದರು

ಬಿಸಿಲಿನ ಬೇಗೆಯನ್ನು ನೀಗಿಸಲು, ಅತಿ ಹೆಚ್ಚು ಬಿಸಿಲಿರುವ ಸಮಯದಲ್ಲಿ ಅಂದರೆ ಮಧ್ಯಾಹ್ನದ ಅಡುಗೆ ಮಾಡಬೇಡಿ ಒಂದು ವೇಳೆ ಅಡುಗೆ ಮಾಡಿದರೆ ಅಡುಗೆ ಕೋಣೆ ಕಿಟಕಿ ಮತ್ತು ಬಾಗಿಲನ್ನು ತೆರೆದಿಟ್ಟು ವಾತವರಣ ಅನುಕೂಲ ವಾಗುವಂತೆ ಕೋಣೆಯಲ್ಲಿ ಗಾಳಿ ಆಡುವಂತೆ ನೋಡಿಕೊಳ್ಳಿ ಅತಿ ಹೆಚ್ಚು ಪ್ರೋಟೀನ್ ಯುಕ್ತ ಅಥವಾ ಅಳಿಸಿದ ಅಥವಾ ಹಳೆಯ ಆಹಾರವನ್ನು ತೆಗೆದುಕೊಳ್ಳಬೇಡಿ ಬೇಸಿಗೆ ಬೇಗೆಯನ್ನು ಸೋಲಿಸಿ ಒಡೆದೊಡಿಸಿ ಬಿಸಿಲಿನ ತಾಪಮಾನದಿಂದ ಆಗುವ ಆರೋಗ್ಯದ ಸಮಸ್ಯೆಗಳ ಬಗ್ಗೆ ಹೆಚ್ಚು ಗಮನವಿರಲಿ ಬಿಸಿಲಿನ ಶಾಖದಿಂದ ನಿಮ್ಮನ್ನು ರಕ್ಷಿಸಿಕೊಳ್ಳಬೇಕು

ತಂಪಾದ ಸ್ಥಳಕ್ಕೆ ಮತ್ತು ವಿಶ್ರಾಂತಿ ಪಡೆಯಿರಿ ರೋಗ ಲಕ್ಷಣಗಳು ಕಂಡು ಬಂದರೆ ತಕ್ಷಣ ಹತ್ತಿರದ ಆಸ್ಪತ್ರೆಗಳಿಗೆ ಭೇಟಿ ನೀಡಿ ಅಥವಾ ಆಂಬುಲೆನ್ಸ್ ಗೆ ಕರೆ ಮಾಡಿ ಚಿಕಿತ್ಸೆಯನ್ನು ಪಡೆದುಕೊಳ್ಳಿ ಎಂದು ಹೇಳಿದರು

ಈ. ಸಂದರ್ಭದಲ್ಲಿ. ಇಸ್ಮೈಲ್, ಬಿ, ಪಿ ಎಚ್ ಸಿ ಓ, ಮಹೇಶ್ವರಿ ಆಶಾ ಕಾರ್ಯಕರ್ತೆ ಗರ್ಭಿಣಿ ತಾಯಂದಿರು ಸಾರ್ವಜನಿಕರು ಉಪಸ್ಥಿತರಿದ್ದರು.

# ರಾಜ್ ಕುಮಾರ್ ಜನ್ಮ ದಿನಾಚರಣೆಗೆ ನಿರ್ಧಾರ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕಲಬುರಗಿ ಜಿಲ್ಲಾಡಳಿತದಿಂದ ಇದೇ ಏಪ್ರಿಲ್ 24 ರಂದು ಜಿಲ್ಲಾ ಮಟ್ಟದಲ್ಲಿ ವರನಟ ಡಾ.ರಾಜ್ ಕುಮಾರ್ ಅವರ 97ನೇ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಣೆಗೆ ಮಂಗಳವಾರ ಜರುಗಿದ ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಅಧ್ಯಕ್ಷತೆಯ ಸಭೆಯು ನಿರ್ಧಾರ ಕೈಗೊಂಡಿದೆ.

ಅಂದು ಬೆಳಿಗ್ಗೆ 10 ಗಂಟೆಗೆ ನಗರದ ಕನ್ನಡ ಭವನದ ಸುವರ್ಣ ಭವನದಲ್ಲಿ ಡಾ.ರಾಜ್ ಕುಮಾರ್ ಅವರ ಜನ್ಮ ದಿನಾಚರಣೆ ಕಾರ್ಯಕ್ರಮ ಆಯೋಜನೆಗೆ ನಿರ್ಧರಿಸಿದ್ದು, ಕಾರ್ಯಕ್ರಮದಲ್ಲಿ ಡಾ. ರಾಜ್ ಭಾವಚಿತ್ರಕ್ಕೆ ಪೂಜೆ ಮತ್ತು ಡಾ.ರಾಜಕುಮಾರ ಅಭಿನಯದ ಚಲನಚಿತ್ರಗಳ ಗೀತ ಗಾಯನ ಕಾರ್ಯಕ್ರಮ ಆಯೋಜಿಸಲು ಸಭೆ ಒಮ್ಮತದ ನಿರ್ಣಯ ತೆಗೆದುಕೊಂಡಿದೆ.

ಶಿಷ್ಠಾಚಾರದಂತೆ ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಚುನಾಯಿತ ಜನಪ್ರತಿನಿಧಿಗಳನ್ನು ಆಹ್ವಾನಿಸಬೇಕು, ಗಾನಯಾನಕ್ಕೆ ಕಲಾ ತಂಡ ಅಂತಿಮಗೊಳಿಸಬೇಕೆಂದು, ಮುಂಚಿವಾಗಿಯೆ ಗಣ್ಯರಿಗೆ ಆಮಂತ್ರಣ ಪತ್ರಿಕೆ ತಲುಪಿಸಬೇಕು ಎಂದು ಅಧಿಕಾರಿಗಳಿಗೆ ಎ.ಡಿ.ಸಿ ಸೂಚಿಸಿದರು.

ಕಾರ್ಯಕ್ರಮಕ್ಕೆ ಗಣ್ಯರು ಸೇರಿದಂತೆ ಸಾರ್ವಜನಿಕರು, ಸಾಹಿತಿಗಳು, ಕನ್ನಡಪರ ಸಂಘಟನೆಗಳ ಹಾಗೂ ಡಾ.ರಾಜ್ ಅಭಿಮಾನಿಗಳು ಬರುವುದರಿಂದ ಆಸನ ವ್ಯವಸ್ಥೆ, ಕುಡಯುವ ನೀರಿನ ವ್ಯವಸ್ಥೆ ಮಾಡಬೇಕು. ಕನ್ನಡ ಭವನ ಆವರಣ ಸ್ವಚ್ಚಗೊಳಿಸಬೇಕು. ಕಾರ್ಯಕ್ರಮದ ಸಮಯದಲ್ಲಿ ವಿದ್ಯುತ್ ವ್ಯತ್ಯಯವಾಗದಂತೆ ಎಚ್ಚರ ವಹಿಸಿಬೇಕೆಂದು ಹಾಗೂ ಪೊಲೀಸ್ ಇಲಾಖೆ ಸೂಕ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸಬೇಕೆಂದು ಅಪರ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.ಸಭೆಯಲ್ಲಿ ಭಾಗವಹಿಸಿದ ಡಾ.ರಾಜ್ ಕುಮಾರ್ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷ ರಾಘವೇಂದ್ರ ವಿ. ಕುಲಕರ್ಣಿ, ಸಾಹಿತಿ ಭೀಮಪ್ಪ ಬೋನಾಳ ಮಾತನಾಡಿ, ಡಾ.ರಾಜ್ ಅವರ ಚಿತ್ರಗಳು ಕೇವಲ ಸಿನಿಮಾಗಳಾಗದೆ ಅವು ಬದುಕಿನ ದಾರಿದೀಪಗಳಾಗಿವೆ. ಇಂತಹ ಮೇರು ನಟನ ಪುತ್ಥಳಿ ನಗರದ ತಹಶೀಲ್ದಾರ ಕಚೇರಿ ಮುಂಭಾಗದಲ್ಲಿ ಸ್ಥಾಪಿಸಲು ಈ ಹಿಂದೆ ಪಾಲಿಕೆಯಿಂದ ನಿರ್ಣಯ ಕೈಗೊಂಡಿದ್ದು, ಇದೂವರೆಗೆ ಅನುಷ್ಠಾನಕ್ಕೆ ಬಂದಿಲ್ಲ. ಪುತ್ಥಳಿ ಸ್ಥಾಪಿಸುವ ಮೂಲಕ ಶ್ರೇಷ್ಠ ಕಲಾವಿದನಿಗೆ ಗೌರವ ಸಲ್ಲಿಸಬೇಕು, ಡಾ.ರಾಜ್ ಕುಮಾರ್ ಹೆಸರಿನಲ್ಲಿ ಪ್ರಶಸ್ತಿ ನೀಡಬೇಕೆಂದು ಮನವಿ ಮಾಡಿಕೊಂಡರು.

# ನಿವೇದಿತ ಆಂಗ್ಲ ಮಾಧ್ಯಮ ಶಾಲೆ ಮತ್ತೊಮ್ಮೆ ಉತ್ತಮ ಫಲಿತಾಂಶ



• **ಮಲ್ಲಮ್ಮ ನುಡಿ ವಾರ್ತೆ, ಕಂಪ್ಲಿ**

ಪಟ್ಟಣದ ನಿವೇದಿತ ಆಂಗ್ಲ ಮಾಧ್ಯಮ ಶಾಲೆಯು ಮತೊಮ್ಮೆ ಉತ್ತಮ ಫಲಿತಾಂಶ ನೀಡಿ ಅತ್ತುತ್ತಮ ಸಾಧನೆ. ಪ್ರಸಕ್ತ ಶೈಕ್ಷಣಿಕ 2025-26ನೇ ಸಾಲಿನ 10ನೇ ತರಗತಿಯ ಫಲಿತಾಂಶ ಪ್ರಕಟಗೊಂಡಿದ್ದು, ಕಂಪ್ಲಿ ಭಾಗದಲ್ಲಿ ಕಳೆದ ವರ್ಷ ನಿವೇದಿತಾ ಆಂಗ್ಲ ಮಾಧ್ಯಮ ಶಾಲೆ ಭಾರೀ ಸದ್ದು ಮಾಡುತ್ತು. ಈ ವರ್ಷವೂ ಕೂಡ ನಿವೇದಿತ ಆಂಗ್ಲ ಮಾಧ್ಯಮ ಶಾಲೆಯು ಶೇಕಡಾ 94.73% ರಷ್ಟು ಫಲಿತಾಂಶದೊಂದಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುವ ಮೂಲಕ ಶೈಕ್ಷಣಿಕ ವರ್ಷದಲ್ಲಿ ಹತ್ತನೇ ತರಗತಿಯಲ್ಲಿ ಕಳೆದ ವರ್ಷ 9ನೇ ವರ್ಷಗಳ ಅತ್ಯುತ್ತಮ ಪಲಿತಾಂಶವನ್ನು ಪಡೆದುಕೊಂಡಿತ್ತು.

ಆದೆ ರೀತಿ ಈ ವರ್ಷವೂ ಕೂಡ ನಿವೇದಿತ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಈ ವರ್ಷ 10ನೇ ತರಗತಿಯ ಒಟ್ಟು19 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಡಿಸ್ಟಿಂಕ್ಷನ್-02 ಪ್ರಥಮ ದರ್ಜೆ-13 ದ್ವಿತೀಯ-02 ತೃತೀಯ-1ರೊಂದಿಗೆ ಅತ್ಯುತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದು ವಿಶೇಷವಾಗಿದೆ. ಇನ್ನು ನಾಲ್ಕು ವಿದ್ಯಾರ್ಥಿಗಳು ಮಾತ್ರ ತಲಾ ದ್ವಿತೀಯ ಭಾಷೆ ಕನ್ನಡ 100/100 ಒಬ್ಬ ವಿದ್ಯಾರ್ಥಿ ಹಿಂದಿ 100/100 ವಿಷಯದಲ್ಲಿ ಅನುತ್ತೀರ್ಣರಾಗಿ ಶೇಕಡಾ ಶಾಲೆಗೆ ಶೇಕಡಾ 94.73% ರಷ್ಟು ಫಲಿತಾಂಶ ನೀಡಿದ್ದಾರೆ.

ಇದರಲ್ಲಿ ಪ್ರಥಮ ಸ್ಥಾನ ಕೆ. ವಿ.ಪ್ರಜ್ವಲ್ 599(625) 95.64% (ಕಂಪ್ಲಿ), ದ್ವಿತೀಯ ಸ್ಥಾನ ತೇಜಸ್ 577(625) 92.32%(ಸಣಾಪುರ), ತೃತೀಯ ಸ್ಥಾನ ಕೆ ಸಾಯಿ ಚರಣ್ 522(625) 83.52% (ನಂ.2 ಮುದ್ದಾಪುರ), ಚತುರ್ಥಿ ಸ್ಥಾನ ಮಹಮದ್ ಸಲೀಂ 522(625) 83.52%(ಎಮ್ಮಿಗನೂರು), ಕಡೆಮನೆ ಮಾಬು ಸುಭಾನಿ 504(625) 80.64% (ಇಟ್ಟಗಿ ), ಐದನೇ ಸ್ಥಾನ ಪಡೆಯುವುದರ ಮೂಲಕ ನಿವೇದಿತಾ ಆಂಗ್ಲ ಮಾಧ್ಯಮ ಶಾಲೆಗೆ ಹಾಗೂ ಪೋಷಕರಿಗೆ ಕೀರ್ತಿ ತಂದಿದ್ದಾರೆ ಎಂದು ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿಯವರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಶ್ರೀ ಮಾತಾ ಮೊಂಟಸರಿ ವಿದ್ಯೆ ಸಂಸ್ಥೆ (ರಿ) ಕಾರ್ಯದರ್ಶಿ ಶ್ರೀಯುತ ಕೆ ರಾಮು ಹಾಗೂ ಅಧ್ಯಕ್ಷರಾದ ಹೆಚ್ ಮರಿಯಪ್ಪ ಮತ್ತು ಮುಖ್ಯ ಶಿಕ್ಷಕಿಯಾದ ಎಂ ಪುಪ್ಪಾ ಸಂತಸ ಹಂಚಿಕೊಂಡಿದ್ದು, ಗ್ರಾಮೀಣ ಭಾಗದಲ್ಲಿ ಅತ್ಯುತ್ತಮ ಹಾಗೂ ಮೌಲ್ಯಯುತ ಶಿಕ್ಷಣವನ್ನು ಗ್ರಾಮೀಣ ವಿದ್ಯಾರ್ಥಿಗಳಿಗೆ ನೀಡುವ ಮೂಲಕ ಯಶಸ್ಸು ಸಿಕ್ಕಿರುವುದು ಬಹಳ ಸಂತೋಷ ನೀಡಿದೆ. ಶೇಕಡಾ 94.73% ರಷ್ಟು ಫಲಿತಾಂಶ ಗಳಿಸುವಲ್ಲಿ ಹಗಲಿರುಳು ಶ್ರಮಿಸಿದ ವಿದ್ಯಾರ್ಥಿಗಳಿಗೆ, ಪ್ರಾಂಶುಪಾಲರಿಗೂ, ಎಲ್ಲಾ ಭೋದಕ ಮತ್ತು ಸಿಬ್ಬಂದಿ ವೃಂದದವರಿಗೆ ಈ ಮೂಲಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಗುರುಗಳು ಶಿಕ್ಷಕರು ಸಿಬ್ಬಂದಿ ವರ್ಗದವರು ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಅಕ್ರಮ ವೈನ್‌ಶಾಪ್‌ಗಳ ಕ್ರಮ ಕೈಗೋಳ್ಳಲು ಅಧಿಕಾರಿ ಹಿಂದೇಟು

# ವರದಿ ಪ್ರಕಟವಾದರೂ ಎಚ್ಚೆತ್ತುಕೊಳ್ಳದ ಅಧಿಕಾರಿಗಳು

• **ಮಲ್ಲಮ್ಮ ನುಡಿ ವಾರ್ತೆ, ಗಂಗಾವತಿ**



ಗಂಗಾವತಿ: ನಗರದ ಹೃದಯ ಭಾಗದ ನಗರಸಭೆ ಮುಂಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ "ದಿ ನ್ಯೂ, ಸಿ.ಎಲ್-2 ವೈನ್ ಶಾಫ್" ವಿರುದ್ಧ ಸಾರ್ವಜನಿಕರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ವೈನ್‌ಶಾಪ್ ಮುಂದೆ ಮದ್ಯಪಾನ ಮಾಡಲು ಅವಕಾಶ ನೀಡಲಾಗುತ್ತಿದ್ದು, ಇದು ಸಾರ್ವಜನಿಕರಿಗೆ ಅಚಂಚಲವಾದ ವಾತಾವರಣದಿಂದ ತೊಂದರೆ ಉಂಟುಮಾಡುತ್ತಿದೆ ಎಂದು ಕನ್ನಡ ಜಾಗೃತಿ ವೇದಿಕೆಯ ಜಿಲ್ಲಾಧ್ಯಕ್ಷ ಸೈಯ್ಯದ್ ಅಸ್ಲಂ ಆರೋಪಿಸಿದ್ದಾರೆ.

ಅಬಕಾರಿ ಕಾಯ್ದೆಯ ಪ್ರಕಾರ ಸಿ.ಎಲ್-2 ಪರವಾನಿಗೆ ಹೊಂದಿರುವ ವೈನ್‌ಶಾಪ್‌ಗಳಿಗೆ ಕೇವಲ ಮದ್ಯವನ್ನು ಪಾರ್ಸೆಲ್ ರೂಪದಲ್ಲಿ ಮಾರಾಟ ಮಾಡಲು ಮಾತ್ರ ಅವಕಾಶವಿದ್ದು, ಸ್ಥಳದಲ್ಲೇ ಕುಡಿಯಲು ಅವಕಾಶ ನೀಡುವುದು ಕಾನೂನು ಉಲ್ಲಂಘನೆಯಾಗಿದೆ. ಆದರೆ ಗಂಗಾವತಿಯ ಈ ವೈನ್‌ಶಾಪ್‌ನಲ್ಲಿ ಮಾಲೀಕರು ತಮ್ಮ ಲಾಭಕ್ಕಾಗಿ ಗ್ರಾಹಕರಿಗೆ ತಮ್ಮದೇ ಆದಂತಹ ಪಕ್ಕದ ಶಾಪ್ ನಲ್ಲಿ ನಿಂತು ಮತ್ತು ಕುಳಿತು ಮದ್ಯಪಾನ ಮಾಡಲು ಅವಕಾಶ ಮಾಡಿಕೊಡುತ್ತಿರುವುದು ಬೆಳಕಿಗೆ ಬಂದಿದೆ.

ಈ ಪ್ರದೇಶವು ಅತ್ಯಂತ ಜನಸಂದಣಿ ಇರುವ ಪ್ರದೇಶವಾಗಿದ್ದು, ಸಮೀಪದಲ್ಲೇ ತಾಲೂಕು ಬಸ್ ನಿಲ್ದಾಣ, ಐಸ್‌ಕ್ರೀಮ್ ಪಾರ್ಲರ್, ಬೇಕರಿ ಸೇರಿದಂತೆ ಹಲವಾರು ವ್ಯಾಪಾರಿಕ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.ಅಲ್ಲದೆ ಅಂಜನಾದ್ರಿ ದೇವಸ್ಥಾನಕ್ಕೆ ಹೋಗುವ ಮುಖ್ಯ ಮಾರ್ಗವಾಗಿರುವುದರಿಂದ ಪ್ರತಿದಿನ ಪ್ರವಾಸಿಗರು ಹಾಗೂ ಭಕ್ತರು ವೈನ್ ಶಾಪ್ ಇರುವ ರಸ್ತೆ ಮಾರ್ಗವಾಗಿ ಸಂಚರಿಸುತ್ತಾರೆ.

ಈ ಹಿನ್ನೆಲೆಯಲ್ಲಿ ಮಹಿಳೆಯರು, ಮಕ್ಕಳು ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಂಚರಿಸಲು ಅಸೌಕರ್ಯ ಎದುರಿಸುತ್ತಿದ್ದಾರೆ.

ಮದ್ಯಪಾನ ಮಾಡುವ ಕೆಲವರು ಸಾರ್ವಜನಿಕರಿಗೆ ಅಸಭ್ಯ ವರ್ತನೆ ತೋರಿಸುತ್ತಿರುವುದು ಮಾತ್ರವಲ್ಲದೆ, ಪ್ರಶ್ನೆ ಮಾಡಿದರೆ ಹಲ್ಲೆಗೆ ಮುಂದಾಗುತ್ತಿರುವ ಘಟನೆಗಳೂ ವರದಿಯಾಗಿವೆ. ಇದರಿಂದ ಸ್ಥಳೀಯ ನಿವಾಸಿಗಳು ಮತ್ತು ಸಾರ್ವಜನಿಕರು ಆತಂಕಕ್ಕೊಳಗಾಗಿದ್ದಾರೆ.ಈ ಸಂಬಂಧ ಈಗಾಗಲೇ ಏಪ್ರಿಲ್ 10, 2026 ರಂದು ಗಂಗಾವತಿ ಅಬಕಾರಿ ನಿರೀಕ್ಷಕರಿಗೆ ದೂರು ಸಲ್ಲಿಸಿ, ವರದಿಯು ಪ್ರಕಟ ಮಾಡಲಾಗಿತ್ತು, ಆದರೂ ಅಧಿಕಾರಿಗಳು ಯಾವುದೇ ಕ್ರಮ ಕೈ ಗೊಳ್ಳದಿರುವುದಕ್ಕೆ ಅಸಮಾಧಾನ ವ್ಯಕ್ತವಾಗಿದೆ.

ಅಧಿಕಾರಿಗಳು ನಿರ್ಲಕ್ಷ್ಯ ತೋರಿಸುತ್ತಿದ್ದು, ಉಡಾಫೆ ಉತ್ತರ ನೀಡುತ್ತಿದ್ದಾರೆ ಎಂದು ಕನ್ನಡ ಜಾಗೃತಿ ವೇದಿಕೆಯ ಜಿಲ್ಲಾಧ್ಯಕ್ಷ ಸೈಯದ್ ಅಸ್ಲಂ ಪಾಶ ಆರೋಪಿಸಿದ್ದಾರೆ.

ಹೀಗಾಗಿ, ಕರ್ನಾಟಕ ಅಬಕಾರಿ ಕಾಯ್ದೆ, 1965ರ ಸೆಕ್ಷನ್ 29 ಮತ್ತು 30ರ ಅಡಿಯಲ್ಲಿ ಸಂಬಂಧಿತ ವೈನ್‌ಶಾಪ್ ನ ಲೈಸೆನ್ಸ್ ರದ್ದುಪಡಿಸಿ, ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಗಿದೆ.

ಜೊತೆಗೆ ಕರ್ತವ್ಯ ಲೋಪ ತೋರಿದ ಅಬಕಾರಿ ಅಧಿಕಾರಿಗಳ ಮೇಲೂ ಕ್ರಮ ಜರುಗಿಸುವಂತೆ ಆಗ್ರಹಿಸಲಾಗಿದೆ.ಸಾರ್ವಜನಿಕರ ಸುರಕ್ಷತೆ ಹಾಗೂ ಸೌಕರ್ಯ ದೃಷ್ಟಿಯಿಂದ ಸಂಬಂಧಪಟ್ಟ ಇಲಾಖೆಯ ಮೇಲಾಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಅಬಕಾರಿ ಆಯುಕ್ತರು ಅಬಕಾರಿ ಇಲಾಖೆ ಕೊಪ್ಪಳ ಇವರಿಗೆ ಮನವಿ ಸಲ್ಲಿಸುವ ಮೂಲಕ ಒತ್ತಾಯಿಸಿದ್ದಾರೆ.

ಮಲ್ಲಮ್ಮ ನುಡಿ
ಪ್ರಾದೇಶಿಕ ಕನ್ನಡ ದಿನಪತ್ರಿಕೆ
ಬಳ್ಳಾರಿ
ಶುಕ್ರವಾರ 24.04.2026


# ಕನ್ನಡಿಗರೇ ಮರೆತ ಕರ್ನಾಟಕ ವಿಜಯನಗರ ಸಾಮ್ರಾಜ್ಯ

• ಮಲ್ಲಮ್ಮ ನುಡಿ ವಾರ್ತೆ, ಗಂಗಾವತಿ

ನಗರದ ಶ್ರೀ ಕೃಷ್ಣದೇವರಾಯ ವೃತದಲ್ಲಿ ಶ್ರೀ ಗಂಡುಗಲಿ ಕುಮಾರರಾಮ ಹೋರಾಟ ಸಮಿತಿ ಹಾಗೂ ಅಖಿಲ ಕರ್ನಾಟಕ ಹರಿಹರ ಹಕ್ಕ -- ಬುಕ್ಕ ನಾಯಕ ಮಹಾವೇದಿಕೆ ವತಿಯಿಂದ ವಿಶ್ವ ಪ್ರಸಿದ್ಧ ಕರ್ನಾಟಕ (ವಿಜಯನಗರ) ಸಾಮ್ರಾಜ್ಯ ಸಂಸ್ಥಾಪನ ದಿನ ಮತ್ತು ಸಾಮ್ರಾಜ್ಯದ ಮೊದಲ ದೊರೆ ಹರಿಹರ ದೇವರಾಯರ 690ನೇ ಪಟ್ಟಾಭಿಷೇಕ ದಿನವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಗಂಡುಗಲಿ ಕುಮಾರರಾಮನ ವಂಶಸ್ಥರಾದ ಶ್ರೀ ರಾಜೇಶ್ ನಾಯಕ ದೊರೆ ಮಾತನಾಡಿ.

ಅಖಂಡ ಭಾರತವನ್ನಾಳುವ ಮಹಾದಾಸೆಯೊಂದಿಗೆ ದಕ್ಷಿಣ ಭಾರತಕ್ಕೆ ಬಂದ ದೆಹಲಿ ಸುಲ್ತಾನರನ್ನು ಸೋಲಿಸಿ ಕೆಲ ಕಾಲ ದಕ್ಷಿಣಕ್ಕೆ ಭಾರದಂತೆ ತಡೆದು ಕನ್ನಡಿಗರ ಸ್ವಾಭಿಮಾನ ಮತ್ತು ವೀರತ್ವವನ್ನು ಎತ್ತಿಹಿಡಿದದ್ದು ಕುಮ್ಮಟದುರ್ಗದ ಅರಸರಾದ ವೀರಕಂಪಿಲರಾಯ ಮತ್ತು ಗಂಡುಗಲಿ ಕುಮಾರರಾಮ. ಇವರ ಪತನದ ನಂತರ ಇಡೀ ದಕ್ಷಿಣ ಭಾರತ ದೆಹಲಿ ಸುಲ್ತಾನರ ವಶವಾಗಿ ಹಿಂದು ಧರ್ಮವೇ ಅವಸಾನದ ಹಂಚಿಗೆ ತಲುಪಿತ್ತು .

ಆದರೆ ತಾಯಿ ಭುವನೇಶ್ವರಿ ಆಶೀರ್ವಾದ ಮತ್ತು ಗಂಡುಗಲಿ ಕುಮಾರರಾಮನ ಪ್ರೇರಣೆಯಂತೆ ಕುಮಾರರಾಮನ ಅಕ್ಕನ ಮಕ್ಕಳು ಹಾಗೂ ಕುಮಾರರಾಮನ ಆಡಳಿತದಲ್ಲಿ ಭಂಡಾರಿಗಳ ಸೇವೆಯಲ್ಲಿದ್ದ ಸಂಗಮ ಮನೆತನದ ಹರಿಹರ ಬುಕ್ಕರಾಯರು ತಮ್ಮ ಸಹೋದರರೊಂದಿಗೆ ಅಲ್ಲಲ್ಲಿ ಚದುರಿ ಹೋಗಿದ್ದ ಕುಮ್ಮಟದುರ್ಗದ ಸೈನಿಕರನ್ನು ಹಾಗೂ ಬಚಿಟ್ಟಿದ್ದ ಕುಮಾರರಾಮನ ಸಂಪತ್ತನ್ನು ತೆಗೆದುಕೊಂಡು.

ಏಪ್ರಿಲ್ 18 1336ರಂದು ಆನೆಗುಂದಿಯಲ್ಲಿ ಬಲಿಷ್ಠ ಕರ್ನಾಟಕ ( ವಿಜಯನಗರ )ಸಾಮ್ರಾಜ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿದರು ಹಾಗೂ ಸಾಮ್ರಾಜ್ಯದ ಮೊದಲ ದೊರೆಯಾಗಿ ಹರಿಹರ ದೇವರಾಯರು ಪಟ್ಟಾಭಿಷೇಕಗೊಂಡರು. ಇಂತಹ ಮಹೋನ್ನತ ಸಾಮ್ರಾಜ್ಯ ಉದಯಿಸಿದ ದಿನವನ್ನು ನಾವೆಲ್ಲ ಇಂದು ಮರೆತಿರುವುದು ದುರಂತ ನಮ್ಮ ರಾಜರುಗಳಿಗೆ ನಮ್ಮವರೇ ಗೌರವ ಕೊಡದಿರುವಂತದ್ದು ತುಂಬಾ ನೋವಿನ ಸಂಗತಿಯಾಗಿದ್ದು ಇನ್ನಾದರೂ ಕೂಡ ಸರ್ಕಾರ ಸಂಘ ಸಂಸ್ಥೆಗಳು ನಮ್ಮನ್ನಾಳುವವರು ವಿಜಯನಗರ ಸಾಮ್ರಾಜ್ಯದ ಅರಸರಿಗೆ ಮಹತ್ವವನ್ನು ಕೊಡಬೇಕು ಹಾಗೂ ಸಂಸ್ಥಾಪನ ದಿನವನ್ನು ನಾಡ ಹಬ್ಬದಂತೆ ಆಚರಣೆ ಮಾಡಬೇಕೆಂದು ಕರೆನೀಡಿದರು. ಈ ಸಂದರ್ಭದಲ್ಲಿ ಗಂಡುಗಲಿ ಕುಮಾರರಾಮ ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಯುವ ಸಂಶೋಧಕರಾದ ಹರನಾಯಕ ರಂಗಭೂಮಿ ಕಲಾವಿದರಾದ ಭೀಮರಾಯಪ್ಪ ನಾಯಕ, ಚಿದಾನಂದ ಕೀರ್ತಿ, ಪೊಲೀಸ್ ಅಧಿಕಾರಿಗಳಾದ ಶಿವಶರಣ ಠಖಖ, ಮಂಜುನಾಥ್,ಪಂಪಾಪತಿ , ದೇವರಾಜ್, ಎಚ್ ಆರ್ ಕುಮಾರರಾಮ, ಯೂಸುಫ್,ಸಲಿಂಸಾಬ, ಮೈಬುಬ್, ಹುಸೇನಿಪೀರ್. ಏ ಪ್ರದೀಪ್ ನಾಯಕ ಇದ್ದರು.

ಸಂಭ್ರಮದ ಶ್ರೀ ಭಗೀರಥ ಜಯಂತ್ಯೋತ್ಸವ

# ಸಮಾಜದ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ ದೊಡ್ಡದು: ಗಾದೆಪ್ಪ



• ಮಲ್ಲಮ್ಮ ನುಡಿ ವಾರ್ತೆ , ಬಳ್ಳಾರಿ

ಸಮಾಜದ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ ದೊಡ್ಡದು. ಪೋಷಕರು ತಮ್ಮ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸಬೇಕು. ಸಮಾಜದ ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗಬಾರದು ಎಂಬುದು ಸರ್ಕಾರದ ಧ್ಯೇಯವಾಗಿದೆ ಎಂದು ಮಹಾನಗರಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಗುರುವಾರ ಆಯೋಜಿಸಿದ್ದ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ರಾಜ್ಯ ಸರ್ಕಾರವು ಸುಮಾರು 25ಕ್ಕೂ ಹೆಚ್ಚು ಸಣ್ಣ ಮತ್ತು ದೊಡ್ಡ ಸಮುದಾಯಗಳ ಜಯಂತಿಗಳನ್ನು ಆಚರಿಸುವ ಮೂಲಕ ಆಯಾ ಸಮಾಜದ ಮಹನೀಯರು ನೀಡಿದ ತಪಸ್ಸು, ತ್ಯಾಗ ಮತ್ತು ಮಾರ್ಗದರ್ಶನವನ್ನು ಇಂದಿನ ಪೀಳಿಗೆಗೆ ತಲುಪಿಸುವ ಕೆಲಸ ಮಾಡುತ್ತಿದೆ ಎಂದು ಅಭಿಪ್ರಾಯಪಟ್ಟರು.

ಇತ್ತೀಚೆಗೆ ನಡೆದ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರದಂತೆ, ನಗರದ ಸಂಗನಕಲ್ಲಿನ ರಸ್ತೆಯೊಂದರ ವೃತ್ತವೊಂದಕ್ಕೆ ಭಗೀರಥ ವೃತ್ತ ಎಂದು ನಾಮಕರಣ ಮಾಡಲು ಮಾಡಲು ಸರ್ಕಾರಕ್ಕೆ ಮತ್ತು ಸಂಬಂಧಪಟ್ಟ ಇಲಾಖೆಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಕುರಿತು ಈಗಾಗಲೇ ಪೊಲೀಸ್ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ದೊರೆತಿದ್ದು,

ಮುಂದಿನ ಜಯಂತಿಯೊಳಗೆ ಅಧಿಕೃತವಾಗಿ ಉದ್ಘಾಟನೆ ಮಾಡಿ, ಅಲ್ಲಿಂದಲೇ ಜಯಂತಿ ಮೆರವಣಿಗೆ ಮಾಡೋಣ ಎಂದು ಭರವಸೆ ನೀಡಿದರು.

ಸಣ್ಣ ಪುಟ್ಟ ಸಮುದಾಯಗಳು ಒಂದಾಗಿ ಬಾಳಬೇಕು. ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳಲು ಸಂಘಟಿತ ಹೋರಾಟ ಮತ್ತು ಕೇಳುವ ಧಾಟಿ ಮುಖ್ಯ. ನಾವು ಕೇಳುವ ವಿಧಾನ ಸರಿಯಾಗಿದ್ದರೆ ಸರ್ಕಾರ ಖಂಡಿತ ಸ್ಪಂದಿಸುತ್ತದೆ ಎಂದು ತಮ್ಮ ಆಶಯ ವ್ಯಕ್ತಪಡಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಮಾತನಾಡಿ, ಉಪ್ಪಾರ ಸಮುದಾಯದವರು ಇತರರಿಗಾಗಿ ದುಡಿಯುವುದರಲ್ಲಿ ಮತ್ತು ಇತರರ ಕೆಲಸಗಳನ್ನು ಮಾಡಿಕೊಡುವುದರಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದಾರೆ.

ಆದರೆ ಸ್ವಂತ ಸಮುದಾಯದ ರಾಜಕೀಯ ಬೆಳವಣಿಗೆಗೆ ಶ್ರಮಿಸುತ್ತಿಲ್ಲ. ಈ ಧೋರಣೆ ಬದಲಾಗಬೇಕಿದೆ ಮತ್ತು ನಮ್ಮ ಹಕ್ಕುಗಳಿಗಾಗಿ ನಾವು ಒಂದಾಗಬೇಕಿದೆ ಎಂಬ ಹೇಳಿದರು.

ಐತಿಹಾಸಿಕ ಕೊಡುಗೆ ಮತ್ತು ಶ್ರಮಿಕ ಸಂಸ್ಕೃತಿ ಉಪ್ಪಾರ ಮತ್ತು ಗಂಗಾಮತಸ್ಥ ಸಮುದಾಯಗಳ ದೇಶಪ್ರೇಮ ಹಾಗೂ ಶ್ರಮಿಕ ಗುಣವನ್ನು ಅಳವಡಿಸಿಕೊಂಡವರು ಎಂದು ಒತ್ತಿ ಹೇಳಿದ ಅವರು, ಮುಂಬರುವ ದಿನಗಳಲ್ಲಿ ಎಲ್ಲಾ ಹಿಂದುಳಿದ ಮತ್ತು ಶೋಷಿತ ವರ್ಗಗಳು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕವಾಗಿ ಒಗ್ಗೂಡಿ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

# ಮಹಿಳಾ ಮೀಸಲಾತಿ ವಿರೋಧಿಗಳಿಗೆ ಜನ ತಕ್ಕ ಪಾಠ ಕಲಿಸಲಿದ್ದಾರೆ: ಶ್ರೀರಾಮುಲು



• ಮಲ್ಲಮ್ಮ ನುಡಿ ವಾರ್ತೆ , ಬಳ್ಳಾರಿ

ಮಹಿಳಾ ಮೀಸಲಾತಿ ತಿದ್ದುಪಡಿ ಕಾಯ್ದೆ ಜಾರಿಗೆ ಸಂಸತ್ ನಲ್ಲಿ ಎನ್ ಡಿಎ ವಿಫಲವಾಗಿರುವುದನ್ನು ಪ್ರತಿ ಪಕ್ಷಗಳು ಜಯ ಎಂಬಂತೆ ಬಿಂಬಿಸಿಕೊಳ್ಳುತ್ತಿವೆ. ಅವರಿಗೆ ಜನತೆ ತಕ್ಕ ಪಾಠ ಕಲಿಸುತ್ತಾರೆಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದ್ದಾರೆ.

ಅವರು ಇಂದು ನಗರದಲ್ಲಿನ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ. ಗಾಂಧಿ ಕುಟುಂಬಕ್ಕೆ ಮಹಿಳಾ ಮೀಸಲಾತಿ ಬೇಕಿಲ್ಲ. ಕಾರಣ ಅವರಿಗೆ ವಂಶಪರಂಪರೆಯ ರಾಜಕೀಯ ಇರುವುದರಿಂದ. ಇದೇ ರೀತಿ ಡಿಎಂಕೆ.ಸಮಾಜವಾದಿ ಪಕ್ಷ, ಟಿಎಂಸಿಯವರು ಸಹ ಮಹಿಳಾ ಮೀಸಲಾತಿ ವಿರೋಧಿಸಿದ್ದಾರೆ. ಇಂಡಿ ಕೂಟ ಕುಟುಂಬದ ಕೂಟ ಆಗಿದೆಂದು ಆರೋಪಿಸಿದರು.

ಈ ವೇಳೆ ಶ್ರೀರಾಮುಲು ಅವರು ತಮ್ಮ ಕಚೇರಿಯಲ್ಲಿ ಭಗೀರಥರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ. ಭಗೀರಥ ಜಯಂತಿ ಆಚರಿಸಿದರು.ಸುದ್ದಿಗೋಷ್ಠಿಯಲ್ಲಿ ಪಾಲಿಕೆಯ ಪ್ರತಿ ಪಕ್ಷದ ನಾಯಕ,ಶ್ರೀನಿವಾಸ್ ಮೋತ್ಕರ್, ಸದಸ್ಯರಾದ ಕೆ..ಹನುಮಂತಪ್ಪ, ಹನುಂತ ಗುಡಿಗಂಟಿ, ಪಕ್ಷದ ಮುಖಂಡರುಗಳಾದ ಎಸ್.ಗುರುಲಿಂಗನಗೌಡ, ವೇಮಣ್ಣ, ಮೊದಲಾದವರು ಇದ್ದರು.ಪ್ರಧಾನಿ ಮೋದಿ ಅವರನ್ನು ಮಲ್ಲಿಕಾರ್ಜುನ ಖರ್ಗೆ ಬಯೋತ್ಪಾದಕರು ಎಂದು ಕರೆದಿರುವುದು ದೇಶಕ್ಕೆ ಮಾಡಿದ ಅಪಮಾನವಾಗಿದೆ. ಒಂದು ಕುಟುಂಬವನ್ನು ಓಲೈಕೆ ಮಾಡಲು ಹೀಗೆ ಹೇಳಿದ್ದು ಸರಿಯಲ್ಲ. ಸಣ್ಣ ಖರ್ಗೆ ರೀತಿ ನಿಮ್ಮಂತಹ ಪ್ರಬುದ್ದರು ಮಾತನಾಡುವುದು ಸರಿಯಲ್ಲ ಎಂದರು. ನಿಜವಾದ ಭಯೋತ್ಪಾದಕರನ್ನು ಸನ್ಮಾನ ಮಾಡುತ್ತಾರೆ ಕಾಂಗ್ರೆಸ್ ನವರು ಇವರನ್ನು ಏನೆಂದು ಕರೆಯಬೇಕು ಎಂದು ಪ್ರಶ್ನಿಸಿದರು.ಮೇ.9 ಚಿತ್ರದುರ್ಗದಲ್ಲಿ ಮಾಜಿ ಮುಖ್ಯ ಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಸನ್ಮಾನಿಸಿ ಗೌರವಿಸುವ ಸಮಾವೇಶವನ್ನು ಪಕ್ಷ ಸಂಘಟನೆಗೆ ಒಗ್ಗಟ್ಟು ಪ್ರದರ್ಶಿಸಲು ಸಿದ್ದತೆ ನಡೆಸಿದೆ. ಈ ಸಮಾವೇಶಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಬರಲಿದ್ದಾರೆ. ಹತ್ತು ಲಕ್ಷ ಸೇರುವ ಸಾಧ್ಯತೆ ಇದೆಂದರು.

## ಭೂ ಒತ್ತುವರಿ ಪಟ್ಟಿ ಬಿಡುಗಡೆ ಮಾಡುವೆ

“ರಾಜಕಾರಣಿಗಳು, ಬಡವರು ನಗರದಲ್ಲಿ ಸರ್ಕಾರಿ ಜಮೀನು ಒತ್ತುವರಿ ಮಾಡಿರುವ ಬಗ್ಗೆ ಮುಂದಿನವಾರ ಪಟ್ಟಿ ಬಿಡುಗಡೆ ಮಾಡುವೆ. ಒತ್ತುವರಿ ಮಾಡಿದ ಜಮೀನು ಎಲ್ಲ ತೆರವಿಗೆ ವಿರೋದವಿಲ್ಲ. ಆದರೆ ಕಳೆದ ನಾಲ್ಕೈದು ತಲೆ ಮಾರಿನಿಂದ ವಾಸ ಮಾಡಿರುವವರಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕಿತ್ತು ಎಂದಿದ್ದಾರೆ. ನಲ್ಲ ಚರುವು ಪ್ರದೇಶದ ಇಟ್ಟಿಗೆ ಬಟ್ಟಿ ಬಳಿ ಒಬ್ಬೊಬ್ಬ ರಾಜಕಾರಣಿ ಒಂದೊಂದು ಎಕರೆ ಹಾಕಿಕೊಂಡಿದ್ದಾರೆ ಅದನ್ನು ಸಹ ತೆರವುಗೊಳಿಸಬೇಕು ಎಂದರು.

# ಮೂರ್ನಾಲ್ಕು ತಿಂಗಳಲ್ಲಿ ರಾಜ್ಯದ ರಾಜಕೀಯದಲ್ಲಿ ಬದಲಾವಣೆ: ಈಶ್ವರಪ್ಪ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಮುಖ್ಯ ಮಂತ್ರಿ ಸಿದ್ದರಾಮಯ್ಯ ಬೆಂಬಲಿಗರು ಒಂದು ಕಡೆ ಸೇರಿ ಸಭೆ ಮಾಡುತ್ತಿದ್ದಾರೆ. ಸಿಎಂ ಮತ್ತು ಡಿಸಿಎಂ ಗುಂಪು ಮಿತಿಮೀರಿ ಶಿಸ್ತು ಮೀರಿ ನಡೆದುಕೊಳ್ಳುತ್ತಿದ್ದಾರೆ. ಬರುವ ಮೂರ್ನಾಲ್ಕು ತಿಂಗಳಲ್ಲಿ ರಾಜ್ಯದ ರಾಜಕಾರಣ ಬಹಳಷ್ಟು ಬದಲಾವಣೆ ಆಗಲಿದೆ ಎಂದು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ

ನಗರದ ಅತಿಥಿ ಗೃಹದಲ್ಲಿಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು. ದಾವಣಗೆರೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ನ ಅನೇಕ ಮುಸ್ಲೀಂ ನಾಯಕರು ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದಾರೆಂದು ಪಕ್ಷದಿಂದ ಹೊರ ಹಾಕಿದ್ದಾರೆ. ಅದಕ್ಕೆ ಮುಸ್ಲಿ ಗುರುಗಳು ಅದನ್ನು ವಿರೋಧಿಸಿ ಎಚ್ಚರಿಕೆ ನೀಡಿದ್ದಾರೆ. ಇದನ್ನು ಪಕ್ಷದ ಮುಖಂಡರಾರು ಖಂಡಿಸಿಲ್ಲ. ಮುಸ್ಲೀಂರು ಯುಪಿ ಸೇರಿದಂತೆ ಹಲವು ರಾಜ್ಯಗಳಲ್ಲಿ ಬೇರೆ ಪಕ್ಷ ಬೆಂಬಲಿಸಿದ್ದಾರೆ. ಈಗ ನಡೆದಿರುವ ರಾಜ್ಯಗಳ ಚುನಾವಣೆ ಫಲಿತಾಂಶದಿಂದ ಕಾಂಗ್ರೆಸ್ ಅವಸಾನದ ದಿಕ್ಕಿನಲ್ಲಿ ಸಾಗಲಿದೆಂದರು.

ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಗಳು ಹಾಸ್ಯಾಸ್ಪದವಾಗಿವೆ. ಅವರು ದೇಶದ ಕ್ಷಮೆ ಕೇಳಬೇಕು ಎಂದ ಅವರು, ಮಹಿಳಾ ಮೀಸಲಾತಿ ಜಾರಿಗೆ ಕಾಂಗ್ರೆಸ್ ವಿರೋಧ ಮಾಡಿದ್ದು ಮಹಿಳೆಯರಿಗೆ ಮಾಡಿದ ಅಪಮಾನ ಎಂದರು. ಹಿಂದುತ್ವಕ್ಕೆ ಬಿಜೆಪಿಯಲ್ಲಿ ಬೆಲೆ ಇಲ್ಲ. ಜಾತಿ ರಾಜ ಕಾರಣಕ್ಕೆ ಬೆಲೆ ಇರುವ ಕಾರಣ ಶುದ್ದೀಕರಣ ಆಗಲಿ ಎಂದ ಅವರು ಶುದ್ದೀಕರಣ ಆಗುತ್ತೆ ಎಂಬ ನಂಬಿಕೆ ಇದೆಂದರು. ಯಡಿಯೂರಪ್ಪ ಅವರಿಗೆ ಚಿತ್ರದುರ್ಗದಲ್ಲಿ ಸನ್ಮಾನ ಸಮಾವೇಶಕ್ಕೆ ಕರೆದರೆ ಸ್ನೇಹಿತರ ಜೊತೆ ಚರ್ಚಿಸಿ ತೀರ್ಮಾನಿಸುವೆ ಎಂದರು.

# ಉಚಿತ ಮುಂಜಿ ಕಾರ್ಯ ಬಡವರ ಪಾಲಿಗೆ ವರದಾನ: ರಸೂಲ್



• ಮಲ್ಲಮ್ಮ ನುಡಿ ವಾರ್ತೆ, ಮುದಗಲ್ಲ

ಉಚಿತ ಮುಂಜಿ ಕಾರ್ಯ ಬಡ ಮುಸ್ಲಿಂ ಸಮುದಾಯದವರ ಪಾಲಿಗೆ ಶ್ರೇಷ್ಠವರದಾನವಾಗಿವೆ ಎಂದು ಪುರಸಭೆ ಮಾಜಿ ಸದಸ್ಯ ಎಸ್ ಆರ್ ರಸೂಲ್ ಹೇಳಿದರು.

ಪಟ್ಟಣದ ಕಿಲ್ಲಾದಲ್ಲಿ ಕಲ್ಯಾಣ ಕರ್ನಾಟಕ ದರ್ವೆಸು ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗ ಕ್ಷೇಮಾಭಿವೃದ್ಧಿ

ಸಂಘ ಹಮ್ಮಿಕೊಂಡಿದ್ದ 2ನೇ ವಷ9ದ ಸಾಮೂಹಿಕ ಉಚಿತ ಮುಂಜಿ(ಖತ್ನಾ) ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಇಂತಹ ಸಂಘಗಳು

ಈ ರೀತಿಯ ಸಾಮಾಜಿಕ ಚಟುವಟಿಕೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹಮ್ಮಿಕೊಳ್ಳುವ ಮೂಲಕ ಸರಕಾರದೊಂದಿಗೆ ಬಡ ಜನರ ಶ್ರೆ[illegible]ಯಸ್ಸಿಗೆ ಶ್ರಮಿಸಬೇಕು. ಸಂಘದ ವತಿಯಿಂದ ನಿರಂತರವಾಗಿ ಸಾಮಾಜಿಕ ಕಾಯ9ಕ್ರಮ ನಡೆಸಿಕೊಂಡು

ಬರುತ್ತಿರುವದು ಮನುಕುಲದ ಮೆಚ್ಚುಗೆ ಕಾರ್ಯವಾಗಿದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ನುರಿತ ವೈದ್ಯರಿಂದ 250 ಕ್ಕೂ ಹೆಚ್ಚು ಮಕ್ಕಳು ಶಿಬಿರದ ಪ್ರಯೋಜನ ಪಡೆದರು. ಧರ್ಮ ಗುರು ಜಮೀರ ಅಹ್ಮದ ಖಾಜಿ,

ಪುರಸಭೆ ಸದಸ್ಯ ಅಮೀರಬೇಗ್ ಉಸ್ತಾದ, ಪತ್ರಕರ್ತ ರಾಘವೇಂದ್ರ ಜಿ. ಜಿಲ್ಲಾಧ್ಯಕ್ಷ ರಹಿಂಶಾ ಮಕಾನ್‌ದಾರ, ಕಾರ್ಯದರ್ಶಿ ಮೋಹಿನುದ್ದೀನ್ ಭಂಡಾರಿ ಸೇರಿದಂತೆ ಇತರರಿದ್ದರು.

# ಸೇವೆ ಕಲಿಕೆಗೆ ಎನ್‌ಎಸ್‌ಎಸ್ ಸಾಧನ



• ಮಲ್ಲಮ್ಮ ನುಡಿ ವಾರ್ತೆ, ಗಂಗಾವತಿ

ಮನುಷ್ಯನ ಜೀವನ ಜೀವನವು ಸಾರ್ಥಕಗೊಳ್ಳಬೇಕಾದ ಸಂಗತಿಗಳಲ್ಲಿ ಸೇವೆಯೂ ಒಂದಾಗಿದೆ. ಸೇವೆಯಿಂದ ಜೀವನ ಅರ್ಥ ಪಡೆದುಕೊಳ್ಳುತ್ತದೆ. ಹಾಗಾಗಿ ಬದುಕಿನಲ್ಲಿ ಸೇವೆಯ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎನ್ನುವುದು ಮಹಾತ್ಮಗಾಂಧಿಯವರ ಆಶಯವಾಗಿತ್ತು. ಈ ಆಶಯವನ್ನು ಯುವಜನರ ಮನಸ್ಸಿನಲ್ಲಿ ಬಿತ್ತಬೇಕೆಂಬ ಉದ್ದೇಶದಿಂದ ಕೇಂದ್ರ ಸರಕಾರವು ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯನ್ನು ಪ್ರಾರಂಭಿಸಿತು ಎಂದು ನಿವೃತ್ತ ಪ್ರಾಂಶುಪಾಲ ಹಾಗೂ ಗುಲ್ಬರ್ಗಾ ವಿಶ್ವವಿದ್ಯಾಲಯದ ಹಿಂದಿನ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜಕರಾದ ಡಾ. ಬಿ.ಸಿ. ಐಗೋಳ್ ರವರು ತಿಳಿಸಿದರು.

ಅವರು ಇಂದು ಗಂಗಾವತಿಯ ಶ್ರೀ ಕೊಟ್ಟೂರೇಶ್ವರ ವಿದ್ಯಾವರ್ಧಕ ಸಂಘದ ಕಲ್ಮಠ ಶ್ರೀ ಚನ್ನಬಸವಸ್ವಾಮಿ ಮಹಿಳಾ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಘಟಕಗಳ 2025–26 ನೇ ಸಾಲಿನ ವಿಶೇಷ ವಾರ್ಷಿಕ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಅವರು

ಮುಂದುವರೆದು ಮಾತನಾಡುತ್ತಾ ಸೇವೆಯ ಬಗ್ಗೆ ಕಲಿಯಲು ಎನ್‌ಎಸ್‌ಎಸ್ ಒಂದು ಉತ್ತಮ ಯೋಜನೆಯಾಗಿದೆ.

ಇದರ ಲಾಭವನ್ನು ವಿದ್ಯಾರ್ಥಿನಿಯರು ಕಲಿಯಬೇಕೆಂದು ಕರೆನೀಡಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ

ಉಪಾಧ್ಯಕ್ಷರಾದ ಕೆ. ಚನ್ನಬಸಯ್ಯಸ್ವಾಮಿಯವರು ಮಾತನಾಡುತ್ತ ಶಿಬಿರದಲ್ಲಿ ನಡೆಯುವ ವಿವಿಧ

ಸಂಪನ್ಮೂಲ ವ್ಯಕ್ತಿಗಳ ತರಬೇತಿಯನ್ನು ಆಸಕ್ತಿಯಿಂದ ಪಡೆಯಬೇಕೆಂದು ಮತ್ತು ಶ್ರಮದಾನದ ಮೂಲಕ ನಮ್ಮ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದರು. ಪ್ರಾಚಾರ್ಯ ಡಾ. ಶರಣಬಸಪ್ಪ ಕೋಲ್ಕಾರ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಕಾಲೇಜಿನಲ್ಲಿ ನಡೆದುಬಂದ ಎನ್‌ಎಸ್‌ಎಸ್ ಶಿಬಿರಗಳ ಸಾರ್ಥಕತೆಯ ಬಗ್ಗೆ ತಿಳಿಸಿದರು.

ಉಪಪ್ರಾಚಾರ್ಯ ಡಾ. ಕೆ.ಎಂ .ಬಸವರಾಜ್ ಸ್ವಾಗತಿಸಿದರು. ಎನ್‌ಎಸ್‌ಎಸ್

ಕಾರ್ಯಕ್ರಮ ಅಧಿಕಾರಿಗಳಾದ ಡಾ. ಸುರೇಶಗೌಡ, ಡಾ. ಬಸಮ್ಮ ಶಿಗ್ಗಾವಿ , ಉಪನ್ಯಾಸಕರಾದ ಪ್ರೊ. ಜಿ. ಬಸವರಾಜ್, ಡಾ. ಶಾರದಾ ಪಾಟೀಲ್, ಡಾ. ಜರೀನಾ, ಶಿವಮ್ಮ, ಶಾಂತಮ್ಮ, ವಿಜಯಲಕ್ಷ್ಮಿ, ರಷ್ಮೀ, ಹನುಮಂತ,

ಮೆಹಕ್‌ಸಾನಿಯಾ, ಶಂಕರನಾಗ್, ಸತೀಶ್, ನಿಮಿಷಾ ಮುಂತಾದವರು ಉಪಸ್ಥಿತರಿದ್ದರು

# ಎಸ್‌ಎಸ್‌ಎಲ್‌ಸಿ ಉತ್ತಮ ಫಲಿತಾಂಶ

• ಮಲ್ಲಮ್ಮ ನುಡಿ ವಾರ್ತೆ, ಬಸವನಬಾಗೇವಾಡಿ

ಪಟ್ಟಣದ ಶ್ರೀ ಶರಣಬಸವೇಶ್ವರ ಪ್ರೌಢಶಾಲೆಯ ಈ ಬಾರಿ ಎಸ್ ಎಸ್ ಎಲ್ ಸಿ ಪರೀಕ್ಷೆಯ ಫಲಿತಾಂಶ ಶೇಕಡ 98 ರಷ್ಟು ಆಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಶಿವನಗೌಡ ದೇಸಾಯಿ ತಿಳಿಸಿದ್ದಾರೆ.

# ನಂದಿ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಫಲಿತಾಂಶ

• ಮಲ್ಲಮ್ಮ ನುಡಿ ವಾರ್ತೆ, ಬಸವನಬಾಗೇವಾಡಿ



ಪಟ್ಟಣದ ಶ್ರೀ ನಂದಿ ಪ್ರೌಢಶಾಲೆಯ ಈ ಬಾರಿ ಎಸ್ ಎಸ್ ಎಲ್ ಸಿ ಪರೀಕ್ಷೆಯ ಫಲಿತಾಂಶ ಶೇಕಡ 99 ರಷ್ಟು ಆಗಿದೆ. 3 ಡಿಸ್ಟಿಂಕ್ಷನ್, 23 ಪ್ರಥಮ ದರ್ಜೆ, 8 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ ಒಟ್ಟು 38 ವಿದ್ಯಾರ್ಥಿಗಳಲ್ಲಿ 37 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಶಾಲೆ ವಿಧ್ಯಾರ್ಥಿನಿ ರೇಖಾ ಚೌಹಾಣ್ ಹಿಂದಿ ವಿಷಯದಲ್ಲಿ ನೂರಕ್ಕೆ ನೂರು ಅಂಕ ಗಳಿಸಿ ಸಂಸ್ಥೆಗೆ ಕೀರ್ತಿ ತಂದಿದ್ದಾಳೆ ಎಂದು ಸಂಸ್ಥೆಯ ಅಧ್ಯಕ್ಷ ಬಸವರಾಜ್ ಪೂಜಾರಿ ಗುರುಮಾತೆ ವೀಣಾ ಬಿ ಪೂಜಾರಿ ತಿಳಿಸಿದ್ದಾರೆ

# ಕಾಲುಬಾಯಿ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ



• ಮಲ್ಲಮ್ಮ ನುಡಿ ವಾರ್ತೆ, ಬಸವನಬಾಗೇವಾಡಿ

ರಾಷ್ಟ್ರೀಯ ಪ್ರಾಣಿ ರೋಗ ನಿಯಂತ್ರಣ ಕಾರ್ಯಕ್ರಮ ಅಡಿಯಲ್ಲಿ 9ನೇ ಸುತ್ತಿನ ಕಾಲುಬಾಯಿ ಜ್ವರ ಲಸಿಕಾ ಕಾರ್ಯಕ್ರಮಕ್ಕೆ ಪಟ್ಟಣದಲ್ಲಿ ಗುರುವಾರ ಚಾಲನೆ ನೀಡಲಾಯಿತು.

ತಾಪಂ ಇಓ ವೆಂಕಟೇಶ ವಂದಾಲ ಗೋ ಪೂಜೆ ಸಲ್ಲಿಸಿ, ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ತಾಲೂಕಿನ ರೈತಾಪಿ ಜನರು ತಮ್ಮ ದನಕರುಗಳ ಆರೋಗ್ಯ ರಕ್ಷಣೆಗೆ ಮುಂದಾಗಬೇಕು ಎಂದರು. ಪಶು ಪಾಲನೆ ಇಲಾಖೆಯ ಮುಖ್ಯ ಪಶು ವೈದ್ಯಾಧಿಕಾರಿ ಡಾ. ಪಂಚಾಕ್ಷರಿ ಎಸ್ ಸಂಖ ಮಾತನಾಡಿ, ತಾಲೂಕಿನಲ್ಲಿ ಏ.23 ರಿಂದ ಮೇ 22 ವರೆಗೆ ಕಾಲುಬಾಯಿ ಜ್ವರ ರೋಗದ ವಿರುದ್ಧ ಲಸಿಕೆ ಹಾಕಿಸಲು 8 ತಂಡಗಳನ್ನು ರಚಿಸಲಾಗಿದೆ. ತಾಲೂಕಿನಲ್ಲಿ 11086 ದನಗಳು, 7848 ಎಮ್ಮೆಗಳು ಸೇರಿ ಒಟ್ಟು 18934 ಜಾನುವಾರುಗಳು ನೋಂದಣಿ ಆಗಿರುತ್ತವೆ. ಜಾನುವರುಗಳಿಗೆ ವರ್ಷದಲ್ಲಿ ಎರಡು ಬಾರಿ ಪ್ರತಿ ಗ್ರಾಮದ ಮನೆ ಮನೆಗೂ ತೆರಳಿ ರಾಸುಗಳಿಗೆ ಲಸಿಕೆ ಹಾಕಲಾಗುತ್ತದೆ. ತಾಲೂಕಿನಲ್ಲಿ ಒಟ್ಟು 35 ಜನ ಸಿಬ್ಬಂದಿಗಳನ್ನು ಲಸಿಕೆಗೆ ನೇಮಿಸಲಾಗಿದ್ದು. 209ಬ್ಲಾಕ್ ಗಳಿದ್ದು, ಪ್ರತಿ ಬ್ಲಾಕಿಗೆ 85–100 ಜಾನುವಾರುಗಳಿದ್ದು. ಅವುಗಳಿಗೆಲ್ಲಾ ಉಚಿತವಾಗಿ ಲಸಿಕೆಯನ್ನು ಹಾಕಲಾಗುವುದು. ಒಂದು ವೇಳೆ ಲಸಿಕೆ ವಿತರಿಕ್ತ ಪರಿಣಾಮ ಉಂಟಾದರೆ ಅದಕ್ಕೆ ಸೂಕ್ತ ಚಿಕಿತ್ಸೆ ನೀಡುವ ಔಷಧಗಳನ್ನು ಸಂಬಂಧಿಸಿದ ಲಸಿಕಾ ತಂಡದ ಮುಖ್ಯಸ್ಥರಿಗೆ ನೀಡಲಾಗಿದೆ. ತಾಲೂಕಿನ ಎಲ್ಲ ರೈತರು ತಮ್ಮ ದನ ಕರುಳಿಗೆ ತಪ್ಪದೇ ಲಸಿಕೆ ಹಾಕಿಸಿಕೊಳ್ಳುವಂತೆ ವಿನಂತಿಸಿದರು. ಈ ಸಂದರ್ಭದಲ್ಲಿ ಡಾ ಬಸವರಾಜ ಕನಮಡಿ, ಡಾ. ರೇವಣಸಿದ್ಧ ದೇಗಿನಾಳ, ಡಾ. ಎಸ್ ಎನ್ ಹಾದಿಮನಿ, ಆರ್ ಆರ್ ಎಸ್ ಹಿರೇಮಠ, ಎಂ ಬಿ ಗಣಿ, ಕೆ. ಎ ಚಪ್ಪರಬಂದ, ಸರೋಜಿನಿ ಗೋನಾಳ ಸೇರಿದಂತೆ ಸಿಬ್ಬಂದಿಗಳು ಹಾಜರಿದ್ದರು.

# ಬಸವ ಜನ್ಮ ಭೂಮಿಯಲ್ಲಿ ಅನುಗ್ರಹ ಪ್ರಾಥಮಿಕ ದೃಷ್ಟಿ ತಪಾಸಣಾ ಕೇಂದ್ರ ಆರಂಭ



• ಮಲ್ಲಮ್ಮ ನುಡಿ ವಾರ್ತೆ, ಬಸವನಬಾಗೇವಾಡಿ

ಜಿಲ್ಲೆಯದ್ಯಾಂತ ಅನೇಕ ಬಡವರ ನೇತ್ರ ತಪಾಸಣೆ ಹಾಗೂ ಶಸ್ತ್ರಚಿಕಿತ್ಸೆಗೆ ಹೆಸರುವಾಸಿಯಾಗುವುದರ ಮೂಲಕ ಬಡವರ ವೈದ್ಯ ಎಂದೇನಿಸಿಕೊಂಡ ದೇವರಹಿಪ್ಪರಗಿ ಮತಕ್ಷೇತ್ರದ ಚಬನೂರು ಗ್ರಾಮದ ಡಾ. ಪ್ರಭುಗೌಡ ಬಿಎಲ್ ಅವರ ಅನುಗ್ರಹ ಪ್ರಾಥಮಿಕ ದೃಷ್ಟಿ ತಪಾಸಣಾ ಕೇಂದ್ರವು ಪಟ್ಟಣದಲ್ಲಿ ಅಗರವಾಲ ಮೆಗಾ ಮಾರುಕಟ್ಟೆ ಸಂಕೀರ್ಣದಲ್ಲಿ ಗುರುವಾರ ಬೆಳಿಗ್ಗೆ ಪೂಜೆ ಮಾಡುವುದರ ಮೂಲಕ ಚಾಲನೆ ನೀಡಲಾಯಿತು.

ಪಟ್ಟಣದ ಸಿದ್ದಲಿಂಗ ಸ್ವಾಮೀಜಿ, ಶಿವಪ್ರಕಾಶ ಸ್ವಾಮೀಜಿ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಡಾ. ಪ್ರಭುಗೌಡ ಬಿ ಎಲ್, ಮುಖಂಡರಾದ ಈರಣ್ಣ. ಚ. ಪಟ್ಟಣಶೆಟ್ಟಿ, ಅನಿಲ ಅಗರವಾಲ, ಎಂಜಿ ಆದಿಗೊಂಡ, ಸುರೇಶ ಹಾರಿವಾಳ, ಶಂಕರಗೌಡ ಬಿರಾದಾರ, ವಿನೂತ ಕಲ್ಲೂರ ದೇಸಾಯಿ, ಕೇಂದ್ರದ ಸಿಬ್ಬಂದಿಗಳಾದ ದತ್ತಾತ್ರೇಯ ಹೊಸಮಠ, ಆನಂದ ಪಾಟೀಲ, ಚಂದ್ರಶೇಖರ ರೊಡಗಿ, ಜುವೇದ ನದಾಫ್, ಸೌಮ್ಯ ಕೋಟ್ರಶೆಟ್ಟಿ, ಅವಿನಾಶ ಹೂಗಾರ, ಮಹಾಂತೇಶ ಹುಜರತಿ, ಸುರೇಶ ಪೇಟಕರ ಸೇರಿದಂತೆ ಅನೇಕರು ಹಾಜರಿದ್ದರು.

# ಕಲಬುರಗಿ ಸರ್ಕಾರಿ ಅಂಧ ಬಾಲಕರ ಪ್ರೌಢಶಾಲೆಯಲ್ಲಿ ಪ್ರವೇಶಾತಿ ಪ್ರಾರಂಭ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅಡಿಯಲ್ಲಿ ಕಲಬುರಗಿ ನಗರದಲ್ಲಿ ಸರ್ಕಾರಿ ಅಂಧ ಬಾಲಕರ ಪ್ರೌಢಶಾಲೆ ಕಾರ್ಯನಿರ್ವಹಿಸುತ್ತಿದ್ದು, ಈ ಶಾಲೆಯಲ್ಲಿ 2026-27ನೇ ಸಾಲಿಗೆ 1 ರಿಂದ 10ನೇ ತರಗತಿವರೆಗೆ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದೆ ಎಂದು ಕಲಬುರಗಿ ಸರ್ಕಾರಿ ಅಂಧ ಬಾಲಕರ ಪ್ರೌಢಶಾಲೆಯ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಶಾಲೆಯಲ್ಲಿ 6 ರಿಂದ 18 ವರ್ಷದೊಳಗಿನ ಅಂಧ ಬಾಲಕರು ಪ್ರವೇಶ ಪಡೆಯಬಹುದಾಗಿದೆ. ಶಾಲೆಯಲ್ಲಿ ಪ್ರವೇಶ ಪಡೆದ ಅಂಧ ಬಾಲಕರಿಗೆ ಶಿಕ್ಷಣ, ಸಂಗೀತ, ಕಂಪ್ಯೂಟರ್, ಇತ್ಯಾದಿ ತರಬೇತಿ ಜೋತೆಗೆ ಮಕ್ಕಳಿಗೆ ಉಚಿತ ವಸತಿ, ಊಟ ಮತ್ತು ಸಮವಸ್ತ್ರ ಒದಗಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸ್ಮಿತಾ ಇವರ ಮೊಬೈಲ್ ಸಂಖ್ಯೆ-9986594149, ಸಂಗಮ್ಮ-8792259776, ಜಯಶ್ರೀ-9591037444, ಮಹ್ಮದ ಖಾಜಾ-9611221259, ಫಾಳೇಪ್ಪ-8088224622, ಶ್ರೀಕಾಂತ-9972620297, ಪ್ರಕಾಶ ಭಜಂತ್ರಿ-9686363287, ಜಗದೀಶ್ ನಾಯ್ಕ್-8088893731 ಹಾಗೂ ಶಾಂತಪ್ಪ-9632028955 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

# ಎಫ್.ಪಿ.ಓ ನವೋದ್ಯಮಗಳ ಸಮಾವೇಶ ಮುಂದೂಡಿಕೆ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಬೆಂಗಳೂರು ಬಯೋ ಇನ್ನೋವೇಷನ್ ಕೇಂದ್ರವು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಕೃಷಿ ಇಲಾಖೆ, ನಬಾರ್ಡ್ ಹಾಗೂ ಕೆ-ಟೆಕ್ ಸಹಯೋಗದೊಂದಿಗೆ ಇದೇ ಏಪ್ರಿಲ್ 24 ರಂದು ಬೆಳಿಗ್ಗೆ 10 ಗಂಟೆಗೆ ಕಲಬುರಗಿ ನಗರದ ಜೆಸ್ಟ್ ಕ್ಲಬ್ ನಲ್ಲಿ ಆಯೋಜಿಸಿದ ರೈತ ಉತ್ಪಾದಕ ಸಂಸ್ಥೆಗಳು (ಈಕಔಗಳು) ಮತ್ತು ನವೋದ್ಯಮಗಳ ಸಮಾವೇಶ - 2026 ಕಾರ್ಯಕ್ರಮ ಮುಂದೂಡಲಾಗಿದೆ.

ಅದೇ ದಿನದಂದು ವಿಶೇಷ ಸಂಪುಟ ಸಭೆ ನಿಗದಿಯಾಗಿರುವ ಕಾರಣ ಸಮಾವೇಶ ಮುಂದೂಡಲಾಗಿದೆ. ಮುಂದಿನ ದಿನಾಂಕ ನಂತರ ತಿಳಿಸಲಾಗುವುದೆಂದು ಬೆಂಗಳೂರು ಬಯೋ ಇನ್ನೋವೇಷನ್ಸ್ ಸೆಂಟರ್ ವ್ಯವಸ್ಥಾಪಕ ನಿರ್ದೇಶಕ ಡಾ.ಮೊಹಮ್ಮದ ಆದಿಲ್ ಎ.ಎ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೇವೂರ ಹೈಸ್ಕೂಲ್‌ಗೆ ದಿವ್ಯಾ ಪ್ರಥಮ



• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ತಾಲೂಕಿನ ಬೇವೂರಿನ ಆದರ್ಶ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿನಿ ದಿವ್ಯಾ ಪಂತರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರತಿಶತ 95.2 ಅಂಕ ಗಳಿಸಿ ಶಾಲೆಗೆ ಪ್ರಥಮಳಾಗಿದ್ದಾಳೆ.

ಶಾಲೆಯ ಒಟ್ಟು ಫಲಿತಾಂಶ ಪ್ರತಿಶತ 95.68 ರಷ್ಟಾಗಿದ್ದು, ಪ್ರತಿಶತ 93.6 ಅಂಕ ಗಳಿಸಿ ಸಂಜನಾ ಕಾವಳ್ಳಿ ಶಾಲೆಗೆ ದ್ವಿತೀಯ ಹಾಗೂ ಪ್ರತಿಶತ 92.32 ಅಂಕ ಪಡೆದ ಸೌಭಾಗ್ಯಾ ತಳವಾರ ತೃತೀಯ ಸ್ಥಾನ ಪಡೆದಿದ್ದಾರೆ.

116 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಅದರಲ್ಲಿ 9 ವಿದ್ಯಾರ್ಥಿಗಳು ಪ್ರಶಸ್ತಿ ಸಹಿತ ಪ್ರಥಮ ಸ್ಥಾನ, 61 ಪ್ರಥಮ ಸ್ಥಾನ, 23 ದ್ವಿತೀಯ ಹಾಗೂ 18 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಪಾಸಾಗಿ ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ ಜಿ.ಜಿ.ಮಾಗನೂರ, ಉಪಾಧ್ಯಕ್ಷ ರತನಕುಮಾರ ವೈಜಾಪೂರ, ಪ್ರಾಚಾರ್ಯ ಜೆ.ಕೆ.ಮಲ್ಲಾಪೂರ ಮತ್ತು ಮುಖ್ಯಗುರು ಯೋಗೇಶ ಲಮಾಣಿ ತಿಳಿಸಿದ್ದಾರೆ.

# ಶ್ರೀ ಖಾಸ್ಗತೇಶ್ವರ ಶಾಲೆಗೆ ಉತ್ತಮ ಫಲಿತಾಂಶ

“ ನಮ್ಮ ಪತ್ರಿಕೆಯೊಂದಿಗೆ ಮಾತನಾಡಿದ ವಿಜಯಕುಮಾರ ದೇಸಾಯಿ ಅವರು, “ವಿದ್ಯಾರ್ಥಿಗಳು ಈ ಬಾರಿ ಅದ್ಭುತ ಸಾಧನೆ ಮಾಡಿದ್ದಾರೆ. ಮುಂದಿನ ದಿನಗಳಲ್ಲೂ ಇದೇ ರೀತಿಯ ಶ್ರಮ ಮತ್ತು ಉತ್ತಮ ಅಭ್ಯಾಸವನ್ನು ಮುಂದುವರಿಸಿ ತಮ್ಮ ತಂದೆ ತಾಯಿ ಹಾಗೂ ಶಾಲೆಯ ಕೀರ್ತಿಯನ್ನು ಹೆಚ್ಚಿಸಬೇಕು,” ಎಂದು ತಿಳಿಸಿದರು. ಸಾಧನೆ ಮಾಡಿದ ಎಲ್ಲಾ ವಿದ್ಯಾರ್ಥಿಗಳಿಗೆ ಅವರು ಹೃತ್ಪೂರ್ವಕ ಶುಭಾಶಯಗಳನ್ನು ತಿಳಿಸಿದ್ದಾರೆ.

• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಪಟ್ಟಣದ ಕಕ್ಕರಾ ಕ್ರಾಸ್ ಸಮೀಪದ ಶ್ರೀ ಖಾಸ್ಗತೇಶ್ವರ ಆಂಗ್ಲ ಮಾಧ್ಯಮ ಪ್ರೌಢಶಾಲೆ ಈ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಶತಪ್ರತಿಶತ ಫಲಿತಾಂಶ ದಾಖಲಿಸಿ ಗಮನ ಸೆಳೆದಿದೆ.

ಪರೀಕ್ಷೆಗೆ ಹಾಜರಾದ ಒಟ್ಟು 47 ವಿದ್ಯಾರ್ಥಿಗಳೂ ಉತ್ತೀರ್ಣರಾಗಿದ್ದು, 29 ಮಂದಿ ಉನ್ನತ ದರ್ಜೆ, 15 ಮಂದಿ ಪ್ರಥಮ ದರ್ಜೆ ಹಾಗೂ 3 ಮಂದಿ ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದಾರೆ.

ಶಾಲೆಯ ಸಾಧನೆಯಲ್ಲಿ ಕುಮಾರಿ ರಾಜೇಶ್ವರಿ ರಾಠೋಡ್ ಅವರು 625ರಲ್ಲಿ 619 ಅಂಕಗಳನ್ನು (99.04%) ಗಳಿಸಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಅವರು ಯಾದಗಿರಿ ಜಿಲ್ಲೆಯಲ್ಲಿ 4ನೇ ರ್‍ಯಾಂಕ್ ಹಾಗೂ ಹುಣಸಗಿ ತಾಲ್ಲೂಕಿನಲ್ಲಿ ಪ್ರಥಮ ರ್‍ಯಾಂಕ್ ಗಳಿಸಿ ವಿಶೇಷ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕುಮಾರಿ ನಯನ ಪ್ರಕಾಶ್ ಹಿರೇಮಠ್ ಅವರು 617 ಅಂಕಗಳು (98.72%) ಪಡೆದು ದ್ವಿತೀಯ ಸ್ಥಾನ ಪಡೆದಿದ್ದು, ಕುಮಾರಿ ಕವನ ಈ ದೇಸಾಯಿ ಅವರು 611 ಅಂಕಗಳು (97.76%) ಗಳಿಸಿ ತೃತೀಯ ಸ್ಥಾನ ಪಡೆದಿದ್ದಾರೆ.

ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಮುರಿಗೆಣ್ಣ ದೇಸಾಯಿ, ಆಡಳಿತಾಧಿಕಾರಿ ವಿಜಯಕುಮಾರ ದೇಸಾಯಿ ಹಾಗೂ ಪ್ರಾಚಾರ್ಯರಾದ ರಾಮಣ್ಣ ಹೂಗಾರ ಅವರು ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಅಭಿನಂದಿಸಿದ್ದಾರೆ.

# ಪರೀಕ್ಷಾ ಕೇಂದ್ರಕ್ಕೆ ಡಿಸಿ, ಸಿಇಒ ಭೇಟಿ



• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಬಾಗಲಕೋಟೆ ಮತ್ತು ಜಮಖಂಡಿ ನಗರಗಳಲ್ಲಿ ಗುರುವಾರ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿ.ಪಂ ಸಿಇಓ ಶಶಿಧರ ಕುರೇರ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಜಿಲ್ಲಾಧಿಕಾರಿ ಸಂಗಪ್ಪ ನಗರದ ಎಸ್.ಬಿ.ಪಾಟೀಲ ಕಾಳಿದಾಸ ಶಿಕ್ಷಣ ಸಂಸ್ಥೆಯಲ್ಲಿ ಸ್ಥಾಪಿಸಲಾದ ಕೇಂದ್ರಕ್ಕೆ ಭೇಟಿ ನೀಡಿದರೆ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ನವನಗರದ ಕಾಳಿದಾಸ ಶಿಕ್ಷಣ ಸಂಸ್ಥೆ, ವಿದ್ಯಾಗಿರಿಯಲ್ಲಿರುವ ತುಂಗಳ ಸೈನ್ಸ್ ಕಾಲೇಜ, ಬಾಗಲಕೋಟೆ ನಗರದ ಬಸವೇಶ್ವರ ಆರ್ಟ್ಸ್ ಕಾಲೇಜ ಹಾಗೂ ಸರಕಾರಿ ಹೆಣ್ಣು ಮಕ್ಕಳ ಪದವಿ ಪೂರ್ವ ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪರೀಕ್ಷಾರ್ಥಿಗಳಿಗೆ ಕಲ್ಪಿಸಲಾದ ಮೂಲಭೂತ ಸೌಲಭ್ಯಗಳು, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ, ವಿದ್ಯುತ್ ಪೂರೈಕೆ ಸೇರಿದಂತೆ ಕೇಂದ್ರಗಳಲ್ಲಿ ಕೈಗೊಳ್ಳಲಾದ ಸಿದ್ಧತೆಗಳನ್ನು ಪರಿಶೀಲಿಸಿದರು. ಪರೀಕ್ಷೆಗಳು ಯಾವುದೇ ಅಡಚಣೆ ಇಲ್ಲದೇ ಸುಗಮವಾಗಿ ನಡೆಯುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಪರೀಕ್ಷಾ ಕೇಂದ್ರದ ಸುತ್ತಮುತ್ತ ಭದ್ರತಾ ಕ್ರಮಗಳನ್ನು ಬಿಗಿಗೊಳಿಸಲಾಗಿರುವ ಬಗ್ಗೆ ಮಾಹಿತಿ ಪಡೆದು, ಪರೀಕ್ಷಾರ್ಥಿಗಳಿಗೆ ಯಾವುದೇ ತೊಂದರೆ ಆಗದಂತೆ ಎಲ್ಲ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವಂತೆ ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿ.ಪಂ ಸಿಇಓ ಅವರ ಭೇಟಿ ಸಂದರ್ಭದಲ್ಲಿ ಜಿ.ಪಂ ಉಪ ಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಸುಭಾಷ ಸಂಪಗಾವಿ ಇದ್ದರು.

# ಸಂಭ್ರಮದ ತೆಗ್ಗಿ ಗ್ರಾಮದೇವತೆಗಳ ರಥೋತ್ಸವ

• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಜಿಲ್ಲೆಯ ಗುಳೇದಗುಡ್ಡ ತಾಲೂಕಿನ ತೆಗ್ಗಿ ಗ್ರಾಮದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುವ ಗ್ರಾಮದೇವತೆಗಳಾದ ದ್ಯಾಮವ್ವ ಮತ್ತು ದುರ್ಗಮ್ಮನ ಜಾತ್ರೆ ಸಂಭ್ರಮ ಸಡಗರದಿಂದ ನಡೆಯಿತು.

ಮುಂಜಾನೆ ಗ್ರಾಮದೇವತೆಗಳ ತವರು ಮನೆಯಾದ ಬಡಿಗೇರ ಮನೆತನದವರಿಂದ ಉಡಿ ತುಂಬಿಸಿಕೊಂಡು, ನಂತರ ಒಂಬತ್ತು ಬಾಬದ ಮನೆಯವರು ಹಾಗೂ ಗ್ರಾಮದ ಪ್ರತಿಯೊಂದು ಮನೆತನದವರು ಗ್ರಾಮದೇವತೆಗಳಿಗೆ ಸಂಭ್ರಮ ಸಡಗರ ಹಾಗೂ ಭಕ್ತಿಭಾವದಿಂದ ಉಡಿ ತುಂಬಿದರು.

ಗ್ರಾಮದ ಕುರಿಯವರ ಮನೆಯಿಂದ ರಥದ ಕಳಸವನ್ನು ಹಾಗೂ ಮೇಟಿ ಅವರ ಮನೆಯಿಂದ ರಥದ ಹಗ್ಗವನ್ನು ಡೊಳ್ಳಿನ ವಾದ್ಯಗಳೊಂದಿಗೆ ತಂದು ಗ್ರಾಮದೇವತೆಗಳನ್ನು ರಥದಲ್ಲಿಟ್ಟು ರಥೋತ್ಸವ ನಡೆಸಲಾಯಿತು.

ತೆಗ್ಗಿ, ರಾಘಾಪೂರ, ತಿಮ್ಮಸಾಗರ, ಕೆಲವಡಿ, ನಿಂಗಾಪೂರ, ತೋಗಣಸಿ, ಹಂಸನೂರು, ಹಿರೇಬೂದಿಹಾಳ, ರೈಲ್ವೆ ಸ್ಟೇಶನ್ ಗ್ರಾಮಗಳು ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಭಕ್ತರು ಹಾಗೂ ಗೋವಾ ರಾಜ್ಯದಿಂದ ಬಂದ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

ರಥೋತ್ಸವದ ನಂತರ ಒಂದೊತ್ತು ಇದ್ದ ಗ್ರಾಮದ ಪ್ರತಿಯೊಂದು ಮನೆತನದವರು ಗ್ರಾಮದೇವತೆಗಳ ಹಂದರದಲ್ಲಿ ಉಡಿ ತುಂಬಿಸಿಕೊಂಡು ಪ್ರಸಾದ ಸ್ವೀಕರಿಸಿದರು.



# ಮಹಿಳಾ ಮೀಸಲಾತಿ ಜಾರಿಗೆ ಆಗ್ರಹಿಸಿ ಕಾಂಗ್ರೆಸ್ ಮಹಿಳಾ ಘಟಕದ ಪ್ರತಿಭಟನೆ



• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಕೇಂದ್ರಸರ್ಕಾರ ಮಹಿಳೆಯರಿಗೆ 33% ಮೀಸಲಾತಿ ನೀಡುವ ವಿಚಾರದಲ್ಲಿ ವಿಳಂಬ ಮಾಡುತ್ತಿರುವುದನ್ನು ಖಂಡಿಸಿ, ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ವತಿಯಿಂದ ನಗರದ ಸಂಗಮ್ ಸರ್ಕಲ್ ಬಳಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಭಾಗವಹಿಸಿದ ಮಹಿಳಾ ನಾಯಕಿಯರು ಹಾಗೂ ಕಾರ್ಯಕರ್ತರು, ಮಹಿಳಾ ಮೀಸಲಾತಿ ಮಸೂದೆಯನ್ನು ತಕ್ಷಣ ಜಾರಿಗೆ ತರಬೇಕೆಂದು ಘೋಷಣೆ ಕೂಗಿದರು. ಕೇಂದ್ರ ಸರ್ಕಾರ ಮಹಿಳೆಯರ ರಾಜಕೀಯ ಹಕ್ಕುಗಳನ್ನು ವಿಳಂಬಗೊಳಿಸುತ್ತಿದೆ ಎಂದು ಆರೋಪಿಸಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರರು ಮೂರು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟರು. ಮೊದಲನೆಯದಾಗಿ, ಮಹಿಳಾ ಮೀಸಲಾತಿ ಮಸೂದೆಯನ್ನು ಯಾವುದೇ ಪೂರ್ವಭಾವಿ ಷರತ್ತುಗಳಿಲ್ಲದೆ ತಕ್ಷಣ ಜಾರಿಗೆ ತರಬೇಕು ಎಂದು ಆಗ್ರಹಿಸಿದರು. ಎರಡನೆಯದಾಗಿ,

ಮಹಿಳಾ ಮೀಸಲಾತಿ ಮಸೂದೆಯೊಳಗೆ ಇತರ ಹಿಂದುಳಿದ ವರ್ಗಗಳಿಗೆ (ಔಃಅ) ಉಪ ಮೀಸಲಾತಿಯನ್ನು ಸೇರಿಸಬೇಕು, ಇದರಿಂದ ಸಾಮಾಜಿಕ ನ್ಯಾಯ ಸಾಧಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಮೂರನೆಯದಾಗಿ, 2026ರ ಜಾತಿ ಜನಗಣತಿಯ ನಿಖರ ದತ್ತಾಂಶದ ಆಧಾರದ ಮೇಲೆ ಕ್ಷೇತ್ರಗಳ ಮಿತಿ ನಿರ್ಣಯ ಮಾಡಬೇಕು ಎಂದು ಒತ್ತಾಯಿಸಿದರು. ನಿಖರ ದತ್ತಾಂಶದ ಆಧಾರದಲ್ಲೇ ನ್ಯಾಯಯುತ ಪ್ರಾತಿನಿಧ್ಯ ದೊರೆಯುತ್ತದೆ ಎಂದು ಅಭಿಪ್ರಾಯಪಟ್ಟರು.

ಪ್ರತಿಭಟನೆ ವೇಳೆ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಮಹಿಳೆಯರು, ತಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೆ ಹೋರಾಟ ಮುಂದುವರಿಸುವುದಾಗಿ ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಅಲ್ಲಮ್ ಪ್ರಶಾಂತ್, ವಖ್ಫ್ ಬೋರ್ಡ್ ಚೆರ್ಮನ್ ಹುಮಯೂನ್ ಖಾನ್, ಮಹಿಳಾ ಜಿಲ್ಲಾಧ್ಯಕ್ಷೆ ಎಂ.ಎಸ್ ಮಂಜುಳಾ, ಕಾಂಗ್ರೆಸ್ ಮುಖಂಡರಾದ ಕನೆಕಲ್ ಮಾಬೂಸಾಬ್,

ಎಲ್ ಮಾರೆಣ್ಣಾ, ಮಾನಯ್ಯ, ನಾಗು, ಬಿ.ರುದ್ರಪ್ಪ, ಪರ್ವಿನ್ ಬಾನು, ಯಶೋಧ, ಶಮಿಮ್ ಜಕ್ಲಿ, ಗೌಸಿಯ, ಆಶಾಲತಾ, ಸುನೀತಾ, ಪದ್ಮಾ, ಸೇರಿದಂತೆ ಮಹಿಳಾ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

# ಕೃಷಿ ಇಲಾಖೆಗೆ ರಾಜ್ಯ ಪ್ರಶಸ್ತಿ

• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಪ್ರಸಕ್ತ 2025-26ನೇ ಸಾಲಿನ ವಿಶ್ವಬ್ಯಾಂಕ್ ನೆರವಿನ ರಿವಾರ್ಡ್ ಯೋಜನೆಯ ಸಂಪೂರ್ಣ ಜಲಾನಯನ ಉಪಚಾರ ಘಟಕದ ಅನುಷ್ಠಾನದಲ್ಲಿ ಅತ್ಯುತ್ತಮ ಸಾಧನೆಗಾಗಿ ಬಾಗಲಕೋಟೆ ಜಿಲ್ಲೆಗೆ ಪ್ರಥಮ ಸ್ಥಾನ ಹಾಗೂ ಅರಣ್ಯ ಘಟಕದ ಅನುಷ್ಠಾನದಲ್ಲಿ ಉತ್ತಮ ಸಾಧನೆಗಾಗಿ ದ್ವಿತೀಯ ಸ್ಥಾನ ಪಡೆದುಕೊಂಡಿದೆ.

ಪ್ರಸಕ್ತ 2025-26ನೇ ಸಾಲಿನಲ್ಲಿ ವಿಶ್ವ ಬ್ಯಾಂಕ್ ನೆರವಿನ ಕೃಷಿ ಸುಸ್ಥಿರತೆಗಾಗಿ ನವೀನ ಅಭಿವೃದ್ಧಿ ಮೂಲಕ ಜಲಾನಯನ ಪ್ರದೇಶಗಳನ್ನು ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ರಿವಾರ್ಡ್ ಯೋಜನೆಯಡಿ ಎಪ್ರೀಲ್ 22 ರಂದು ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಅವರು 3ನೇ ರಾಜ್ಯ ಮಟ್ಟದ ವಿವಿಧ ಪಾಲುದಾರರ ವಾರ್ಷಿಕ ಕಾರ್ಯಾಗಾರದಲ್ಲಿ ಬಾಗಲಕೋಟೆ ಕೃಷಿ ಇಲಾಖೆಗೆ ಬಾಗಲಕೋಟೆ ಜಿಲ್ಲೆಗೆ ಪ್ರಥಮ ಸ್ಥಾನ ಹಾಗೂ ಅರಣ್ಯ ಘಟಕದ ಅನುಷ್ಠಾನದಲ್ಲಿ ಅತ್ಯುತ್ತಮ ಸಾಧನೆಗಾಗಿ ದ್ವಿತೀಯ ಸ್ಥಾನದ ಪುರಸ್ಕಾರ ನೀಡಿ ಗೌರವಿಸಿದ್ದಾರೆ.

ಕಾರ್ಯಕ್ರಮದಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯ ಆಯುಕ್ತರು ಹಾಗೂ ನಿರ್ದೇಶಕರು, ರಿವಾರ್ಡ್ ಯೋಜನೆ ಹುನಗುಂದ ತಾಲ್ಲೂಕಿನ ಚಿತ್ತರಗಿ ಉಪ ಜಲಾನಯನದ ಅನುಷ್ಠಾನಕ್ಕಾಗಿ ಉಪ ಕೃಷಿ ನಿರ್ದೇಶಕರು ಜಿಲ್ಲೆಯ ಪರವಾಗಿ ಫಲಕ ಹಾಗೂ ಪ್ರಶಸ್ತಿ ಪತ್ರವನ್ನು ಪಡೆದಿದ್ದಾರೆ.

ರಾಜ್ಯಪ್ರಶಸ್ತಿಗೆ ಬಾಗಲಕೋಟೆ ಜಿಲ್ಲೆ ಆಯ್ಕೆಯಾಗಿರುವದಕ್ಕೆ ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ ಸಂತೋಷ ವ್ಯಕ್ತಪಡಿಸಿ ಈ ಯೋಜನೆಯಡಿ ಕಾರ್ಯ ನಿರ್ವಹಿಸಿದ ಕೃಷಿ ಇಲಾಖೆ ಸಿಬ್ಬಂದಿ ಹಾಗೂ ರಿವಾರ್ಡ್ ಯೋಜನೆಯ ಪ್ರಧಾನ ತನಿಖಾಧಿಕಾರಿಗಳು, ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯ ಅವರಿಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.




# ಸ್ಟೇರಿಂಗ್ ಕಟ್ ಹಳ್ಳಕ್ಕೆ ಉರುಳಿದ ಬಸ್

ಲಿಂಗಸುಗೂರು:ಲಿಂಗಸುಗೂರು ಸಾರಿಗೆ ಘಟಕಕ್ಕೆ ಸೇರಿದ ಬಸೊಂದು ಗುರುವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಹಳ್ಳಕ್ಕೆ ಉರುಳಿದ ಘಟನೆ ಸುಣಕಲ್ ಗ್ರಾಮದ ಸಮೀಪ ನಡೆದಿದೆ. ನಾಲತವಾಡದಿಂದ ಲಿಂಗಸುಗೂರು ಕಡೆಗೆ ಸಂಚರಿಸುತ್ತಿದ್ದ ಬಸ್ ಬೆಳಿಗ್ಗೆ ಸುಮಾರು 8 ಗಂಟೆ ವೇಳೆಗೆ ಚಾಲಕನ ನಿಯಂತ್ರಣ ತಪ್ಪಿ ಹಳ್ಳಕ್ಕೆ ಉರುಳಿದುದಾಗಿ ತಿಳಿದುಬಂದಿದೆ. ಸ್ಟೀರಿಂಗ್ ವ್ಯವಸ್ಥೆಯಲ್ಲಿ ತೊಂದರೆ ಉಂಟಾಗಿ ಅಪಘಾತ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ. ಘಟನೆ ಸಮಯದಲ್ಲಿ ಬಸ್‌ನಲ್ಲಿ ಸುಮಾರು 20ರಿಂದ 25 ಜನ ಪ್ರಯಾಣಿಕರು ಇದ್ದರು. ಅಪಘಾತದಲ್ಲಿ ಚಾಲಕನಿಗೆ ಸ್ವಲ್ಪ ಪೆಟ್ಟು ಬಿದ್ದಿದ್ದು, ಉಳಿದ ಪ್ರಯಾಣಿಕರು ಯಾವುದೇ ಗಂಭೀರ ಗಾಯಗಳಿಲ್ಲದೆ ಪಾರಾಗಿದ್ದಾರೆ. ಬಸ್‌ನಲ್ಲಿ ಚಾಲಕ ಸೇರಿ ಒಟ್ಟು 25 ಮಂದಿ ಇದ್ದರು ಎಂದು ತಿಳಿದು - ಬಂದಿದೆ. ಅಪಘಾತದ ವೇಳೆ ನಿರ್ವಾಹಕ (ಕಂಡಕ್ಟರ್) ಟಿಕೆಟ್ ನೀಡುವ ಬದಲು ಚಾಲಕರೇ ಟಿಕೆಟ್ ನೀಡುತ್ತಿದ್ದರೆ-ಂದು ಹೇಳಲಾಗುತ್ತಿದ್ದು, ಕರ್ತವ್ಯ ನಿರ್ಲಕ್ಷ್ಯವೂ ಕಾರಣವಾಗಿರಬಹುದು'

## ವಿವಿಧ ಕಾಮಗಾರಿಗೆ ಶಾಸಕ ಶೈಲೇಂದ್ರ ಬೆಲ್ದಾಳೆ ಚಾಲನೆ

# ಮಹರ್ಷಿ ವಾಲ್ಮೀಕಿ ಭವನ ನಿರ್ಮಾಣಕ್ಕೆ 30 ಲಕ್ಷ ರೂ.

• ಮಲ್ಲಮ್ಮ ನುಡಿ ವಾರ್ತೆ ಬೀದರ್

ನಮ್ಮ ಕ್ಷೇತ್ರದ ಸಮಗ್ರ ಅಭಿವೃದ್ಧಿಯೇ ನಮ್ಮ ಪ್ರಮುಖ ಉದ್ದೇಶವಾಗಿದೆ. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಆಗಬೇಕಾದರೆ ಮೂಲಭೂತ ಸೌಕರ್ಯಗಳು ಬಲವಾಗಿರಬೇಕು. ಈ ನಿಟ್ಟಿನಲ್ಲಿ ರಸ್ತೆ, ನೀರು, ವಿದ್ಯುತ್, ಸಮುದಾಯ ಭವನ ಸೇರಿದಂತೆ ಅನೇಕ ಕಾಮಗಾರಿಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.




ಬೀದರ್ ದಕ್ಷಿಣ ಕ್ಷೇತ್ರದ ಸಿರ್ಸಿ (ಎ) ಗ್ರಾಮದಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ನನ್ನ ಸೇವೆ ಜನಪರವಾಗಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸಿ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಗ್ರಾಮಗಳ ಅಭಿವೃದ್ಧಿಯಿಂದಲೇ ದೇಶದ ಅಭಿವೃದ್ಧಿ ಸಾಧ್ಯ. ಆದ್ದರಿಂದ ಪ್ರತಿಯೊಂದು ಗ್ರಾಮವೂ ಮಾದರಿ ಗ್ರಾಮವಾಗಬೇಕು ಎಂಬುದು ನನ್ನ ಆಶಯ ಎಂದು ತಿಳಿಸಿದರು.

ಇಂದು ನಮ್ಮ ಕ್ಷೇತ್ರದ ಅಭಿವೃದ್ಧಿಯ ದಿಕ್ಕಿನಲ್ಲಿ ಒಂದು ಮಹತ್ವದ ಹೆಜ್ಜೆಯನ್ನು ಇಡುತ್ತಿರುವ ಸಂತೋಷದ ಕ್ಷಣ ಇದು. ನಮ್ಮ ಗ್ರಾಮ ಮತ್ತು ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಕೈಗೊಳ್ಳುತ್ತಿರುವ ಈ ಯೋಜನೆಗಳು ಜನಜೀವನವನ್ನು ಸುಧಾರಿಸುವುದಕ್ಕೆ ಪ್ರಮುಖವಾದ ಪಾತ್ರ ವಹಿಸಲಿವೆ.

ಅಭಿವೃದ್ಧಿ ಎಂದರೆ ಕೇವಲ ಕಟ್ಟಡಗಳ ನಿರ್ಮಾಣವಲ್ಲ, ಅದು ಜನರ ಬದುಕಿನಲ್ಲಿ ಸುಧಾರಣೆ ತರುವ ಪ್ರಕ್ರಿಯೆ. ಉತ್ತಮ ರಸ್ತೆ, ಕುಡಿಯುವ ನೀರು, ಶಿಕ್ಷಣ, ಆರೋಗ್ಯ ಮತ್ತು ಮೂಲಸೌಕರ್ಯಗಳ ಅಭಿವೃದ್ಧಿ ನಮ್ಮ ಪ್ರಮುಖ ಗುರಿಯಾಗಿದೆ. ಈ ದಿಕ್ಕಿನಲ್ಲಿ ನಾವು ತೆಗೆದುಕೊಳ್ಳುತ್ತಿರುವ ಪ್ರತಿಯೊಂದು ಹೆಜ್ಜೆಯೂ ಜನರ ಭವಿಷ್ಯವನ್ನು ಬಲಪಡಿಸುವುದಕ್ಕೆ ಸಹಕಾರಿಯಾಗುತ್ತದೆ.

ನಾನು ಜನರ ನಂಬಿಕೆಗೆ ತಕ್ಕಂತೆ ಕೆಲಸ ಮಾಡುತ್ತಿದೆ. ಯಾವುದೇ ಕಾಮಗಾರಿಯೂ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೇ, ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವುದು ನಮ್ಮ ಆದ್ಯತೆಯಾಗಿದೆ. ಅಧಿಕಾರಿಗಳು ಮತ್ತು ಗುತ್ತಿಗೆದಾರರು ಸಹ ಇದನ್ನು ಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಬೇಕು ಎಂದರು.

ಬಸವೇಶ್ವರ ದೇವಸ್ಥಾನ ನಿರ್ಮಾಣ ಕಾಮಗಾರಿಗೆ □15 ಲಕ್ಷ, ಮಹರ್ಷಿ ವಾಲ್ಮೀಕಿ ಭವನ ನಿರ್ಮಾಣಕ್ಕೆ □30 ಲಕ್ಷ, ಮೌನೇಶ್ವರ ದೇವಸ್ಥಾನದ ಬಳಿ ಭವನ ನಿರ್ಮಾಣಕ್ಕೆ □5 ಲಕ್ಷ, ರೇವಣಸಿದ್ದೇಶ್ವರ ದೇವಸ್ಥಾನದ ಬಳಿ ಭವನ ನಿರ್ಮಾಣಕ್ಕೆ □5 ಲಕ್ಷ, ಲಿಂಗಾಯತ ಶ್ಮಶಾನ ಭೂಮಿಗೆ ತಂತಿ ಬೇಲಿ ಅಳವಡಿಸಲು □5 ಲಕ್ಷ,

ಗ್ರಾಮದ ವಿವಿಧ ಕಡೆಗಳಲ್ಲಿ (ನಾಲ್ಕು) □12 ಲಕ್ಷ ವೆಚ್ಚದಲ್ಲಿ ಹೈಮಾಸ್ಟ್ ದೀಪಗಳ ಅಳವಡಿಕೆ ಕಾಮಗಾರಿಗೆ ಚಾಲನೆ ನೀಡಲಾಗಿದ್ದು,

ಈ ಎಲ್ಲಾ ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವ ಜವಾಬ್ದಾರಿ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮೇಲಿದೆ. ಸಾರ್ವಜನಿಕರ ಹಿತವನ್ನು ಗಮನದಲ್ಲಿಟ್ಟುಕೊಂಡು ಯಾವುದೇ ತೊಂದರೆಗಳಿಲ್ಲದೆ ಕಾರ್ಯಗಳನ್ನು ಮುನ್ನಡೆಸಬೇಕು ಎಂದು ತಿಳಿಸಿದರು.

ಬಳಿಕ ಗ್ರಾಮದಲ್ಲಿ ಮಲ್ಲಿಕಾರ್ಜುನ ದೇವಸ್ಥಾನದ ಸಮೀಪ ನಮ್ಮ ಅನುದಾನದಲ್ಲಿ ನಿರ್ಮಿಸಲಾದ ಭವನವನ್ನು ಲೋಕಾರ್ಪಣೆ ಮಾಡಲಾಯಿತು. ಕುರುಬಗೊಂಡ ಸಮಾಜದ ಮುಖಂಡರು ಕಂಬಳಿ ಹೊದಿಸಿ ಸನ್ಮಾನಿಸಿ, ಕುರಿ ಮರಿಯನ್ನು ಉಡುಗೊರೆಯಾಗಿ ನೀಡಿ ಆತ್ಮೀಯ ಗೌರವ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮ ಯಶಸ್ವಿಯಾಗಲು ಸಹಕರಿಸಿದ ಎಲ್ಲಾ ಗ್ರಾಮಸ್ಥರಿಗೆ ಹೃತ್ಪೂರ್ವಕ ಧನ್ಯವಾದಗಳು. ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ನಿಮ್ಮ ವಿಶ್ವಾಸಕ್ಕೆ ತಕ್ಕಂತೆ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ರಾಜ ರೆಡ್ಡಿ ಶಾಬಾದ, ಗುರುನಾಥ ರಾಜ-ಗೀರ, ಶಿವಕುಮಾರ ಸ್ವಾಮಿ, ಶಿವಶರಣಪ್ಪ ಆಗರಗಿ, ಕಾಶಿನಾಥ ಅಲ್ದಿ, ಅಡೆಪ್ಪ ಶೇರಿಕಾರ, ಸೋಮನಾಥ ಉಪ್ಪಿನ, ಫಾಳೇಪ್ಪ ಚಟನಳ್ಳಿ, ಪುಂಡಲೀಕ ಟುಬಾಕ, ಸುಭಾಷ ಮೆಟಗೆ, ಭೀಮರಾವ ಬೀರಾದರ, ಬುದಯ್ಯಾ ಆಚಾರಿ, ಸಂಜುಕುಮಾರ ಅಲ್ದಿ, ಇಬ್ರಾಹಿಂ, ರಾಮಕೃಷ್ಣ, ರಾಕೇಶ ಹುಮನಾಬಾದೆ, ವೆಂಕಟರೆಡ್ಡಿ, ಹೇಮಾ ತುಕ್ಕಾರೆಡ್ಡಿ, ಅರುಣಕುಮಾರ ಪಾಟೀಲ, ಶರಣು ಸಿದ್ದಾ, ರಾಜಕುಮಾರ ಮುಲಗಿ, ಮಾರುತಿ ಪೋತಾ, ಸಿದ್ದಪ್ಪ ಗುದಗಿ, ಪ್ರಭು ಮಂದಕನಳ್ಳಿ ಮತ್ತಿತರರು ಉಪಸ್ಥಿತರಿದ್ದರು.

## ನಾಲ್ಕನೇ ವರ್ಷದ ಪುಣ್ಯಸ್ಮರಣೆ



ಜನನ 25-04-1955

ಮರಣ 23-04-2022

**ದಿ|| ಶ್ರೀ ಅಶೋಕ ಮಡಿವಾಳಪ್ಪ. ತಿಳಗೂಳಕರ.**
(ಜಿಲ್ಲಾ ಅಧ್ಯಕ್ಷರು )
ಜಿಲ್ಲಾ ಹಾಲುಮತ (ಕುರುಬ) ಸಮಾಜದ ಹಿರಿಯರ ಸಲಹಾ ಸಮಿತಿ, ವಿಜಯಪುರ

ತಾವು ನಮ್ಮನ್ನಗಲಿ ಇಂದಿಗೆ. ದಿನಾಂಕ **23-04-2026** ಕ್ಕೆ ನಾಲ್ಕು ವರ್ಷವಾಯಿತು. ನಿಮ್ಮನ್ನು ನೆನೆಯದ ದಿನಗಳಿಲ್ಲ. ನಿಮ್ಮ ಸರಳ ಸಜ್ಜನಿಕೆ, ನೇರ ನುಡಿ, ದಿಟ್ಟತನ, ಆದರ್ಶ ಜೀವನ ಹಾಗೂ ಕಾಯಕ ಪ್ರವೃತ್ತಿ ನಮಗೇಲ್ಲ ದಾರಿ ದೀಪವಾಗಿದೆ. ನೀವು ತೋರಿದ ಸನ್ಮಾರ್ಗದಲ್ಲಿಯೇ ನಾವೆಲ್ಲರೂ ಮುನ್ನಡೆಯುತ್ತಿದ್ದೇವೆ. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.

ಧರ್ಮಪತ್ನಿ: **ಶ್ರೀಮತಿ ಸುಚಿತ್ರಾ ಅಶೋಕ. ತಿಳಗೂಳಕರ**

:: ದುಃಖತಪ್ತರು ::

ಮಕ್ಕಳಾದ : **ಶ್ರೀ ಮಯೂರಕುಮಾರ ಅಶೋಕ. ತಿಳಗೂಳಕರ**
ಉಪನ್ಯಾಸಕರು ಮತ್ತು ಸಂಸ್ಥಾಪಕ ಅಧ್ಯಕ್ಷರು,
ವಿದ್ಯಾನಿಧಿ ಯುವಜನ ಹಾಗೂ ಗ್ರಾಮೀಣಾಭಿವೃದ್ಧಿ ಸಂಘ, ವಿಜಯಪುರ

**ಶ್ರೀ ಮಧೂರ ಅಶೋಕ. ತಿಳಗೂಳಕರ**
ಪ್ರಧಾನ ಸಂಪಾದಕರು : ಭ್ರಷ್ಟ ದರ್ಪಣ (ಕನ್ನಡ ರಾಷ್ಟ್ರೀಯ ಪಾಕ್ಷಿಕ ಪತ್ರಿಕೆ)
ಮತ್ತು BD1 ನ್ಯೂಸ್ ಕನ್ನಡ

ಅಪಾರ ತಿಳಗೂಳಕರ ಬಂಧು ಬಳಗ ಹಾಗೂ ಆಪ್ತಮಿತ್ರರು


# ಡೈಮಂಡ್ ಕೀರ್ತಿ ಹೆಚ್ಚಿಸಿದ ಆದರ್ಶ

**ಭಾಲ್ಕಿ:** ಡೈಮಂಡ್ ಗ್ರೂಪ್ ಆಫ್ ಇನ್ಸಿಟ್ಯುಶನ್‌ನ 10ನೇ ತರಗತಿಯ ವಿದ್ಯಾರ್ಥಿಯಾದ ಆದರ್ಶ ನಾಗೇಶ 617/625 (98.72) ಅಂಕ



ಪಡೆದು ರಾಜ್ಯಕ್ಕೆ ಒಂಭತ್ತನೇ ರ‍್ಯಾಂಕ್ ಪಡೆಯುವುದರ ಮೂಲಕ ಜಿಲ್ಲೆಯಲ್ಲಿ ತಾಲೂಕಿನ ಕೀರ್ತಿಯನ್ನು ಹೆಚ್ಚಿಸಿರುತ್ತಾರೆ. ಒಟ್ಟಾರೆ ಶಾಲೆಯ ಫಲಿತಾಂಶ 100% ಆಗಿರುತ್ತದೆ. 95% ಕ್ಕಿಂತ ಹೆಚ್ಚು ಅಂಕ ಪಡೆದ ಒಟ್ಟು ವಿದ್ಯಾರ್ಥಿಗಳು 68, ಡಿಸ್ಟಿಂಕ್ಷನ್ ಪಡೆದ ಒಟ್ಟು ವಿದ್ಯಾರ್ಥಿಗಳು 110. ವಿವಿಧ ವಿಷಯಗಳಲ್ಲಿ ಪ್ರತಿಶತ ಪಡೆದ ವಿದ್ಯಾರ್ಥಿಗಳು 80.

ತೇಜಸ್ವಿನಿ ಪ್ರಕಾಶ 97.76, ಸಾಯಿನಾಥ ವಿಶ್ವನಾಥ 97.60, ಸರಸ್ವತಿ ಮಚಿಂದ್ರ 97.44, ತೇಜಸ್ವಿನಿ ನಿವರ್ತಿ ಮತ್ತು ವೈಷ್ಣವಿ ಉಮೇಶ 97.28, ಪ್ರಾಪ್ತಿ ದೀಪಕ 97.12, ವೇದಾಂತ ನಿತಿನ ಮತ್ತು ವಿಶಾಲ ಸುಧಾಕರ 96.96, ಹರಿಕಿರಣ ಹಣಮಂತ 96.48, ಓಂಶಂಕರ ರಾಮಶೆಟ್ಟಿ ಮತ್ತು ವಿಘ್ನೇಶ ಶಿವಕುಮಾರ 96.32, ದಿವ್ಯಾ ಪ್ರಮೋದ, ನಂದಿನಿ ಪ್ರಭು ಮತ್ತು ಅರ್ಪಿತಾ ಮಹೇಶ 96.16, ಅಮುಲ್ಯ ರಾಚಯ್ಯ, ದಿವ್ಯಾ ಸಂತೋಷ ಮತ್ತು ರುಚಿಕಾ ಸಂತೋಷ 96.00, ಗಣೇಶ ವಿಶ್ವನಾಥ ಮತ್ತು ಸಾಕ್ಷಿ ಜ್ಞಾನೋಬಾ 95.68, ಶಿವಕುಮಾರ ಅಶೋಕ 95.52, ಉದಯಕುಮಾರ ನಾಗನಾಥ 95.36, ಸಾಕ್ಷಿ ನಾರಾಯಣ ಮತ್ತು ಅಂಕಿತ ಶಿವರಾಜ 95.20, ವಿನಿತ ತಾನಾಜಿ, ಪ್ರಜಕ್ತಾ ಸಂತೋಷ ಮತ್ತು ರತಿಕ ವಿರೇಶಕುಮಾರ 94.88, ಸಿದ್ಧಿ ವಿಜಯಕುಮಾರ 94.40, ನಿಶಾ ಬಸವರಾಜ, ಉಜ್ವಲ ಉಮೇಶ ಮತ್ತು ವರ್ಷಾ ಸತೀಶ 94.08, ಎಮ್.ಡಿ.ದಾವುದ ಶೇಖ್ ಫಹೀಮ 93.76, ಗೌರೀಶ ಮಲ್ಲಿಕಾರ್ಜುನ 93.60, ಮಾಧವ ರಾಮ, ನಾಗೇಶ್ವರಿ ಅನಿಲಕುಮಾರ ಮತ್ತು ನರಸಿಂಹ ವಿಜಯಕುಮಾರ 93.44, ಸಾಹಿಲ ಶ್ರೀನಿವಾಸ, ಶ್ರೀಕಾಂತ ಉಮೇಶ, ಶೇಖ್ ಫುರ್ಖಾನ್ ಮತ್ತು ಶೇಖ್ ಸಾದಿಯಾ 93.28, ದರ್ಶನ ದಶರಥ, ಪ್ರಾಚಿ ವಸಂತ ಮತ್ತು ಮೋಹಿತ್ ಪ್ರಮೋದ 93.12, ಸವಿತಾ ಜೀವನ ಮತ್ತು ಜಗದೀಶ ರಾಜಕುಮಾರ 92.96, ಸಂಗಮೇಶ ದಿಲಿಪ ಮತ್ತು ವೈಷ್ಣವಿ ಓಂಪ್ರಕಾಶ 92.8, ವೈಷ್ಣವಿ ಬಸವರಾಜ 92.48, ಗಂಗಾವತಿ ಬಾಲಾಜಿ 92.32, ಬಾಲಾಜಿ ರಾಜಕುಮಾರ ಮತ್ತು ಪ್ರಜ್ವಲ ರವೀಂದ್ರ 92.00, ಗುಂಡಮ್ಮ ನೆಹರು, ಪವನ ನಾಗೇಂದ್ರ ಮತ್ತು ರಿತಿಕೇಶ ರಾಮ 91.68, ವೈಷ್ಣವಿ ವಿಲಾಸಕುಮಾರ 91.36, ಗುರುಪ್ರಸಾದ ರವಿ, ಸಿದ್ಧೇಶ್ವರ ಧೋಂಡಿರಾಮ ಮತ್ತು ಸುದೀಪ ಸೂರ್ಯಕಾಂತ 90.88, ಪ್ರಣವ ಜ್ಞಾನೇಶ್ವರ, ಸುಷ್ಮಿತಾ ಯಾದವರಾವ ಮತ್ತು ಸಮೀಕ್ಷಾ ರಮೇಶ 90.72, ಗಾಯತ್ರಿ ಸಿದ್ಧಲಿಂಗಯ್ಯಾ 90.24, ಗಾಯತ್ರಿ ಲಕ್ಷ್ಮಣ ಮತ್ತು ನಿತೀನ ಸಂದೀಪ 90.08, ಸಾಕ್ಷಿ ಸತೀಶ ಮತ್ತು ಸುಮೇರಾ ಅಂಜುಮ 91.04 ಪ್ರತಿಶತ ಅಂಕ ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ.


ವಿದ್ಯಾರ್ಥಿಗಳ ಜೀವನದಲ್ಲಿ ಹತ್ತನೇ ತರಗತಿ ಶಿಕ್ಷಣ ಅತ್ಯಂತ ಮಹತ್ವದ ಘಟ್ಟ. ಈ ಹಂತದಲ್ಲಿ ಅವರು ಪಡುವ ಪರಿಶ್ರಮ ಮತ್ತು ತೆಗೆದುಕೊಳ್ಳುವ ನಿರ್ಧಾರ ವಿದ್ಯಾರ್ಥಿಗಳ ಜೀವನಕ್ಕೆ ಭದ್ರ ಬುನಾದಿಯನ್ನು ನೀಡುತ್ತದೆ ಮತ್ತು ಬೌದ್ಧಿಕ ಬೆಳವಣಿಗೆಗೆ ಅವಕಾಶಗಳನ್ನು ತೆರೆದಿಡುವ ಮೂಲಕ ಅವರ ಸರ್ವಾಂಗೀಣ ವಿಕಾಸಕ್ಕೆ ವೇದಿಕೆಯನ್ನು ಕಲ್ಪಿಸಿಕೊಡುತ್ತದೆ. ಇದರ ಮೂಲಕ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸಹಾಯಕವಾಗುತ್ತದೆ ಎಂದು ಸಂಸ್ಥೆಯ ಸಂಸ್ಥಾಪಕರಾದ ವಾಯ್. ಮಾಧವರಾವ ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿರುತ್ತಾರೆ. ಸಂಸ್ಥೆಯ ಅಧ್ಯಕ್ಷರಾದ ಶ ಮಸ್ತಾನವಲಿ, ಮುಖ್ಯೋಪಾಧ್ಯಾಯರಾದ ಧನರಾಜ್ ನೀಲಂಗೆ ಅವರು ವಿದ್ಯಾರ್ಥಿಗಳ ಅಮೋಘ ಸಾಧನೆಗೆ ಅಭಿನಂದನೆಯನ್ನು ಸಲ್ಲಿಸಿರುತ್ತಾರೆ.

ಡೈಮಂಡ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಶೇಖ್ ಗೌಸಿಯಾ, ಮುಖ್ಯ ಆಡಳಿತಾಧಿಕಾರಿಗಳಾದ ಅಶ್ವಿನ ಭೋಸ್ಲೆ, ಆಡಳಿತಾಧಿಕಾರಿಗಳಾದ ರಾಮ ಕನಸೆ, ಸುಜಾತಾ ಪಾಟೀಲ, ಸ್ವಪ್ನಾಲಿ ಖಾಶೆಂಪುರೆ ಹಾಗೂ ಎಲ್ಲಾ ಶಿಕ್ಷಕರು, ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿರುತ್ತಾರೆ.



**ಹುಣಸೂರು ತಾಲೂಕಿನ ದರ್ಗಾ ರತ್ನಪುರಿ ಓಂ ಶ್ರೀ ಸಾಯಿ ಪಬ್ಲಿಕ್ ಸ್ಕೂಲ್ ನಾ ವಿದ್ಯಾರ್ಥಿ 596 ಅಂಕದೊಂದಿಗೆ ಶಾಲೆ ಗೆ ಟಾಪರ್ ಆಗಿದ್ದು ವಿದ್ಯಾರ್ಥಿಗೆ ಸಾಮಿಲ್ ಪಿ ಎಸ್ ಪಡದ ಅಂಕೆಗಳಿಗೆ ಹಾಗೂ ಮುಖ್ಯೋಪಾಧ್ಯಾಯರು ಆದಂತಹ ರಾಜೇಶ್ವರಿ ಕಾರ್ಯದರ್ಶಿ ದಿಲೀಪ್ ಆನಂದ್ ಹಾಗೂ ಶಾಲೆಯ ಶಿಕ್ಷಕರು ಹಾಗೂ ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು ಈ ಸಂದರ್ಭದಲ್ಲಿ ತಾಲೂಕಿನ ವಕ್ ಬೋರ್ಡ್ ಸಲಹಾ ಸಮಿತಿಯ ಸದಸ್ಯರಾದ ಹಾಗೂ ಗ್ರಾಮಸ್ಥರಾದ ಅಜ್ಗರ ಪಾಷಾ ಗ್ಯಾರೆಂಟಿ ಯೋಜನೆಯ ಸಮಿತಿ ಸದಸ್ಯರಾದ ಸಂಜಯ್ ಸಿಂಗ್ ದೀಪು ಹಾಗೂ ಇನ್ನಿತರ ಹಾಜರಿದ್ದರು.**

# ನಿವೇದಿತ ಶಾಲೆಗೆ ಮತ್ತೊಮ್ಮೆ ಉತ್ತಮ ಫಲಿತಾಂಶ







• **ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ**

ಪ್ರಸಕ್ತ ಶೈಕ್ಷಣಿಕ 2025-26ನೇ ಸಾಲಿನ 10ನೇ ತರಗತಿಯ ಫಲಿತಾಂಶ ಪ್ರಕಟಗೊಂಡಿದ್ದು, ಕಂಪ್ಲಿ ಭಾಗದಲ್ಲಿ ಕಳೆದ ವರ್ಷ ನಿವೇದಿತಾ ಆಂಗ್ಲ ಮಾಧ್ಯಮ ಶಾಲೆ ಭಾರೀ ಸದ್ದು ಮಾಡುತ್ತು. ಈ ವರ್ಷವೂ ಕೂಡ ನಿವೇದಿತ ಆಂಗ್ಲ ಮಾಧ್ಯಮ ಶಾಲೆಯು ಶೇಕಡಾ 94.73% ರಷ್ಟು ಫಲಿತಾಂಶದೊಂದಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುವ ಮೂಲಕ ಶೈಕ್ಷಣಿಕ ವರ್ಷದಲ್ಲಿ ಹತ್ತನೇ ತರಗತಿಯಲ್ಲಿ ಕಳೆದ ವರ್ಷ 9ನೇ ವರ್ಷಗಳ ಅತ್ಯುತ್ತಮ ಪಲಿತಾಂಶವನ್ನು ಪಡೆದುಕೊಂಡಿತ್ತು.

ಆದೆ ರೀತಿ ಈ ವರ್ಷವೂ ಕೂಡ ನಿವೇದಿತ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಈ ವರ್ಷ 10ನೇ ತರಗತಿಯ ಒಟ್ಟು 19 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಡಿಸ್ಟಿಂಕ್ಷನ್-02 ಪ್ರಥಮ ದರ್ಜೆ-13 ದ್ವಿತೀಯ-02 ತೃತೀಯ-1 ರೊಂದಿಗೆ ಅತ್ಯುತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದು ವಿಶೇಷವಾಗಿದೆ. ಇನ್ನು ನಾಲ್ಕು ವಿದ್ಯಾರ್ಥಿಗಳು ಮಾತ್ರ ತಲಾ ದ್ವಿತೀಯ ಭಾಷೆ ಕನ್ನಡ 100/100 ಒಬ್ಬ ವಿದ್ಯಾರ್ಥಿ ಹಿಂದಿ 100/100 ವಿಷಯದಲ್ಲಿ ಅನುತ್ತೀರ್ಣರಾಗಿ ಶೇಕಡಾ ಶಾಲೆಗೆ ಶೇಕಡಾ 94.73% ರಷ್ಟು ಫಲಿತಾಂಶ ನೀಡಿದ್ದಾರೆ.

ಇದರಲ್ಲಿ ಪ್ರಥಮ ಸ್ಥಾನ ಕೆ. ವಿ.ಪ್ರಜ್ವಲ್ 599(625) 95.64% (ಕಂಪ್ಲಿ), ದ್ವಿತೀಯ ಸ್ಥಾನ ತೇಜಸ್ 577(625) 92.32%(ಸಣಾಪುರ), ತೃತೀಯ ಸ್ಥಾನ ಕೆ ಸಾಯಿ ಚರಣ್ 522(625) 83.52% (ನಂ.2 ಮುದ್ದಾಪುರ), ಚತುರ್ಥಿ ಸ್ಥಾನ ಮಹಮದ್ ಸಲೀಂ 522(625) 83.52% (ಎಮ್ಮಿಗನೂರು), ಕಡೆಮನೆ ಮಾಬು ಸುಭಾನಿ 504(625) 80.64% (ಇಟ್ಟಗಿ ), ಐದನೇ ಸ್ಥಾನ ಪಡೆಯುವುದರ ಮೂಲಕ ನಿವೇದಿತಾ ಆಂಗ್ಲ ಮಾಧ್ಯಮ ಶಾಲೆಗೆ ಹಾಗೂ ಪೋಷಕರಿಗೆ ಕೀರ್ತಿ ತಂದಿದ್ದಾರೆ ಎಂದು ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿಯವರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಶ್ರೀ ಮಾತಾ ಮೊಂಟಸರಿ ವಿದ್ಯೆ ಸಂಸ್ಥೆ (ರಿ) ಕಾರ್ಯದರ್ಶಿ ಶ್ರೀಯುತ ಕೆ ರಾಮು ಹಾಗೂ ಅಧ್ಯಕ್ಷರಾದ ಹೆಚ್ ಮರಿಯಪ್ಪ ಮತ್ತು ಮುಖ್ಯ ಶಿಕ್ಷಕಿಯಾದ ಎಂ ಪುಷ್ಪಾ ಸಂತಸ ಹಂಚಿಕೊಂಡಿದ್ದು, ಗ್ರಾಮೀಣ ಭಾಗದಲ್ಲಿ ಅತ್ಯುತ್ತಮ ಹಾಗೂ ಮೌಲ್ಯಯುತ ಶಿಕ್ಷಣವನ್ನು ಗ್ರಾಮೀಣ ವಿದ್ಯಾರ್ಥಿಗಳಿಗೆ ನೀಡುವ ಮೂಲಕ ಯಶಸ್ಸು ಸಿಕ್ಕಿರುವುದು ಬಹಳ ಸಂತೋಷ ನೀಡಿದೆ. ಶೇಕಡಾ 94.73% ರಷ್ಟು ಫಲಿತಾಂಶ ಗಳಿಸುವಲ್ಲಿ ಹಗಲಿರುಳು ಶ್ರಮಿಸಿದ ವಿದ್ಯಾರ್ಥಿಗಳಿಗೆ, ಪ್ರಾಂಶುಪಾಲ ರಿಗೂ, ಎಲ್ಲಾ ಭೋದಕ ಮತ್ತು ಸಿಬ್ಬಂದಿ ವೃಂದದವರಿಗೆ ಈ ಮೂಲಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯಗುರುಗಳು ಶಿಕ್ಷಕರು ಸಿಬ್ಬಂದಿ ವರ್ಗದವರು ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಜಾಗೃತಿಗಾಗಿ KRS ಪಕ್ಷದ ರೈತ ಚೈತನ್ಯ ಯಾತ್ರೆ

• **ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ**

ಕರ್ನಾಟಕ ರಾಷ್ಟ್ರ ಸಮಿತಿ (KRS) ಪಕ್ಷದ ರಾಜ್ಯ ರೈತ ಘಟಕದ ವತಿಯಿಂದ ಗಂಗಾವತಿ ತಾಲೂಕಿನಲ್ಲಿ ರೈತರ ಹಕ್ಕುಗಳು ಮತ್ತು ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ "ರೈತ ಚೈತನ್ಯ ಯಾತ್ರೆ" ಎರಡು ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು.

ಯಾತ್ರೆಗೆ ಜಗಜ್ಯೋತಿ ಬಸವೇಶ್ವರರ ಮೂರ್ತಿಗೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮವನ್ನು ಆರಂಭಿಸಲಾಯಿತು. ನಂತರ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಯಾತ್ರೆ ಸಾಗುತ್ತಿದ್ದು, ರೈತರೊಂದಿಗೆ ನೇರವಾಗಿ ಸಂವಾದ ನಡೆಸಿ ಅವರ ಸಮಸ್ಯೆಗಳನ್ನು ಆಲಿಸಲಾಗುತ್ತಿದೆ.

ಈ ಯಾತ್ರೆಯನ್ನು ಉದ್ದೇಶಿಸಿ ಮಾತನಾಡಿದ ರಾಜ್ಯ ರೈತ ಘಟಕದ ಕಾರ್ಯದರ್ಶಿ ನಿರುಪಾದಿ ಕೆ ಗೋಮರ್ಸಿ ರೈತರ ಸಂಕಷ್ಟಗಳನ್ನು ಜನಸಾಮಾನ್ಯರಿಗೆ ತಲುಪಿಸುವುದು, ಬೆಳೆಗಳಿಗೆ



ನ್ಯಾಯಸಮ್ಮತ ಬೆಲೆ, ನೀರಾವರಿ ಸೌಲಭ್ಯ, ಸಾಲ ಮನ್ನಾ ಸೇರಿದಂತೆ ವಿವಿಧ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರಿಸುವುದಾಗಿದೆ. ಯಾತ್ರೆಯ ವೇಳೆ ಕೃಷಿ ಕ್ಷೇತ್ರದ ಸಮಸ್ಯೆಗಳ ಕುರಿತು ವಿವರವಾಗಿ ಚರ್ಚಿಸಲಾಗುತ್ತಿದ್ದು, ರೈತರನ್ನು ಸಂಘಟಿತವಾಗಿ ಹೋರಾಟಕ್ಕೆ ಸಜ್ಜುಗೊಳಿಸಲಾಗುತ್ತಿದೆ.

KRS ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು, ರೈತ ಸಮುದಾಯದಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಮುಂದಿನ ದಿನಗಳಲ್ಲಿಯೂ ಯಾತ್ರೆ ತಾಲೂಕು ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಮುಂದುವರಿಯಲಿದೆ.

# ಚನ್ನಬಸವೇಶ್ವರ ಶಾಲೆಗೆ 100ರಷ್ಟು ಫಲಿತಾಂಶ

• **ಪರಶುರಾಮ ಕರಣಂ, ಭಾಲ್ಕಿ**

ತಾಲ್ಲೂಕಿನ ಚನ್ನಬಸವೇಶ್ವರ ಗುರುಕುಲ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಕರಣ್ ಶಿವಕುಮಾರ್ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ 613 (98.08%) ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾನೆ ಎಂದು ಪ್ರಾಚಾರ್ಯ ರಂಗಾರೆಡ್ಡಿ ತಿಳಿಸಿದ್ದಾರೆ.



ಪರೀಕ್ಷೆಗೆ ಹಾಜರಾದ 93 ವಿದ್ಯಾರ್ಥಿಗಳಲ್ಲಿ 59 ವಿದ್ಯಾರ್ಥಿಗಳು ಅಗ್ರ ಶ್ರೇಣಿಯಲ್ಲಿ, 33 ಪ್ರಥಮ ದರ್ಜೆ, 1 ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದು, ಶಾಲೆಯ ಫಲಿತಾಂಶ 100 ರಷ್ಟು ಆಗಿದೆ.

ಸಾಧಕ ವಿದ್ಯಾರ್ಥಿಗಳ ವಿವರ: ಅರ್ಪಿತ್ ನಾಗಪ್ಪ, ಶ್ರೀಶೈಲ ಲಕ್ಷ್ಮಣ ಶೇ. 97.60, ವರುಣ ಸಂತೋಷ (97.28), ಸರ್ವೇಶ ಸಂತೋಷ (97.12), ವಿಷ್ಣು ರಾಮರತ್ನ (96.96), ಸಂಗಮೇಶ ಪ್ರವೀಣ್‌ಕುಮಾರ (96.80), ಅಭಿಷೇಕ ಶಿವಾನಂದ (96.64), ಪ್ರತಿಭಾ ರಾಜ್‌ಕುಮಾರ (96.32), ನಿಖಿಲ್ ಸಂಗಮೇಶ, ರಶ್ಮಿ ರಾಜಶೇಖರ, ಶ್ರೀಶಾಂತ ರಾಜೇಂದ್ರ 95.68, ಆದಿತ್ಯ ಚಂದ್ರಶೇಖರ, ಲಾವಣ್ಯ ಮಹೇಂದ್ರ ರೆಡ್ಡಿ, ಸಂಜೀತ ರಾವ್ ಯಶವಂತ ರಾವ್ ಮತ್ತು ವಿಘ್ನೇಶ ಆನಂದ್ ಕುಮಾರ ಅವರು ತಲಾ 95.36, ಶಾಂಭವಿ ಮಹಾಂತೇಶ (95.04) ಸರ್ವೇಶ್ ಜಗನಾಥ್ (94.72) ಶಿವಶಂಕರ ರೆಡ್ಡಿ ನರಸರೆಡ್ಡಿ (94.40), ದೀಕ್ಷಿತಾ ಶಿವಕುಮಾರ್ (94.24), ಗೌರಿಶಂಕರ್ ವಿಜಯಕುಮಾರ್ ಮತ್ತು ಪ್ರಜ್ವಲ್ ಅಶೋಕ್ (94.08), ಲಕ್ಷ್ಮೀಪುತ್ರ ನಾಗರಾಜ್ (93.76), ಸಾಧನಾ ರಾಜ್‌ಕುಮಾರ್ (93.28), ವೆಂಕಟೇಶ್ ಶಶಿಧರ್ (93.28), ಪ್ರೀತಿ ರಾಜ್‌ಕುಮಾರ್ (93.12) ಹಾಗೂ ಕರಣ್ ಶ್ಯಾಮರಾವ್ (92.96) ಕೂಡ ಪ್ರಶಂಸನೀಯ ಫಲಿತಾಂಶ ಗಳಿಸಿದ್ದಾರೆ.

ಇನ್ನೂ ಅಶ್ವಿನ್ ಧನರಾಜ್ (92.80), ಸಿದ್ದಾಂತ ಸಂತೋಷ್ (92.32), ಪಂಕಜ್ ಆನಂದ್ (91.84), ಕೆ. ವಿಕಾಸ್ ಶಿವಕುಮಾರ್ (91.68) ಅಂಕ ಪಡೆದು ಶಾಲೆಯ ಗೌರವ ಹೆಚ್ಚಿಸಿದ್ದಾರೆ.

# ಡೋಣಿ ನದಿ ಹೂಳು ತಗೆಯುವಲ್ಲಿ ಭಾರಿ ಗೋಲ್‌ಮಾಲ್: ಪರಿಹಾರಕ್ಕಾಗಿ ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ ವಿಜಯಪುರ**

ಡೋಣಿ ನದಿಯನ್ನು ಸರಿಯಾಗಿ ಮೂಲ ನಕಾಶೆಯಂತೆ ಭೂ-ಮಾಪನ ಮಾಡಿಸಿ, ಶಾಶ್ವತ ಪರಿಹಾರಕ್ಕಾಗಿ ತಡೆಗೋಡೆ ನಿರ್ಮಿಸಿ, ಅಕ್ಕಪಕ್ಕದಲ್ಲಿ ದೊಡ್ಡ ಬೇರುಗಳ ಮರ ಅಥವಾ ಬಿದಿರುಗಳನ್ನು ನೆಟ್ಟು ಯೋಜನೆ ಪೂರ್ಣಗೊಳಿಸಿ ಡೋಣಿ ನದಿಯಿಂದ ನಷ್ಟಗೊಂಡ ರೈತರಿಗೆ ಪರಿಹಾರ ನೀಡಬೇಕು ಮತ್ತು ಸಾರವಾಡ ಗ್ರಾಮ ಮುಳಗಡೆ ಆಗುವ ಸಂಭವವಿರುತ್ತದೆ, ಸಾರ್ವಜನಿಕ ಆಸ್ತಿ ಪಾಸ್ತಿ ಹಾಗಾದಲ್ಲಿ ಜಿಲ್ಲಾಡಳಿತವೇ ನೇರ ಹೊಣೆಯಾಗುತ್ತದೆ ಎಂದು ಜಿಲ್ಲಾಧಿಕಾರಿಗಳಿಗೆ ಕನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ವತಿಯಿಂದ ಮನವಿ ಸಲ್ಲಿಸಲಾಯಿತು.

ಹೌದು ಹಸಿರು ಸೇನೆಯ ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅವರು ಮಾತನಾಡುತ್ತಾ ಡೋಣಿ ನದಿಗೆ ಅಂದಾಜು 10 ಕೋಟಿ ವೆಚ್ಚದಲ್ಲಿ 5 ಕಡೆ ಹೂಳು ತೆಗೆಯುತ್ತಿರುವುದು ಕೇವಲ ತಾತ್ಕಾಲಿಕವಾಗಿ



ಕಾಮಗಾರಿ ಹೆಸರಲ್ಲಿ ಬಿಲ್ ಎತ್ತುವ ಕೆಲಸ ನಡೆದಿದೆ ಎಂದು ಆರೋಪಿಸಿದರು , ಸಾರವಾಡದ ಸಮೀಪ ಅನೇಕ ರೈತರ ಜಮೀನುಗಳಲ್ಲಿ ರೈತರಿಗೆ ತಿಳಿಸದೇ ಮನಸ್ಸೋ ಇಚ್ಚೆ ಅವರ ಜಮೀನುಗಳಲ್ಲಿ ಮುಳ್ಳು ಕಂಠಿ ಕಡಿದು, ದೊಡ್ಡ ದೊಡ್ಡ ತೆಗ್ಗು ತಗೆಯುತ್ತಿದ್ದು, ಡೋಣಿ ತನ್ನ ದಿಕ್ಕನ್ನು ಬಿಟ್ಟು ಬೇರೆಡೆ ಹರಿಯುವುದರಿಂದ ರೈತರು ಫಲವತ್ತಾದ ಭೂಮಿ ಕಳೆದುಕೊಳ್ಳುತ್ತಿದ್ದಾರೆ ಎಂದರು. ಕೂಡಲೇ ಡೋಣಿ ನದಿಯ ಸರಕಾರಿ ಮೂಲ ನಕಾಶೆಯನ್ನು ನೋಡಿ ಅದರಂತೆ ಅಕ್ಕಪಕ್ಕದ ರೈತರೊಂದಿಗೆ ಸಭೆ ಮಾಡಿ ಹದ್ದುಬಸ್ತ ಮಾಡಿ, ಜಂಗಲ ಕಟಿಂಗ್ ಮಾಡಿ, ನಂತರದಲ್ಲಿ ಕಲ್ಲಿನಿಂದ ತಡೆಗೊಡೆ ನೀರ್ಮಿಸಬೇಕು, ಮತ್ತು ನ್ಯಾಶನಲ್ ಬಂಬು ಮಿಷನ್ ಅಡಿಯಲ್ಲಿ ಡೋಣಿಯ 2 ಬದಿಗಳಲ್ಲಿ ಬೀದಿರನ್ನು ಹಚ್ಚುವುದರಿಂದ ಈ ಯೋಜನೆ ಶಾಶ್ವತವಾಗಿ ಮತ್ತು ಅಕ್ಕಪಕ್ಕದ ರೈತರ ಜಮೀನುಗಳಲ್ಲಿ ನೀರು ನುಗ್ಗದೇ ತಡೆಯಬಹುದಾಗಿದೆ ಎಂದರು.

ಈ ಕುರಿತು ಹಲವಾರು ಭಾರಿ ಜಿಲ್ಲಾಡಳಿತ, ಉಸ್ತುವಾರಿ ಸಚಿವರು, ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರೂ ಇಲ್ಲಿಯವರೆಗೆ ನ್ಯಾಯ ಸಿಕ್ಕಿಲ್ಲ, ಆದ್ದರಿಂದ ಈ ಕಾಮಗಾರಿಯನ್ನು ನಿಲ್ಲಿಸಿ ಅವರ ಬಿಲ್‌ನ್ನು ತೆಡೆಹಿಡೆಯಬೇಕು, ನೋಂದ ರೈತರಿಗೆ ಪರಿಹಾರ ಕಲ್ಪಿಸಿ ಜೀವನಕ್ಕೆ ದಾರಿ ಮಾಡಿಕೊಡಬೇಕು. ಇಲ್ಲವಾದರೇ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಡೋಣಿ ನದಿ ರೈತರೊಂದಿಗೆ ಉಗ್ರ ಹೋರಾಟ ಮಾಡಲಾಗುವುದು ಎಂದರು.

ಈ ವೇಳೆ ರಾಮಪ್ಪ ಚಿಕ್ಕರೆಡ್ಡಿ ರೋಹನ ಬಾಲರೆಡ್ಡಿ, ರಂಗಪ್ಪ ನಾಟಿಕಾರ, ಸಿದ್ದಲಿಂಗಪ್ಪ ಕಟ್ಟಿಮನಿ, ಸುಹಾಸ ಯಾಳವಾರ ಸೇರಿದಂತೆ ಇನ್ನಿತರು ಉಪಸ್ಥಿತರಿದ್ದರು.

# ಆನಂದ ರಾಜ್ಯಕ್ಕೆ 2ನೇ ಟಾಪರ್..!



• **ಪರಶುರಾಮ ಕರಣಂ ಭಾಲ್ಕಿ**

ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಅಡಿಯಲ್ಲಿ ನಡೆಯುತ್ತಿರುವ ಶ್ರೀ ಚನ್ನಬಸವೇಶ್ವರ ಗುರುಕುಲ ಕರಡ್ಯಾಳ ವಿದ್ಯಾರ್ಥಿ ಕು. ಆನಂದ ಪಾಂಡುರಂಗ 624 ಅಂಕ ಪಡೆದು ರಾಜ್ಯಕ್ಕೆ ದ್ವಿತೀಯ ರ‍್ಯಾಂಕ್ ಪಡೆದಿದ್ದಾನೆ. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಪೂಜ್ಯ ಶ್ರೀ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೂಜ್ಯ ಗುರುಬಸವ ಪಟ್ಟದ್ದೇವರು ವಿದ್ಯಾರ್ಥಿಗೆ ಆಶೀರ್ವದಿಸಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ತಂದೆ-ತಾಯಿಯ ಸಹಕಾರ ಹಾಗೂ ಶಿಕ್ಷಕ ಸಿಬ್ಬಂದಿಯವರ ಪರಿಶ್ರಮ ಅಗಾಧವಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಪೂಜ್ಯ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ನುಡಿದರು. ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು, ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು, ಪೂಜ್ಯ ಶ್ರೀ ಮಹಾಲಿಂಗ ಸ್ವಾಮಿಗಳು, ಆಡಳಿತಾಧಿಕಾರಿ ಮೋಹನರೆಡ್ಡಿ, ಬಸವರಾಜ ಮೋಳಕೆರೆ ಹಾಗೂ ಮುಖ್ಯಗುರುಗಳಾದ ಮಹೇಶ ಮಹಾರಾಜ, ಶಿಕ್ಷಣ ಸಂಯೋಜಕರಾದ ಪ್ರವೀಣ ಖಂಡಾಳೆ ಹಾಗೂ ಮಹೇಶ ಕುಲಕರ್ಣಿ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

## ಶಾಲೆಯ ಫಲಿತಾಂಶ ನೂರಕ್ಕೆ ನೂರು..!

**ಒಟ್ಟು 294 ವಿದ್ಯಾರ್ಥಿಗಳು ಪರೀಕ್ಷೆ ಪಡೆದಿದ್ದು, ಅಗ್ರಶ್ರೇಣಿಯಲ್ಲಿ 137, ಪ್ರಥಮ 157 ವಿದ್ಯಾರ್ಥಿಗಳು ಪ್ರಥಮ ರ‍್ಯಾಂಕ್ ಪಡೆದಿದ್ದು, ವಿಷಯವಾರು ಕನ್ನಡ ವಿಷಯದಲ್ಲಿ 10, ಇಂಗ್ಲಿಷ್ 08, ಹಿಂದಿ 69, ಗಣಿತ 02, ವಿಜ್ಞಾನ 01 ಹಾಗೂ ಸಮಾಜದಲ್ಲಿ 32 ವಿದ್ಯಾರ್ಥಿಗಳು ನೂರಕ್ಕೆ ನೂರ ಅಂಕ ಪಡೆದಿದ್ದಾರೆ. ಒಟ್ಟು ಶಾಲೆಯ ಫಲಿತಾಂಶ ನೂರಕ್ಕೆ ನೂರು ಬಂದಿದೆ.**

# ಎಸ್‌ಎಸ್‌ಎಲ್‌ಸಿ ಫಲಿತಾಂಶ; ಪಟ್ಟಣದ ಸಾಧಕ ವಿದ್ಯಾರ್ಥಿಗಳು

**ಕೆಂಭಾವಿ:** 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾಗಿದ್ದು, ಪಟ್ಟಣದ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಅನೇಕ ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಪಡೆಯುವ ಮೂಲಕ ಗಮನಾರ್ಹ ಸಾಧನೆ ಮಾಡಿದ್ದಾರೆ.

ಮುರಾರ್ಜಿ ದೇಸಾಯಿ ವಸತಿ ಶಾಲೆ: ವಿದ್ಯಾರ್ಥಿ ಪರಮಾನಂದ 625ಕ್ಕೆ 616 ಅಂಕಗಳನ್ನು ಪಡೆಯುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾನೆ. ವಿದ್ಯಾಲಕ್ಷ್ಮೀ ಶಾಲೆ: ಆಫಾಫ ಇಲಿಯಾಸ್ ವಡಕೇರಿ 625ಕ್ಕೆ 606 ಅಂಕ ಗಳಿಸಿ ಸಾಧನೆ ಮಾಡಿದ್ದಾಳೆ. ಸರ್ಕಾರಿ ಕನ್ಯಾ ಪ್ರೌಢಶಾಲೆ: ಮೀನಾಕ್ಷಿ ನಾಮದೇವ್ 625ಕ್ಕೆ 604 ಅಂಕಗಳನ್ನು ಪಡೆದು ಶಾಲೆಯ ಟಾಪರ್ ಆಗಿ ಹೊರಹೊಮ್ಮಿದ್ದಾಳೆ. ಹೊಲಿಪೇಥ್ ಸ್ಕೂಲ್: ನಿಶಾದ್ 625ಕ್ಕೆ 600 ಅಂಕಗಳನ್ನು ಗಳಿಸಿ ಸಾಧನೆ ಮಾಡಿದ್ದಾರೆ. ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಆಂಗ್ಲ ಮಾಧ್ಯಮ ಶಾಲೆ: ಬಿ.ಬಿ. ಹಾಜರ್ 625ಕ್ಕೆ 597 ಅಂಕಗಳನ್ನು ಪಡೆದಿದ್ದಾರೆ. ಮಾಲಗತ್ತಿ ಸರ್ಕಾರಿ ಪ್ರೌಢಶಾಲೆ: ಬೀರಣ್ಣ ದ್ಯಾವಣ್ಣ 625ಕ್ಕೆ 587 ಅಂಕಗಳನ್ನು ಗಳಿಸಿದ್ದಾರೆ. ಸರ್ಕಾರಿ ಉರ್ದು ಪ್ರೌಢಶಾಲೆ: ಶಾಹಿದಾ 625ಕ್ಕೆ 549 ಅಂಕಗಳನ್ನು ಪಡೆದು ಸಾಧನೆ ಮಾಡಿದ್ದಾಳೆ. ಸರ್ಕಾರಿ ಬಾಲಕರ ಪ್ರೌಢಶಾಲೆ: ಪ್ರಜ್ವಲ್ ಕೆಂಚಪ್ಪ 625ಕ್ಕೆ 529 ಅಂಕಗಳನ್ನು ಪಡೆದಿದ್ದಾರೆ. ಈ ಬಾರಿಯ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿ ಶಾಲೆಗೆ ಮತ್ತು ಪಟ್ಟಣಕ್ಕೆ ಹೆಸರು ತಂದ ವಿದ್ಯಾರ್ಥಿಗಳ ಸಾಧನೆಗೆ ಆಯಾ ಶಾಲೆಯ ಆಡಳಿತ ಮಂಡಳಿ, ಮುಖ್ಯಗುರುಗಳು, ಶಿಕ್ಷಕ ವೃಂದ ಹಾಗೂ ಪಾಲಕ-ಪೋಷಕರು ಹರ್ಷ ವ್ಯಕ್ತಪಡಿಸಿ,




Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)